ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ತಿರುವನಂತಪುರಂನಲ್ಲಿ ಭಾನುವಾರ ವೆಸ್ಟ್ ಇಂಡೀಸ್ ವಿರುದ್ಧ ನಡೆದ ಮೊದಲ ಪಂದ್ಯದಲ್ಲಿ ಭರ್ಜರಿ ಶತಕ (110 ರನ್) ಗಳಿಸಿದ ಭಾರತ ತಂಡದ ನಾಯಕ ಶುಭಮನ್ ಗಿಲ್ ಸಂಭ್ರಮಿಸಿದ ಕ್ಷಣ...

28 ಸೆಪ್ಟೆಂಬರ್, 2026 ಸೋಮವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -197 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629


ಅವಳಿಗೆ ಇಡ್ಲಿ ಇಷ್ಟ, ಆದರೆ, ಪಾತ್ರೆ ತೊಳೆಯೋದು ಕಷ್ಟ » 2


ಅ.1ರಿಂದ ಗ್ರಾಹಕರಿಗೆ ಬೆಲೆ ಏರಿಕೆ ಬಿಸಿ » 3


ಸಾಲ ಮನ್ನಾ ಮಾಡಲೆಂದೇ ಪಾಲಿಗ ಳೊಂದಿಗೆ ಸರ್ಕಾರ ಮಾಡಿದೆ » 4

# ಬರ ಪರಿಹಾರ: ಇಂದು ದೆಹಲಿಗೆ ಡಿ.ಕೆ.ಶಿ.

## ಸರ್ವಪಕ್ಷ ನಿಯೋಗ ಭೇಟಿಗೆ ಸಮಯ ಕೋರಿಕೆ ಸಾಧ್ಯತೆ | ಹೈಕಮಾಂಡ್ ಭೇಟಿಗೂ ಸಿದ್ಧತೆ

• ಪ್ರಜೋದಯ ವರದಿ

**ಬೆಂಗಳೂರು:** ತೀವ್ರ ಬರಗಾಲದಿಂದ ಸಂಕಷ್ಟಕ್ಕೆ ಸಿಲುಕಿರುವ ರಾಜ್ಯಕ್ಕೆ ಹೆಚ್ಚಿನ ಬರ ಪರಿಹಾರ ಘೋಷಿಸಬೇಕೆಂದು ಆಗ್ರಹಿಸಿರುವ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರಧಾನಿ ಮೋದಿ ಸರ್ವಪಕ್ಷ ನಿಯೋಗ ಭೇಟಿಗೆ ಸಮಯಾವಕಾಶ ನೀಡಬೇಕೆಂದು ಮನವಿ ಸಲ್ಲಿಸಲು ಸೆ.28ರ ಸೋಮವಾರ ದೆಹಲಿ ಪ್ರವಾಸ ಕೈಗೊಂಡಿದ್ದಾರೆ.

ರಾಜ್ಯದಲ್ಲಿ ಬರ ಪರಿಸ್ಥಿತಿ ತೀವ್ರವಾಗಿದ್ದು, 40 ಸಾವಿರ ಕೋ.ರೂ.ಗಳಿಗೂ ಅಧಿಕ ಬೆಳೆ ನಷ್ಟವಾಗಿದೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈಗಾಗಲೇ ಪ್ರಧಾನಿಗೆ ಪತ್ರ ಬರೆದು ಎನ್‌ಡಿಆರ್‌ಎಫ್ ನಿಯಮಾವಳಿಗಳ ಅನುಸಾರ 3,700 ಕೋ.ರೂ.ಗಳಿಗೂ ಹೆಚ್ಚಿನ ಮಧ್ಯಂತರ ಪರಿಹಾರ ನೀಡುವಂತೆ ಮನವಿ ಮಾಡಿದ್ದಾರೆ. ಆದರೆ ಅದಕ್ಕೆ ಕೇಂದ್ರದಿಂದ ಪ್ರತಿಕ್ರಿಯೆ ಬಂದಿಲ್ಲ.

ರಾಜ್ಯದಲ್ಲಿ 200ಕ್ಕೂ ಹೆಚ್ಚು ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಇದ್ದು,



ಈ ಸಂದರ್ಭದಲ್ಲಿ ರೈತರ ನೆರವಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಜಂಟಿಯಾಗಿ ಧಾವಿಸಬೇಕೆಂಬ ಒತ್ತಾಯಗಳಿವೆ. ಕೃಷಿ ಸಾಲ ಮನ್ನಾ ಮಾಡಬೇಕೆಂಬುದು ಪ್ರಮುಖ ಬೇಡಿಕೆ. ಸಾಲ ಮನ್ನಾ ಮಾಡಲು ಅಸಾಧ್ಯವಲ್ಲ, ಆದರೆ ಕೇಂದ್ರದ ಸಹಕಾರ ಅಗತ್ಯವೆಂಬುದು ರಾಜ್ಯ ಸರ್ಕಾರದ ನಿಲುವಾಗಿದೆ.

ದೇಶದಲ್ಲಿ 18 ರಾಜ್ಯಗಳಲ್ಲಿ ಬರ ಪರಿಸ್ಥಿತಿ ಇದೆ. ಈ ಬಾರಿಯ ಸೂಪರ್ ಎಲ್ ನಿನೊ ಎಲ್ಲಾ ಬರಗಳಿಗಿಂತಲೂ ಭಿನ್ನವಾಗಿದೆ. ವಿಶೇಷ ಪ್ರಕರಣ ಎಂದು ಪರಿಗಣಿಸಿ ಕೇಂದ್ರ ಸರ್ಕಾರ ರಾಜ್ಯಗಳಿಗೆ ತುರ್ತು ಪರಿಹಾರ ನೀಡಬೇಕು, ರೈತರ ಸಾಲಮನ್ನಾ ಮಾಡಲು ಸಹಕರಿಸಬೇಕೆಂಬುದು ರಾಜ್ಯ ಸರ್ಕಾರದ ಹಕ್ಕೊತ್ತಾಯವಾಗಿದೆ.

ಬರ ಮತ್ತು ಕಸ್ತೂರಿ ರಂಗನ್ ಕುರಿತು 4 ದಿನಗಳ ಕಾಲ ವಿಧಾನ ಮಂಡಲದಲ್ಲಿ ನಡೆದ ಚರ್ಚೆಯ ಬಳಿಕ ರಾಜ್ಯ ಸರ್ಕಾರ ಪ್ರತಿ ಎಕರೆ ಬೆಳೆ ನಷ್ಟಕ್ಕೆ 2,500 ರೂ. ನಷ್ಟ ಪಾವತಿಸುವುದಾಗಿ ಘೋಷಣೆ ಮಾಡಿದೆ. ಅದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ರಾಜ್ಯಕ್ಕೆ ಇನ್‌ಪುಟ್ ಸಬ್ಸಿಡಿ ನೀಡಬೇಕೆಂದು ರಾಜ್ಯದ ಆಗ್ರಹವಾಗಿದೆ.

ಜೊತೆಗೆ ಕಸ್ತೂರಿ ರಂಗನ್ ವರದಿ ಕುರಿತು ರಾಜ್ಯ ಸರ್ಕಾರ ಪ್ರಬಲ ವಿರೋಧ ವ್ಯಕ್ತಪಡಿಸಿದೆ. ಶಾಸನ ಸಭೆಯಲ್ಲಿ ಪಕ್ಷಾತೀತವಾಗಿ ವರದಿಯ ಪರಿಣಾಮಗಳ ಬಗ್ಗೆ ಆತಂಕ ವ್ಯಕ್ತಪಡಿಸಲಾಗಿದೆ. ವರದಿಯನ್ನು ಯಥಾವತ್ ಜಾರಿಗೊಳಿಸುವ ಬದಲಾಗಿ ಪರಿಷ್ಕರಣೆ ಮಾಡಬೇಕೆಂಬುದು ಶಾಸನಸಭೆಯಲ್ಲಿ ಕೇಳಿ ಬಂದ ಹಕ್ಕೊತ್ತಾಯ. ಈ ಕುರಿತು ವಿಧಾನಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಆದರೆ ಖುದ್ದಾಗಿ ಸರ್ವಪಕ್ಷ ನಿಯೋಗ ಪ್ರಧಾನಿಯವರನ್ನು ಮತ್ತು ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವರನ್ನು ಭೇಟಿ ಮಾಡಿ ತನ್ನ ನಿಲುವನ್ನು ವ್ಯಕ್ತಪಡಿಸಲು ಮುಂದಾಗಿದೆ. ಬೆಂಗಳೂರು ಸೇರಿ ರಾಜ್ಯದ ಇತರೆಡೆಗಳಲ್ಲಿ ಮೂಲಸೌಲಭ್ಯ ಅಭಿವೃದ್ಧಿಗಾಗಿ ಕೈಗೊಂಡಿರುವ ವಿವಿಧ ಯೋಜನೆಗಳಿಗೆ ಆರ್ಥಿಕ ನೆರವು, ರೈಲ್ವೆ ಯೋಜನೆಗಳಿಗೆ ಮೊದಲಿನಂತೆ ಶೇ. 75:25ರ ಅನುಪಾತದ ನೆರವು ಒಳಗೊಂಡು ಮತ್ತಿತರ ಬೇಡಿಕೆಗಳನ್ನು ಮಂಡಿಸಲು ರಾಜ್ಯ ಸರ್ಕಾರ ಮುಂದಾಗಿದೆ.

**ವಿರೋಧ ಪಕ್ಷಗಳ ಪಟ್ಟು**

ಸರ್ವಪಕ್ಷ ನಿಯೋಗದಲ್ಲಿ ಆಗಮಿಸುವಂತೆ ಡಿ.ಕೆ.ಶಿವಕುಮಾರ್ ವಿರೋಧ ಪಕ್ಷಗಳಿಗೆ ಆಹ್ವಾನ ನೀಡಿದ್ದಾರೆ. ಆದರೆ ರಾಜ್ಯ ಸರ್ಕಾರ ಕೇಂದ್ರದ ಮೇಲೆ ಹೆಚ್ಚು ಹೊಣೆಗಾರಿಕೆ ತಾನು ದೂರ ಉಳಿಯುವ ತಯಾರಿಯಲ್ಲಿದೆ. ರಾಜ್ಯ ಸರ್ಕಾರ ಪ್ರತಿ ಎಕರೆ ಬೆಳೆ ನಷ್ಟಕ್ಕೆ 25 ಸಾವಿರ ರೂ. ಪರಿಹಾರ ಘೋಷಿಸಬೇಕು ಹಾಗು ಬೆಳೆ ಸಾಲ ಮನ್ನಾ ಮಾಡಬೇಕೆಂದು ಬಿಜೆಪಿ ಮತ್ತು ಜೆಡಿಎಸ್ ಆಗ್ರಹಿಸಿವೆ.

### ಖರ್ಗೆ ಜೊತೆಗೆ ಸಿ.ಎಂ. ಸುದೀರ್ಘ ಚರ್ಚೆ

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭಾನುವಾರ ಭೇಟಿಯಾದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಹತ್ವದ ಚರ್ಚೆ ನಡೆಸಿದರು. ನಂತರ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು, ಎಸ್‌ಐಆರ್ ವಿಚಾರದಲ್ಲಿ ತುರ್ತು ಸಮಿತಿ ಸಭೆ ಕರೆದಿದ್ದು, ಈ ಸಂಬಂಧ ಖರ್ಗೆ ಅವರೊಂದಿಗೆ ಮಾತುಕತೆ ನಡೆಸಲಾಯಿತು. ಎಸ್‌ಐಆರ್ ಕುರಿತು ರಾಹುಲ್ ಗಾಂಧಿ ಮತ್ತು ಖರ್ಗೆ ಅವರು ಈ ಹಿಂದೆ ಹೇಳಿದ ಮಾತುಗಳು ಈಗ ಸತ್ಯವಾಗುತ್ತಿವೆ. ಚುನಾವಣೆಗಳು ಬಹಳ ಅಕ್ರಮವಾಗಿ ನಡೆದಿವೆ ಎಂಬುದಕ್ಕೆ ಸಾಕ್ಷಿ ದೊರೆಯುತ್ತಿದೆ. ಈ ಕುರಿತು ದೇಶದಾದ್ಯಂತ ಜನರಲ್ಲಿ ಜಾಗೃತಿ ಮೂಡಿದೆ. ಈ ವಿಚಾರದಲ್ಲಿ ಮುಂದಿನ ರೂಪುರೇಷೆಗಳ ಬಗ್ಗೆ ಚರ್ಚಿಸಲಾಯಿತು ಎಂದರು.

# ಗುಣಮಟ್ಟದ ಶಿಕ್ಷಣ ಶಿಕ್ಷಕರ ಆದ್ಯತೆಯಾಗಲಿ: ಸಚಿವ ಶಿವಲಿಂಗೇಗೌಡ



• ಪ್ರಜೋದಯ ವರದಿ

**ಅರಸೀಕೆರೆ:** ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವುದು ಶಿಕ್ಷಕರ ಮೊದಲ ಆದ್ಯತೆಯಾಗಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಹೇಳಿದರು.

ನಗರದ ಶ್ರೀ ಗುರುಸಿದ್ಧರಾಮೇಶ್ವರ ಸಮುದಾಯ ಭವನದಲ್ಲಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಜಯಂತಿ ಅಂಗವಾಗಿ ಭಾನುವಾರ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆಯಲ್ಲಿ ಮಾತನಾಡಿದ ಅವರು, ಕಾನ್ವೆಂಟ್ ವ್ಯಾಮೋಹಕ್ಕೆ ಒಳಗಾಗಿರುವ ಪಾಲಕರು ಮಕ್ಕಳನ್ನು ಖಾಸಗಿ ಶಾಲೆಗಳಿಗೆ ದಾಖಲಿಸುತ್ತಾರೆ. ಸರ್ಕಾರಿ ಶಾಲೆಗಳ ಉಳಿವಿಗಾಗಿ ಪ್ರಾಥಮಿಕ ಶಾಲಾ ಹಂತದಲ್ಲಿ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು ಎನ್ನುವ ಉದ್ದೇಶದಿಂದ ಕೆಪಿಎಸ್ ಶಾಲೆ ಆರಂಭಿಸಲಾಗಿದ್ದು ಉತ್ತಮ ಪ್ರತಿಕ್ರಿಯೆ ದೊರೆತಿದೆ. ಬದಲಾದ ವಿದ್ಯಮಾನದಲ್ಲಿ ಸರ್ಕಾರಿ ಹಾಗು ಕಾನ್ವೆಂಟ್‌ಗಳ ನಡುವೆ ಪೈಪೋಟಿ ನಡೆದಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ಮಾಡುವ ಶಿಕ್ಷಕರ ಹಿತ ಕಾಯಲು ಮನೆ ಕಟ್ಟಿಕೊಡಲು ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದ ವೇಳೆ ತೀರ್ಮಾನ ಮಾಡಿದ್ದರೂ ಕಾರ್ಯಗತವಾಗಲಿಲ್ಲ. ಸರ್ಕಾರಿ, ಅನುದಾನಿತ ಹಾಗು ಅನುದಾನ ರಹಿತ ಶಾಲೆಗಳಲ್ಲಿ ಶಿಕ್ಷಕರು ಒಂದಿಲ್ಲೊಂದು ಸಮಸ್ಯೆ ಎದುರಿಸುತ್ತಿದ್ದು ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಿದ್ದೇನೆ ಎಂದರು.

» ನಾಲ್ಕನೇ ಪುಟದಲ್ಲಿ

# ಶ್ರೀ ಕೃಷ್ಣನ ತತ್ವಾದರ್ಶ ಎಂದೆಂದಿಗೂ ಮಾದರಿ

## ಸಂಸದ ಶ್ರೇಯಸ್ ಪಟೇಲ್ ಅಭಿಮತ | ನಗರದಲ್ಲಿ ಕೃಷ್ಣ ಜಯಂತಿ

• ಪ್ರಜೋದಯ ವರದಿ

**ಹಾಸನ:** ಮಹಾಭಾರತ ಯುದ್ಧದಲ್ಲಿ ಅರ್ಜುನ ಅಸಹಾಯಕನಾದಾಗ ಕೃಷ್ಣ ಬೋಧಿಸಿದ ಭಗವದ್ಗೀತೆ ಜಗತ್ತಿನ ಅತ್ಯುನ್ನತ ತತ್ವಜ್ಞಾನ ಗ್ರಂಥವಾಗಿ ಪರಿವರ್ತನೆಯಾಯಿತು. ಅಂತಹ ಮೇಧಾವಿಯನ್ನು ಆರಾಧ್ಯ ದೈವ ಎಂದು ಹೇಳುವುದರಲ್ಲಿ ತಪ್ಪಿಲ್ಲವೆಂದು ಸಂಸದ ಶ್ರೇಯಸ್ ಪಟೇಲ್ ಅವರು ಹೇಳಿದರು.

ಹಾಸನಾಂಬ ಕಲಾಕ್ಷೇತ್ರದಲ್ಲಿ ಭಾನುವಾರ ನಡೆದ ಶ್ರೀ ಕೃಷ್ಣ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಎಂತಹ ಕಷ್ಟ ಬಂದರೂ ಭಗವಂತನ ಸ್ಮರಣೆ ಮಾಡಿದರೆ ಸಮಸ್ಯೆಗೆ ಪರಿಹಾರ ಸಿಗುತ್ತದೆಂಬ ನಂಬಿಕೆ ನಮ್ಮದು ಎಂದರು.

ವಿಧಾನ ಪರಿಷತ್ ಸದಸ್ಯ ಡಿ.ಟಿ. ಶ್ರೀನಿವಾಸ್ ಅವರು ಮಾತನಾಡಿ, ಸಮಾಜವನ್ನು ಕೈ ಹಿಡಿಯುವವರ ಹಿಂದೆ ಶ್ರೀ ಕೃಷ್ಣ ಪರಮಾತ್ಮ ಇದ್ದೇ ಇರುತ್ತಾನೆ. ಯಾದವ ಸಮುದಾಯದಲ್ಲಿ ಹುಟ್ಟಿದ ಶ್ರೀ ಕೃಷ್ಣ ದೇಶಕ್ಕೆ ಮಾದರಿಯಾಗಿದ್ದಾರೆ. ಆದರೆ, ಇತ್ತೀಚಿನ ದಿನಗಳಲ್ಲಿ ಶ್ರೀಕೃಷ್ಣರನ್ನು ರಾಜಕೀಯವಾಗಿ ಬಳಸಿಕೊಂಡು ಇಲ್ಲಸಲ್ಲದ ಆರೋಪಗಳು ಪ್ರತ್ಯಾರೋಪಗಳನ್ನು ಮಾಡುತ್ತಾರೆ. ಇದು ಒಳ್ಳೆಯ ಬೆಳವಣಿಗೆ ಅಲ್ಲವೆಂದರು.

ರಾಜ್ಯದಲ್ಲಿ ಗೊಲ್ಲ ಹಾಗು ಯಾದವ ಸಮುದಾಯವು ಲಕ್ಷಾಂತರ ಜನಸಂಖ್ಯೆಯನ್ನು ಹೊಂದಿದೆ. ಆದರೆ, ಇಂದಿಗೂ ಕೆಲವು ಕಡೆ ಮೂಲ ಸೌಕರ್ಯಗಳ ಕೊರತೆಯಿಂದ ಬಳಲುತ್ತಿದೆ. ನಮ್ಮ ಬೇಡಿಕೆಗಳ ಈಡೇರಿಕೆಗಾಗಿ ಒಗ್ಗಟ್ಟಿನ ಪ್ರದರ್ಶನ ಬಹಳ ಪ್ರಮುಖವಾಗಿದೆ. ಈ ನಿಟ್ಟಿನಲ್ಲಿ ತಮ್ಮ ಹಕ್ಕುಗಳಿಗಾಗಿ ಎಲ್ಲರೂ ಒಗ್ಗಟ್ಟಾಗಿ ಹೋರಾಟ ಮಾಡಬೇಕೆಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ. ಎಚ್.ಎಲ್.ಮಲ್ಲೇಶಗೌಡ ಅವರು ಮಾತನಾಡಿ, ಭಾರತೀಯ




ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ರಾಮಾಯಣ, ಮಹಾಭಾರತ ಶ್ರೇಷ್ಠ ಕಾವ್ಯಗಳು. ಜಗತ್ತಿನ ಎಲ್ಲಾ ಸ್ತ್ರೀಯರನ್ನು ಮೋಹಿಸುವ ವ್ಯಕ್ತಿತ್ವ ಶ್ರೀ ಕೃಷ್ಣನದ್ದು, ಕೃಷ್ಣನ ನಿಶಕಾಮ ಪ್ರೀತಿ ಪ್ರೇಮ ಬಿಟ್ಟರೆ ಜಗತ್ತಿನಲ್ಲಿ ಬೇರೆ ಎಲ್ಲೂ ಈ ರೀತಿಯ ಪ್ರೀತಿ ಸಿಗಲು ಸಾಧ್ಯವೇ ಇಲ್ಲವೆಂದು ತಿಳಿಸಿದರು.

ಭಾರತ ಖಂಡದ ಧರ್ಮ ಸಂಸ್ಕೃತಿ ಭಾರತಕ್ಕೆ ಮಾದರಿಯಾದವರು ಶ್ರೀ ಕೃಷ್ಣ. ಯುದ್ಧ ಪೂರ್ವದಲ್ಲಿನ ಕೃಷ್ಣ ಇಡೀ ಜಗತ್ತಿಗೆ ಗೊತ್ತು. ಆದರೆ ಯುದ್ಧ ನಂತರದ ಕೃಷ್ಣನ ಬಗ್ಗೆ ತಿಳಿಯುವುದು ತುಂಬಾ ಮುಖ್ಯವಾಗಿದೆ ಎಂದರು.

ಭಾರತೀಯ ಇತಿಹಾಸ ಮತ್ತು ಪುರಾಣಗಳಲ್ಲಿ ಕೃಷ್ಣನನ್ನು ಕೇವಲ ಒಬ್ಬ ದೇವರೆಂದು ಮಾತ್ರವಲ್ಲದೆ ಮಹಾನ್ ರಾಜತಾಂತ್ರಿಕ, ತತ್ವಜ್ಞಾನಿ ಮತ್ತು ಸಮಾಜ ಸುಧಾರಕನೆಂದು ಗೌರವಿಸಲಾಗುತ್ತದೆ. ಕೃಷ್ಣನ ಇಡೀ ಜೀವನದ ಅತ್ಯುನ್ನತ ಸಾಧನೆ ಎಂದರೆ ಮಾನವಕುಲಕ್ಕೆ ಭಗವದ್ಗೀತೆಯನ್ನು ಕೊಡುಗೆಯಾಗಿ ನೀಡಿದ್ದು ಎಂದರು.

ಅರಕಲಗೂಡು ಸರ್ಕಾರಿ ಪ್ರೌಢ ಶಾಲೆ ಮುಖ್ಯ ಶಿಕ್ಷಕ ಬಿ.ಡಿ. ಶಂಕರೇಗೌಡ ಅವರು ಮಾತನಾಡಿ, ಶ್ರೀ ಕೃಷ್ಣನಿಗೆ ಇರುವಂತಹ ಹೆಸರುಗಳು ಇತರ ಯಾವ ದೇವರಿಗೂ ಇಲ್ಲ. ಹುಟ್ಟಿನಿಂದಲೇ ತುಂಟಾಟಗಳಲ್ಲಿ ಹೆಸರಾಗಿ, ದನಗಳ ಕಾಯುತ್ತ ಗೊಲ್ಲನಾಗಿ, ಕೊಳಲು ಊದುವ ಮೂಲಕ ಪ್ರಸಿದ್ಧರಾಗಿ ಯೌವ್ವನದ ಪ್ರೀತಿ ಪ್ರೇಮಗಳಲ್ಲಿ ಹೆಸರುವಾಸಿಯಾದವರು ಶ್ರೀ ಕೃಷ್ಣ ಎಂದು ತಿಳಿಸಿದರು.

ಕೃಷ್ಣನ ವ್ಯಕ್ತಿತ್ವವು ಅತ್ಯಂತ ಆಕರ್ಷಕ ಮತ್ತು ಬಹುಮುಖಿಯಾದುದು. ಆತ ಬಾಲ ಲೀಲೆಗಳ ಮೂಲಕ ಯಶೋಧೆಗೆ ಆನಂದ ನೀಡಿದ ಪುಟ್ಟ ಕಂದ, ಗೋಪಿಕಾ ಸ್ತ್ರೀಯರ ಮನಗೆದ್ದ ಮುರಳಧರ, ಕಾಳಿಂಗ ಮರ್ದನ ಮಾಡಿದ ಧೀರ, ಕುಚೇಲನಿಗೆ ನೆರವಾದ ಅಪ್ರತಿಮ ಸ್ನೇಹಿತ ಮತ್ತು ಮಹಾಭಾರತ ಯುದ್ಧದಲ್ಲಿ ಅರ್ಜುನನಿಗೆ ದಾರಿದೀಪವಾದ ಜಗದ್ರಕ್ಷಕ ಹೀಗೆ ಹಲವಾರು ರೀತಿಯಲ್ಲಿ ಶ್ರೀ ಕೃಷ್ಣ ಜನರ ಮನಸ್ಸು ಗೆದ್ದಿದ್ದಾರೆಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ, ಜಿಲ್ಲಾ ಗೊಲ್ಲ ಸಂಘದ ಅಧ್ಯಕ್ಷ ಹೆಚ್.ರಾಘವ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಡಾ.ಹೆಚ್.ಪಿ.ತಾರಾನಾಥ್ ಮತ್ತಿತರರಿದ್ದರು.

# ಚುನಾವಣಾ ಆಯೋಗದ ಕಚೇರಿಗೆ ಬೆಂಕಿ ಬೀಳಬಹುದು

## 100 ಮತಗಟ್ಟೆಗಳಲ್ಲಿನ ಲೋಪ ಪತ್ತೆ | ನಟ ಪ್ರಕಾಶ್ ರಾಜ್ ಆಕ್ರೋಶ

• ಪ್ರಜೋದಯ ವರದಿ

**ಹಾಸನ :** ಕೇಂದ್ರ ಚುನಾವಣಾ ಆಯೋಗದ ಕಚೇರಿಗೆ ಯಾವಾಗ ಬೇಕಾದರೂ ಬೆಂಕಿ ಬೀಳುವ ಸಾಧ್ಯತೆ ಇದ್ದು, ಸುಪ್ರೀಂ ಕೋರ್ಟ್ ತಕ್ಷಣ ಮಧ್ಯ ಪ್ರವೇಶಿಸಿ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಆಗಿರುವ ಲೋಪಗಳನ್ನು ಸರಿಪಡಿಸಬೇಕು ಹಾಗು ಆಯೋಗದ ಮುಖ್ಯ ಆಯುಕ್ತ ಜ್ಞಾನೇಶ್ ಕುಮಾರ್ ಅವರು ರಾಜೀನಾಮೆ ನೀಡಬೇಕೆಂದು ನಟ ಪ್ರಕಾಶ್ ರಾಜ್ ಅವರು ಆಗ್ರಹಿಸಿದರು.

ಎಸ್‌ಐಆರ್ ಪರಿಶೋಧ ಹಾಗು ಪ್ರತಿರೋಧ ಸಮಾವೇಶ ಅಂಗವಾಗಿ ಭಾನುವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ದೇಶದಲ್ಲಿ ಅಕ್ರಮ ಕಂಡು ಬರುವ ಕಚೇರಿಗಳಿಗೆ ಬೆಂಕಿ ಬೀಳುವುದು, ದಾಖಲೆಗಳು ಹಾಳಾಗುವುದು ಸಾಮಾನ್ಯವಾಗಿದೆ. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಇಂತಹ ಕುತಂತ್ರಗಳಿಗೆ ಪ್ರಖ್ಯಾತರಾಗಿದ್ದಾರೆ. ಇಂತಹ



ಕೃತ್ಯಗಳಿಂದಲೇ ಅವರು ಚುನಾವಣೆ ಗೆಲ್ಲುತ್ತಿದ್ದಾರೆಂದು ಗಂಭೀರ ಆರೋಪ ಮಾಡಿದರು.

ರಾಜ್ಯದಲ್ಲಿ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಆರಂಭವಾದ ಬಳಿಕ ಮತದಾರರ ಪಟ್ಟಿಯಿಂದ ದೊಡ್ಡ ಪ್ರಮಾಣದಲ್ಲಿ ಹೆಸರುಗಳನ್ನು ಕೈಬಿಡಲಾಗುತ್ತಿದೆ. ಈ ಕುರಿತು ರಾಜ್ಯ ಸರ್ಕಾರ ಹಾಗು ಚುನಾವಣಾ ಆಯೋಗವನ್ನು ನಾವು ಪ್ರಶ್ನಿಸುತ್ತಿದ್ದೇವೆ. ರಾಜ್ಯದಲ್ಲಿ ಸುಮಾರು 5.50 ಕೋಟಿ ಮತದಾರರಿದ್ದು, ಜೂನ್ 1ರಿಂದ ಎಸ್‌ಐಆರ್ ಪ್ರಕ್ರಿಯೆ ಆರಂಭಿಸಲಾಗಿದೆ. ಅರ್ಜಿ ಭರ್ತಿ ಮಾಡುವ ವಿಧಾನ ಸೇರಿ ಹಲವು ವಿಷಯಗಳ ಬಗ್ಗೆ ಹೋರಾಟಗಾರರು ಜನರಿಗೆ ಮಾಹಿತಿ ನೀಡುತ್ತಿದ್ದಾರೆಂದರು.

ಈಗಾಗಲೇ ರಾಜ್ಯದ 1.08 ಕೋಟಿ ಜನರನ್ನು ಪಟ್ಟಿಯಿಂದ ಹೊರಗಿಡಲಾಗಿದೆ. ಇನ್ನೂ 43 ಲಕ್ಷ ಮತದಾರರ ಮ್ಯಾಪಿಂಗ್ ಆಗಿಲ್ಲ. ಬಿಎಲ್‌ಒಗಳಿಗೆ ಸಮರ್ಪಕ ತರಬೇತಿ ನೀಡಿಲ್ಲ. ಕೆಲವೆಡೆ ಮೂರು ಬಾರಿ ಮನೆಗಳಿಗೆ ಭೇಟಿ ನೀಡಬೇಕಾದ ಪ್ರಕ್ರಿಯೆ ಸಮರ್ಪಕವಾಗಿ ನಡೆದಿಲ್ಲ. ಶಿಕ್ಷಕರು ಹಾಗು ಆಶಾ ಕಾರ್ಯಕರ್ತರನ್ನು ಈ ಕಾರ್ಯಕ್ಕೆ ನಿಯೋಜಿಸಲಾಗಿದ್ದು, ಇಷ್ಟು ಕಡಿಮೆ ಅವಧಿಯಲ್ಲಿ ಪ್ರಕ್ರಿಯೆ ಪೂರ್ಣಗೊಳಿಸುವುದು ಕಷ್ಟವಾಗಿದೆ ಎಂದು ಹೇಳಿದರು.

ಬಿಎಲ್‌ಒ ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಮತದಾರರು ಮನೆಯಲ್ಲಿ ಇಲ್ಲದಿದ್ದರೆ ಅಥವಾ ಅವರು ಸ್ಥಳಾಂತರಗೊಂಡಿದ್ದರೆ ಅವರ ಹೆಸರನ್ನು ಪಟ್ಟಿಯಿಂದ ತೆಗೆದು ಹಾಕಲಾಗುತ್ತಿದೆ. ಕೆಲಸಕ್ಕಾಗಿ ಮನೆಯಿಂದ ಹೊರಗೆ ಹೋಗಿದ್ದರೆ ಅಥವಾ ಬೇರೆ ಕಡೆ ಸ್ಥಳಾಂತರಗೊಂಡಿದ್ದರೆ ಅಂತಹವರು ಈ ದೇಶದ ಪ್ರಜೆಗಳಲ್ಲವೇ. ಫಾರಂ ನಂ. 6 ಎಂದರೆ ಹೊಸ ಮತದಾರರಿಗೆ ಸಂಬಂಧಪಟ್ಟಿದ್ದಾಗಿದೆ.

» ನಾಲ್ಕನೇ ಪುಟದಲ್ಲಿ

### ಚುನಾವಣಾ ಆಯುಕ್ತರ ದೊಡ್ಡ ನಾಟಕ

13 ಬಾರಿ ಪತ್ರ ಬರೆದರೂ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಪರಿಗಣಿಸಿಲ್ಲವೆಂದು ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಹೇಳಿದ್ದರು. ಈಗ ಅವರೇ ಸಭೆ ನಡೆಸಿ ಆ ರೀತಿಯ ಬೆಳವಣಿಗೆ ಆಗಿಲ್ಲವೆಂದು ದೊಡ್ಡ ನಾಟಕ ಮಾಡಿದ್ದಾರೆ. ಶನಿವಾರದ ಸಭೆಯಲ್ಲಿ ನಡೆದ ಚರ್ಚೆಯನ್ನು ಬಹಿರಂಗವಾಗಿಯೇ ಮಾಡಬೇಕಿತ್ತು. ಎಸ್‌ಐಆರ್ ಎಂಬುದೇ ಪ್ರಜಾಪ್ರಭುತ್ವ ಕಗ್ಗೊಲೆಯ ಹುನ್ನಾರವಾಗಿದೆ. ಯಾವ ಕಾರಣಕ್ಕೂ ಎಸ್‌ಐಆರ್ ಮುಂದುವರಿಯಬಾರದು. ಪ್ರತಿಪಕ್ಷದ ನಾಯಕರು ಲೋಕಸಭೆಯಲ್ಲಿ ಈ ವಿರುದ್ಧ ಪ್ರಬಲ ಹೋರಾಟ ನಡೆಸಬೇಕೆಂದು ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರಿಗೆ ನಟ ಪ್ರಕಾಶ್ ರಾಜ್ ಒತ್ತಾಯಿಸಿದರು.

# ಕ.ಸಾ.ಪ. ಮಾಜಿ ಅಧ್ಯಕ್ಷ ಹೆಚ್.ಬಿ.ರಮೇಶ್ ನಿಧನ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷರು, ಯೋಗ ಗುರು ಹಾಗು ರಂಗಕರ್ಮಿ ಹೆಚ್.ಬಿ.ರಮೇಶ್ (94) ಭಾನುವಾರ ನಿಧನರಾದರು.



ವಯೋ ಸಹಜ ಕಾಯಿಲೆಯಿಂದ ಬಳಲುತ್ತಿದ್ದ ಅವರನ್ನು ಮಂಗಳಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. 2004–2008ರ ಅವಧಿ ಯಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿದ್ದ ಅವರು ನೇರ ನಡೆ ನುಡಿಗೆ ಹೆಸರಾಗಿದ್ದರು.

ಹೆಚ್.ಬಿ.ರಮೇಶ್ ಅವರ ಪಾರ್ಥಿವ ಶರೀರವನ್ನು ದೊಡ್ಡ ಗರಡಿ ಬೀದಿಯ ಅವರ ನಿವಾಸದಲ್ಲಿ ಸಾರ್ವಜನಿಕ ದರ್ಶನಕ್ಕೆ ಇಡಲಾಗಿದ್ದು, ಸೆ.28ರ ಸೋಮವಾರ ಮಧ್ಯಾಹ್ನ 1 ಗಂಟೆಗೆ ನಗರದ ಬಿಟ್ಟಗೌಡನಹಳ್ಳಿ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಲಿದೆ. ಹೆಚ್.ಬಿ.ರಮೇಶ್ ಅವರ ನಿಧನಕ್ಕೆ ಕಸಾಪ ಜಿಲ್ಲಾಧ್ಯಕ್ಷ ಡಾ.ಎಚ್.ಎಲ್ ಮಲ್ಲೇಶಗೌಡ, ಮಾಜಿ ಅಧ್ಯಕ್ಷರಾದ ಹರಿಗೋಪಾಲ್, ಹೆಚ್.ಬಿ. ಮದನಗೌಡ, ಉದಯ ರವಿ, ಡಾ.ಹೆಚ್.ಎಲ್ ಜನಾರ್ಧನ್, ನಾಯಕರಹಳ್ಳಿ ಮಂಜೇಗೌಡ, ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ.ಆರ್. ಕೆಂಚೇಗೌಡ ಇತರ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಪರಿಷತ್ ಆವರಣದಲ್ಲಿ ಅಂತಿಮ ನಮನ

ಸೋಮವಾರ ಮಧ್ಯಾಹ್ನ 12 ಗಂಟೆಗೆ ಕನ್ನಡ ಸಾಹಿತ್ಯ ಪರಿಷತ್ ಆವರಣದಲ್ಲಿ ಹೆಚ್.ಬಿ. ರಮೇಶ್ ಅವರ ಪಾರ್ಥಿವ ಶರೀರ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಜಿಲ್ಲಾ ಕಸಾಪ ಪದಾಧಿಕಾರಿಗಳು, ಮಾಜಿ ಅಧ್ಯಕ್ಷರು ಹಾಗು ಸದಸ್ಯರು ಭಾಗವಹಿಸಿ ಗೌರವ ಸಮರ್ಪಿಸಿ ಅವರ ಕನ್ನಡಪರ ಸೇವೆಯನ್ನು ಸ್ಮರಿಸಿ ಶ್ರದ್ಧಾಂಜಲಿ ಸಲ್ಲಿಸುವಂತೆ ಪರಿಷತ್ತಿನ ಅಧ್ಯಕ್ಷ ಡಾ.ಎಚ್.ಎಲ್. ಮಲ್ಲೇಶಗೌಡ ಅವರು ಕೋರಿದ್ದಾರೆ.

# ಸ್ವಾರ್ಥದ ಬದುಕು ಶೂನ್ಯ ಸಂಪಾದನೆಗೆ ಸಮ




• ಪ್ರಜೋದಯ ವರದಿ

**ಸಕಲೇಶಪುರ:** ಸ್ವಾರ್ಥ ಬಿಟ್ಟಾಗ ಸಂಘಟನೆ ಸಾಧ್ಯ, ಸ್ವಾರ್ಥದ ಬದುಕು ಶೂನ್ಯ ಸಂಪಾದನೆಗೆ ಸಮವೆಂದು ಶ್ರೀ ಚನ್ನಸಿದ್ದೇಶ್ವರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ಭಾನುವಾರ ಹಮ್ಮಿಕೊಂಡಿದ್ದ ನೂತನ ಪದಾಧಿಕಾರಿಗಳ ಪದಗ್ರಹಣ ಹಾಗು ವಿಚಾರ ಸಂಕಿರಣ ಉದ್ಘಾಟಿಸಿ ಆಶೀರ್ವಚನ ನೀಡಿದರು. ಸ್ವಾರ್ಥಕ್ಕೆ ಬಿದ್ದು ಸಮಾಜದ ಸಂಘಟನೆಗಾಗಿ ಹಾನಗಲ್ ಕುಮಾರಸ್ವಾಮಿ ವೀರಶೈವ ಮಹಾಸಭಾ ಸ್ಥಾಪನೆ ಮಾಡದಿದ್ದರೆ ವೀರಶೈವ ಸಮಾಜ ಸಂಘಟನೆ ಅಧೋಗತಿಗೆ ಇಳಿಯುತ್ತಿತ್ತು. ಆದರೆ, ಮಠದ ಆಸ್ತಿಯನ್ನೇ ಮಾರಾಟ ಮಾಡಿ ಮಹಾಸಭಾ ಕಟ್ಟಿದ ಮಹಾನುಭಾವರು ಕುಮಾರಸ್ವಾಮಿಗಳು. ಆದರೆ, ಇಂದು ಕೆಲವರ ಸ್ವಾರ್ಥದಿಂದ

» ನಾಲ್ಕನೇ ಪುಟದಲ್ಲಿ

# ಪತ್ನಿಯ ಅನೈತಿಕ ಸಂಬಂಧಕ್ಕೆ ಬೇಸತ್ತು ಪತಿ ಆತ್ಮಹತ್ಯೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪತ್ನಿಯ ಅನೈತಿಕ ಸಂಬಂಧಕ್ಕೆ ಬೇಸತ್ತು ಸೆಲ್ಫಿ ವಿಡಿಯೋ ಮಾಡಿ ವಿಷ ಕುಡಿದ ಪತಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಬೆಳಗಿಹಳ್ಳಿಯಲ್ಲಿ ನಡೆದಿದೆ.

ಹಿರೀಸಾವೆ ಹೋಬಳಿ ಬೆಳಗಿಹಳ್ಳಿಯ ದೊರೆ (27) ಮೃತ ದುರ್ದೈವಿ. ತಿಪಟೂರು ತಾಲ್ಲೂಕಿನ ನೊಣವಿನಕೆರೆಯ ಹರ್ಷಿತಾ ಎಂಬುವವರನ್ನು ಪ್ರೀತಿಸಿ ಮದುವೆಯಾಗಿದ್ದರು. ಕಳೆದ 15 ದಿನಗಳ ಹಿಂದೆ ಹರ್ಷಿತಾ ಪತಿ ಮನೆ ಬಿಟ್ಟು ತವರು ಮನೆ ಸೇರಿದ್ದರು. ಹರ್ಷಿತಾ ಪರ ಪುರುಷನ ಜೊತೆ ಸಂಬಂಧ ಹೊಂದಿದ್ದ ವಿಚಾರವನ್ನು ಅವರ ತವರು ಮನೆಗೆ ಹೇಳಿದ್ದ. ಆದರೆ, ಅವರೂ ಸಹ ಮಗಳ ಪರವಾಗಿ ಮಾತನಾಡುತ್ತಿದ್ದರೆಂದು ಸಾವಿಗೆ ಮೊದಲು ದೊರೆ ಸೆಲ್ಫಿ ವಿಡಿಯೋದಲ್ಲಿ ಹೇಳಿಕೊಂಡಿದ್ದಾನೆ.

ಆಕೆ ನನಗೆ ದ್ರೋಹ ಬಗೆದಿದ್ದಾಳೆ. ತನ್ನ ಮೇಲೆ ಮಾಟ-ಮಂತ್ರ ಮಾಡಿಸಿದ್ದಾಳೆ. ಪೊಲೀಸರು ವಿಡಿಯೋ ಸಾಕ್ಷ್ಯದ ಆಧಾರದಲ್ಲಿ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ನಿರ್ಲಕ್ಷ್ಯ ಮಾಡಬೇಡಿ, ಈ ವಿಚಾರದಲ್ಲಿ ನನ್ನ ಮಾತು ಕೇಳಿ ನನಗೆ ಸಹಾಯ ಮಾಡಿ ಎಂದು ಕೋರಿದ್ದಾನೆ.

ಅವಳಿಗೋಸ್ಕರ ತಂದೆ-ತಾಯಿ, ನನ್ನವರನ್ನು ಬಿಟ್ಟು ಅವಳ ಜೊತೆ ಸಂಸಾರ ಮಾಡಿದೆ. ನನ್ನ ಹಾಗು ಅವಳ ಫೋನ್ ರೆಕಾರ್ಡಿಂಗ್ ತಗೊಳಿ, ಅವಳನ್ನು ಮಾತ್ರ ಬಿಡ್ಬೇಡಿ ಸಾರ್, ಪೊಲೀಸರ ಮೇಲೆ ನನಗೆ ನಂಬಿಕೆ ಇದೆ. ಅವಳನ್ನಂತು ಬಿಡಬೇಡಿ, ಅವಳು ಒಳ್ಳೆಯವಳಲ್ಲ. ನನ್ನಂತ ಮುಗ್ಧ ಮನಸ್ಸಿನವನಿಗೆ ಮೋಸ ಮಾಡಿದಾಳೆಂಬ ಹೇಳಿಕೆ ನೀಡಿದ್ದಾರೆ. ದೊರೆ ಅವರು ಮೃತಪಟ್ಟ ಬಳಿಕ ಸ್ಥಳೀಯರು ನೋಡಿದ್ದು, ತಾಲ್ಲೂಕು ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಹಿರೀಸಾವೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ವಿಧಾನ ಪರಿಷತ್ ಗೆಲ್ಲಲು ಪ್ರತಿನಿಧಿಗಳ ಬೆಂಬಲ ಬೇಕು | ಗರಿಗೆದರಿದ ಚಟುವಟಿಕೆ

# ಗ್ರಾ.ಪಂ. ಚುನಾವಣೆ: ಗೆಲುವಿನ ಕುದುರೆಗಳ ಹುಡುಕಾಟ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಭೀಕರ ಬರಗಾಲ, ಇನ್ನೂ ಕೈಸೇರದ ಬೆಳೆ ಪರಿಹಾರ, ಜಾನುವಾರುಗಳಿಗೆ ಮೇವಿನ ಕೊರತೆ... ಇಂತಹ ಸಂಕಷ್ಟಗಳ ನಡುವೆಯೇ ಗ್ರಾಮೀಣ ಭಾಗದಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ಸದ್ದು ಜೋರಾಗಿದೆ.

ಚುನಾವಣೆ ಮೀಸಲಾತಿ ಅಧಿಸೂಚನೆ ಪ್ರಕಟವಾಗುತ್ತಿದ್ದಂತೆ ರಾಜಕೀಯ ಪಕ್ಷಗಳು ತಮ್ಮ ಅಭ್ಯರ್ಥಿಗಳ ಆಯ್ಕೆ ಹಾಗು ಗೆಲುವಿನ ಲೆಕ್ಕಾಚಾರದಲ್ಲಿ ತೊಡಗಿವೆ. ಮುಂಬರುವ ವಿಧಾನ ಪರಿಷತ್ ಚುನಾವಣೆಯ ಹಿನ್ನಲೆಯಲ್ಲಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಹಾಗು ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ರಾಜಕೀಯವಾಗಿ ಮಹತ್ವ ಪಡೆದುಕೊಂಡಿವೆ. ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳೇ ವಿಧಾನ ಪರಿಷತ್‌ನ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ಚುನಾವಣೆಯಲ್ಲಿ ಮತದಾರರಾಗಿರುವುದರಿಂದ




ಗ್ರಾಮ ಪಂಚಾಯಿತಿ ಚುನಾವಣೆಯನ್ನು ಪಕ್ಷಗಳು ಗಂಭೀರವಾಗಿ ಪರಿಗಣಿಸಿವೆ.

ಜಿಲ್ಲೆಯಲ್ಲಿ 3,542 ಗ್ರಾಮ ಪಂಚಾಯಿತಿ, 134 ತಾಲ್ಲೂಕು ಪಂಚಾಯಿತಿ, 38 ಜಿಲ್ಲಾ ಪಂಚಾಯಿತಿ ಹಾಗು 202 ಪುರಸಭೆ, ಪಟ್ಟಣ ಪಂಚಾಯಿತಿ, ನಗರಸಭೆ ಮತ್ತು ಮಹಾನಗರ ಪಾಲಿಕೆ ಸದಸ್ಯರು ಇದ್ದಾರೆ. ಈ ಎಲ್ಲಾ ಪ್ರತಿನಿಧಿಗಳು ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ನಡೆಯುವ ವಿಧಾನ ಪರಿಷತ್ ಚುನಾವಣೆಯ ಮತದಾರರಾಗಿರುವ ಹಿನ್ನಲೆಯಲ್ಲಿ ಈಗಿನಿಂದಲೇ ಗ್ರಾಮೀಣ ರಾಜಕೀಯದಲ್ಲಿ ಲೆಕ್ಕಾಚಾರ ಆರಂಭವಾಗಿದೆ.

**ಪಕ್ಷಕ್ಕಿಂತ ಗೆಲುವಿಗೆ ಆದ್ಯತೆ**

ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಪಕ್ಷದ ಚಿಹ್ನೆಗಿಂತ ಅಭ್ಯರ್ಥಿಯ ವೈಯಕ್ತಿಕ ವರ್ಚಸ್ಸು, ಸ್ಥಳೀಯ ಸಂಪರ್ಕ, ಜಾತಿ-ಸಾಮಾಜಿಕ ಸಮೀಕರಣ, ಆರ್ಥಿಕ ಬಲ ಹಾಗು ಗ್ರಾಮ ಮಟ್ಟದ ರಾಜಕೀಯ ಹಿಡಿತ ಪ್ರಮುಖವಾಗುತ್ತದೆ. ಹೀಗಾಗಿ ರಾಜಕೀಯ ಪಕ್ಷಗಳು ಗೆಲ್ಲುವ ಸಾಧ್ಯತೆ ಇರುವ ಅಭ್ಯರ್ಥಿಗಳ ಹುಡುಕಾಟ ನಡೆಸುತ್ತಿವೆ.

ರಾಜಕೀಯದಲ್ಲಿ ಶಾಶ್ವತ ಮಿತ್ರತ್ವ, ವಿರೋಧ ಎಂಬುದಕ್ಕಿಂತ ಸಂದರ್ಭಕ್ಕೆ ತಕ್ಕಂತೆ ಮೈತ್ರಿ ಹಾಗು ಹೊಂದಾಣಿಕೆಗಳು ನಡೆಯುವುದು ಹೊಸದಲ್ಲ. ಗ್ರಾಮ ಪಂಚಾಯಿತಿ ಚುನಾವಣೆಯಲ್ಲೂ ಸ್ಥಳೀಯ ರಾಜಕೀಯ ಸಮೀಕರಣಗಳು ಪಕ್ಷಗಳ ಅಧಿಕೃತ ನಿಲುವಿಗಿಂತ ಪ್ರಭಾವ ಬೀರುವ ಸಾಧ್ಯತೆ ಇದೆ. ಇದೇ ಕಾರಣಕ್ಕೆ ಕೆಲವೆಡೆ ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗಿಂತ ಗೆಲುವಿನ ಸಾಮರ್ಥ್ಯ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ಸಿಗುವ ಸಾಧ್ಯತೆ ಇದೆ. ಮೀಸಲಾತಿ ಪ್ರಕಟವಾಗಿರುವುದರಿಂದ ಆ ವರ್ಗಕ್ಕೆ ಸೂಕ್ತ ಅಭ್ಯರ್ಥಿಗಳ ಹುಡುಕಾಟವೂ ಆರಂಭವಾಗಿದೆ. ಬರಗಾಲದ ಸಂಕಷ್ಟದ ನಡುವೆ ನಡೆಯಲಿರುವ ಈ ಚುನಾವಣೆ, ಗ್ರಾಮೀಣ ಭಾಗದಲ್ಲಿ ಮುಂದಿನ ರಾಜಕೀಯ ಸಮೀಕರಣಗಳಿಗೆ ವೇದಿಕೆ ಸಿದ್ಧಪಡಿಸುವ ನಿರೀಕ್ಷೆ ಮೂಡಿಸಿದೆ.

**ದೇವಾಲಯ ಕಟ್ಟಿಸಿಕೊಡುವ ವಾಗ್ದಾನ**

ಗ್ರಾಮ ಪಂಚಾಯಿತಿ ಚುನಾವಣೆ ದಿನಾಂಕ ಘೋಷಣೆಯಾಗುವ ಮೊದಲೇ ಜಿಲ್ಲೆಯ ಹಲವು ಗ್ರಾಮಗಳಲ್ಲಿ ಸಾಮೂಹಿಕವಾಗಿ ಆಮಿಷವೊಡ್ಡುತ್ತಿರುವ ವಿಚಾರಗಳು ಕೇಳಿ ಬಂದಿವೆ. ಚನ್ನರಾಯಪಟ್ಟಣ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ದೇವಸ್ಥಾನ ನಿರ್ಮಿಸಿ ಕೊಡುವುದಾಗಿ ಅಭ್ಯರ್ಥಿಗಳು ಆಮಿಷ ಒಡ್ಡುತ್ತಿದ್ದಾರೆ. ಅಂದಾಜು 20 ಲ.ರೂ. ವೆಚ್ಚದಲ್ಲಿ ದೇಗುಲ ನಿರ್ಮಿಸಿಕೊಡುವ ವಾಗ್ದಾನ ಮಾಡಿದರೆ, ಆ ಪಂಚಾಯಿತಿಗೆ ಅವಿರೋಧ ಆಯ್ಕೆ ಅಥವಾ ಮತದಾನ ನಡೆದರೂ ಅಂತಹವರಿಗೆ ಬೆಂಬಲಿಸುವ ಕುರಿತು ಚರ್ಚೆಗಳು ನಡೆಯುತ್ತಿವೆ. ಈ ಯೋಜನೆ ಫಲಪ್ರದವಾಗದಿದ್ದರೆ ಒಂದು ಮತಕ್ಕೆ 1 ಸಾವಿರ ರೂ. ವರೆಗೆ ಕೊಡಲು ಕೆಲವರು ತಯಾರಿದ್ದಾರೆಂಬ ಮಾತುಗಳು ಹಳ್ಳಿಗಳಲ್ಲಿ ಕೇಳಿಬರುತ್ತಿದೆ.

**ಸಿ.ಎಂ. ಡಿ.ಕೆ.ಶಿವಕುಮಾರ್‌ಗೆ ಅಗ್ನಿ ಪರೀಕ್ಷೆ**

2028ರ ನಂತರವೂ ತಾವೇ ಮುಖ್ಯಮಂತ್ರಿ ಎಂದು ಪರೋಕ್ಷವಾಗಿ ಇಂಗಿತ ವ್ಯಕ್ತಪಡಿಸುತ್ತಿರುವ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮುಂಬರುವ ಸ್ಥಳೀಯ ಚುನಾವಣೆಗಳು ಅಗ್ನಿ ಪರೀಕ್ಷೆಯೇ ಸರಿ. ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಬೇಕೆಂದರೆ ಹೊಸ್ತಿಲಲ್ಲಿರುವ ಚುನಾವಣೆಗಳಲ್ಲಿ ತಮ್ಮ ಬೆಂಬಲಿಗರು ಗೆಲ್ಲಲೇಬೇಕು. ಆ ಉದ್ದೇಶದಿಂದಲೇ ಗ್ರಾಮೀಣ ಮಟ್ಟದಲ್ಲಿ ಪಕ್ಷ ಸಂಘಟನೆಗೆ ಅವರು ತಮ್ಮದೇಯಾದ ಕಾರ್ಯತಂತ್ರ ರೂಪಿಸುತ್ತಿದ್ದಾರೆ. ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಭಾರತ್ ಯುವ ಜೋಡೋ ಸಂಘ ಸ್ಥಾಪಿಸಿ ಆ ಮೂಲಕ ಯುವಕರನ್ನು ಸೆಳೆಯಲು ಮುಂದಾಗಿದ್ದಾರೆಂಬ ಚರ್ಚೆ ಜೋರಾಗಿದೆ.



# ಭಾವ ಲಹರಿ

## ಅವಳಿಗೆ ಇಡ್ಲಿ ಇಷ್ಟ, ಆದರೆ ಪಾತ್ರೆ ತೊಳೆಯೋದು ಕಷ್ಟ!

ನಾಳೆ ಬೆಳಿಗ್ಗೆ ತಿಂಡಿಗೆ ಏನು ಮಾಡಬೇಕು? ಎಲ್ಲಾ ಗೃಹಿಣಿಯರಿಗೂ ನಿತ್ಯ ಭೂತದಂತೆ ಎದುರಾಗುವ ಪ್ರಶ್ನೆ ಇದು! ಇದಕ್ಕೆ ಉತ್ತರ ಸಿಕ್ಕ ನಂತರವೇ ರಾತ್ರಿಯ ಮನಃಶಾಂತಿ. ಇಡ್ಲಿ ಅಥವಾ ದೋಸೆಗೆ ಹಿಂದಿನ ದಿನ ಬೆಳಿಗ್ಗೆಯೇ ನೆನೆಸಿ, ಸಂಜೆ ಬೀಸಿಟ್ಟುಕೊಂಡಾಗ ಸಮಸ್ಯೆ ಇಲ್ಲ. ಆದರೆ ದೋಸೆ ಮಾಡಿಕೊಂಡರೆ ಬೆಳಿಗ್ಗೆ ನಿಂತು ಅದನ್ನು ಎರೆಯಬೇಕು. ಇಡ್ಲಿ ಇದ್ದದ್ದರ ವಾಸಿ. ಸ್ವಲ್ಪ ಆರಾಮು. ಒಂದೇ ಹೊಡೆತಕ್ಕೆ ಮನೆಯವರಿಗೆಲ್ಲ ತಿಂಡಿ ಆಗಿಬಿಡುತ್ತದೆ.



ಇನ್ನು ನೆಂಟರಿಷ್ಟರು ಮನೆಗೆ ಬಂದಾಗ, ಬೆಳಗಿನ ಉಪಾಹಾರಕ್ಕೆ ಜಾಸ್ತಿ ಜನರಿದ್ದಾಗ ಇಡ್ಲಿ ಮಾಡಿಕೊಂಡರೆ ಸೂಕ್ತ. ಆದರೆ, ಈ ಇಡ್ಲಿಯದೊಂದು ಸಮಸ್ಯೆ ಇದೆ. ಅಸಲಿಗೆ ಸಮಸ್ಯೆ ಇಡ್ಲಿಯದಲ್ಲ, ಈ ಇಡ್ಲಿ ಪಾತ್ರೆಗಳದ್ದು. ಇಡ್ಲಿ ಅಟ್ಟು (ಬೇಯಿಸುವ ಪಾತ್ರೆ), ತಟ್ಟೆ, ಅಚ್ಚು, ಮುಚ್ಚಳ- ಮೊದಲಾದ ಇಡ್ಲಿ ಪಾತ್ರೆಗಳ ಪರಿವಾರ.

ಇಡ್ಲಿ ಬೇಯಿಸಿದ ನಂತರ ಅವುಗಳನ್ನು ಸಿಂಕಿನೊಳಗೆ ತೊಳೆಯಲು ಹೊಂದಿಸಿಟ್ಟು, ನೀರಿನಲ್ಲಿ ಬಹಳ ಹೊತ್ತು ನೆನೆಸಿಟ್ಟು, ತೊಳೆದು, ಒಣಗಿಸಿ ಒಳಸೇರಿಸಿಡುವ ಪ್ರಕ್ರಿಯೆ ಇದೆಯಲ್ಲ, ಅದು ಎಲ್ಲಾ ಗೃಹಿಣಿಯರಿಗೂ ಎಲ್ಲಿಲ್ಲದ ಕಿರಿಕಿರಿಯ ಕೆಲಸ. ನಾನು ಈ ವಿಷಯದ ಮೇಲೆ ಯಾವುದೇ ಸರ್ವೇ ಮಾಡಿಲ್ಲ, ಅಥವಾ ರಿಸರ್ಚ್ ಪೇಪರ್, ವೈಜ್ಞಾನಿಕ ಸಾಕ್ಷ್ಯ ಇಟ್ಟು ಇದನ್ನು ಹೇಳುತ್ತಿಲ್ಲ. ಆದರೆ ಎಲ್ಲಾ ಗೃಹಿಣಿಯರಿಗೂ, ಇಡ್ಲಿ ಪಾತ್ರೆಯೆಂದರೆ ಅದೇನೋ ಒಂದು ಅಸಹನೆ ಇದೆ ಮತ್ತು ಅದು ಸಾರ್ವತ್ರಿಕ ಎನ್ನುವುದಂತೂ ಸತ್ಯ!!

ಯಾವುದೇ ಸಮಯದಲ್ಲಿ ಗೃಹಿಣಿಯ ಸಹನೆಗೂ- ಅಡುಗೆ ಮನೆಯ ಸಿಂಕಿನಲ್ಲಿ ತುಂಬಿದ ಪಾತ್ರೆಯ ಮಟ್ಟಕ್ಕೂ ನೇರ ಸಂಬಂಧವಿದೆ ಎನ್ನುವುದು ಸೂಕ್ಷ್ಮ ಗಂಡಂದಿರಿಗಷ್ಟೇ ತಿಳಿದಿರುತ್ತದೆ. ಆದರೆ ಆ ಪ್ರಜಾತಿ ಕಡಿಮೆ ಇರುವುದರಿಂದ ಇದು ಜಾಸ್ತಿ ಜನರಿಗೆ ಗೊತ್ತಿಲ್ಲದ ವಿಚಾರ. ತೊಳೆಯುವ ಪಾತ್ರೆ ಮತ್ತು ನಲ್ಲಿಯ ಅಂತರ ಕಡಿಮೆಯಾದಂತೆ, ಪಾತ್ರೆಗಳು ಸಿಂಕಿನಲ್ಲಿ ಗೋಪುರವಾದಂತೆ ಅಡುಗೆಮನೆಯ ಅವಳ ಸಹನೆ ಮಟ್ಟ ಅಷ್ಟು ತಗ್ಗುತ್ತದೆ. ವಿಲೋಮ ಅನುಪಾತೀಯ. ವ್ಯುತ್ಕ್ರಮಾನುಪಾತ. ಅಂತಹ ಸಂದರ್ಭದಲ್ಲಿಯೇ ಗಂಡು ಜೀವಿ ಲೋಟವನ್ನೋ, ಚಮಚವನ್ನೋ ಅನವಶ್ಯ ಬಳಸಿ ಆ ಸಿಂಕಿನೊಳಗೆ ಹಾಕಿದರೆ ಅವಳಿಗೆ ಮುಡಿಕಟ್ಟುವಷ್ಟು ಕೋಪ ಬರುತ್ತದೆ.

ಹೀಗಿರುವಾಗ, ಬೆಳ್ಳಂಬೆಳಿಗ್ಗೆ ಇಡ್ಲಿ ಪಾತ್ರೆಗಳ ವಿಚಿತ್ರ ಆಕಾರಗಳಿಂದ ಸಿಂಕ್ ಹೇಗೆ ಹೇಗೋ ತುಂಬಿ ಹೋದರೆ ರಗಳೆ ಅನಿಸುವುದು ತಪ್ಪೇ? ಕೆಲವು ಗೃಹಿಣಿಯರಿಗಂತೂ ಇಡ್ಲಿ ಬೀಸಿಕೊಂಡ ರಾತ್ರಿಯೇ, ಬೆಳಿಗ್ಗೆ ಇಡ್ಲಿ ಪಾತ್ರೆ ತೊಳೆಯುವ ಕನಸು ಬಿದ್ದು, ಆತಂಕವಾಗುತ್ತದಂತೆ!

ನನ್ನ ಅಜ್ಜಿಯ ಮನೆ ತುಂಬು ಕುಟುಂಬ. ಮನೆಯಲ್ಲಿ ನಿತ್ಯ ಬೆಳಗ್ಗಿನ ಉಪಹಾರಕ್ಕೆ ಮನೆ ಜನರೇ ಎಂಟು ಹತ್ತು. ಜೊತೆಯಲ್ಲಿ ಭತ್ತದ ಹೂಟಿ, ನೆಟ್ಟಿ, ಕೊಯ್ಲು ಇತ್ಯಾದಿ ಇರುವಾಗ ಕೃಷಿ ಕಾರ್ಮಿಕರು. ಹದಿನೈದಿಪ್ಪತ್ತು ಜನರಿಗೆ ದೋಸೆ ಮಾಡಿ ಬಡಿಸುವುದೆಂದರೆ ಒಪ್ಪತ್ತಿನ ಕೆಲಸ. ತಡವಾಗಿಬಿಡುತ್ತದೆ. ಹಾಗಾಗಿ ಅಂತಹ ದಿನಗಳಲ್ಲಿ ಅಜ್ಜಿ ಶೆಖೆ ಹಿಟ್ಟು (ಉಡುಪಿ ಕಡೆ ಮಾಡುವ ಒಂದು ಬಗೆಯ ಇಡ್ಲಿ) ಮಾಡುತ್ತಿದ್ದಳು.

ಅಜ್ಜಿಯ ಮನೆಯದು ಸಿಲೆಂಡರಿನಷ್ಟು ದೊಡ್ಡದಾದ ಇಡ್ಲಿ ಅಟ್ಟು. ಅಷ್ಟು ಜನರಿಗೆ ಆಗಬೇಕಲ್ಲ. ಅವಳು ಶೆಖೆ ಹಿಟ್ಟು ಮಾಡಿದ ನಂತರ ಆ ಪಾತ್ರೆಗಳನ್ನು ಮನೆಯಿಂದ ಸ್ವಲ್ಪ ದೂರದಲ್ಲಿರುವ ಕೆರೆಯಿಂದ ಹೊರ ಹರಿಯುವ ತೊರೆಯಲ್ಲಿ ಚಿಕ್ಕದೊಂದು ಕಲ್ಲು ಹೇರಿ, ನೆನೆಸಿಟ್ಟು ಬರುತ್ತಿದ್ದಳು.

ತೋಡಿನ ಮೀನುಗಳು ಅಳಿದುಳಿದ ಇಡ್ಲಿ ತುಣುಕುಗಳನ್ನು ಪಾತ್ರೆಯಿಂದ ಕುಕ್ಕಿ ಹೆಕ್ಕಿ ತಿನ್ನಲು ಮುತ್ತಿಕೊಳ್ಳುತ್ತಿದ್ದುವು. ಮಧ್ಯಾಹ್ನವಾಗುವಾಗ ಮೀನುಗಳಿಗೆ ಹೊಟ್ಟೆ ತುಂಬಿರುತ್ತಿತ್ತು, ಇಡ್ಲಿ ಪಾತ್ರೆಗಳು ಚೆನ್ನಾಗಿ ನೆನೆದಿರುತ್ತಿತ್ತು. ತೆಂಗಿನ ಕಾಯಿಯ ಜಗಟು, ಮಸಿ ಇಂಗಾಳ, ಹುಳಸೆ ಹಣ್ಣು, ಸ್ವಲ್ಪ 501 ಬಾರ್ ಬಟ್ಟೆಯ ಸೋಪು ಬಳಸಿ ಗಸಗಸ ತಿಕ್ಕಿ, ಸ್ವಚ್ಛ ಮಾಡುತ್ತಿದ್ದಳು. ಅಷ್ಟಾಗಿ ಆ ಎಲ್ಲಾ ಇಡ್ಲಿ ಪಾತ್ರೆಯ ಸಂಸಾರವನ್ನು ಮನೆಗೆ ತಂದು ಒಣಗಿಸಿ ಇಡುವಾಗ ಅಜ್ಜಿಗೆ ಮಧ್ಯಾಹ್ನವಾಗುತ್ತಿತ್ತು.

ಅಜ್ಜಿ ನಾಳೆ ಇಡ್ಲಿ ಮಾಡ್ಕಂಡಿದೆ ಮಗಾ ಎಂದು ಮಲಗುವ ಮುನ್ನ ಹೇಳುವಾಗ- ಅವಳಲ್ಲಿ ಏನೋ ಸಮಾಧಾನವೇ ಇತ್ತೆನಿಸುತ್ತದೆ. ಆದರೂ ಇಡ್ಲಿ ಅಟ್ಟು ತೋಡಿನಲ್ಲಿ ತೊಳೆಯುವಾಗ ಸ್ವಲ್ಪ ಅಸಹನೆಯಿಂದಲೇ ಮುತ್ತುವ ಪುಟ್ಟ ಮೀನುಗಳನ್ನು ಕಾಲ್ಕೆಡವಿ ಓಡಿಸಿಕೊಳ್ಳುತ್ತಿದ್ದಳು. ಈ ಇಡ್ಲಿ ಪಾತ್ರೆ ಮತ್ತು ಹೆಣ್ಣಿನ ಸಂಬಂಧ ಪುರಾತನವೇ ಇರಬಹುದು. ಕೆಲವು ಕೆಲಸಗಳೇ ಹಾಗೆ. ಕೆಲಸದ ಒಂದು ಚಿಕ್ಕ ಭಾಗ ಮಾಡಲು ಅದೇನೋ ಒಂದು ರೀತಿಯ ರಗಳೆ, ತಿರಸ್ಕಾರದ ಭಾವ. ಮಾಡಿ ಮುಗಿಸಲು ಹೆಚ್ಚಿನ ಹೊತ್ತು ಬೇಡ. ಕೆಲಸ ಮುಗಿಸಿದ ಮೇಲೆ ಹಾಯೆನಿಸುತ್ತದೆ, ಖುಷಿಯಾಗುತ್ತದೆ, ಸಮಾಧಾನವಾಗುತ್ತದೆ, ನಿರಮ್ಮಳವೆನಿಸುತ್ತದೆ. ಆದರೆ ಅದನ್ನು ಮಾಡಲು ಮಾತ್ರ ಏನೋ ಆಲಸ್ಯ, ಒಂದು ಕಿರಿಕಿರಿ, ಬೇಸರ ಅಥವಾ ಬೋರು.

ಚಟ್ನಿ ಬೀಸುವುದು ಸುಲಭ, ಆದರೆ ಮಿಕ್ಸರ್ ಪಾತ್ರೆ ತೊಳೆಯುವುದು ಕಷ್ಟ. ಬಚ್ಚಲು ಮನೆಯ ಡ್ರೈನ್‌ನಲ್ಲಿ ಸಿಕ್ಕಿರುವ ಕೂದಲನ್ನು ತೆಗೆದು ಎಸೆಯುವುದು, ಬಚ್ಚಲ ನೆಲ ತೊಳೆಯುವುದು, ಫ್ರಿಜ್ ಸ್ವಚ್ಛ ಮಾಡುವುದು, ಅಡುಗೆಯ ನಂತರ ಗ್ಯಾಸ್ ಸ್ಟೋವ್ ಸ್ವಚ್ಛ ಮಾಡುವುದು, ಕಿಟಕಿ ಧೂಳು ಹೊಡೆಯುವುದು, ಹಾಸಿಗೆಯ ಬೆಡ್ ಶೀಟ್ ಬದಲಿಸುವುದು, ವಾಶ್ ಬೇಸಿನ್ ಸ್ವಚ್ಛ ಮಾಡುವುದು. ವಾಷಿಂಗ್ ಮಶೀನ್ ತೊಳೆಯುವ ದೊಡ್ಡ ಕೆಲಸವನ್ನು ಮಾಡಿರುತ್ತದೆ, ಅದನ್ನು ತೆಗೆದು ಒಣಗಿಸಿ, ಆಮೇಲೆ ಮಡಿಸಿ ಇಡುವುದಿದೆಯಲ್ಲ, ಅದು ಕೆಟ್ಟ ರಗಳೆ. ಅದರೊಳಗೆ ನಾಲ್ಕಾರು ವಿಚ್ಛೇದಿತ ಸೋಕ್ಸ್‌ಗಳನ್ನು ಜೋಡಿ ಮಾಡುವುದು, ರಿಪಿರಿಪಿ. ಗಂಡಸರಿಗೆ- ಹೆಂಗಸರಿಗೆ ಎಂದು ಪ್ರತ್ಯೇಕವಿಲ್ಲ. ಕಾರಿನೊಳಗೆ ಏಳು ವರ್ಷ ಹಳೆಯ ಮಂಗಳಪತ್ರ, ಎರಡು ವರ್ಷ ಹಿಂದಿನ ಸಾಮಾನು ಚೀಟಿ, ರಶೀದಿ, ವಾಯ್ದೆ ಮುಗಿದ ಇನ್ಶುರೆ ಪ್ರತಿ ಇತ್ಯಾದಿ. ಕಾರೆಂಬುದು ಕಸದ ಗಾಡಿಯಂತಾಗಿರುತ್ತದೆ, ಕಸ ನಮ್ಮ ಜೊತೆಯ ಓಡಾಡುತ್ತಿರುತ್ತದೆ.

ಕಿರಿಕಿರಿಯೆನಿಸುತ್ತಿರುತ್ತದೆ. ಆದರೆ ಹೆಚ್ಚಾಗಿ ಕಾರನ್ನು ನಿಭಾಯಿಸುವ ಗಂಡು ಜೀವಿಗಳಿಗೆ ಅದನ್ನು ಎಸೆಯಲು ಅದೇ ಆಲಸ್ಯ. ಮನೆಯಿಂದ ಹೊರಡುವಾಗ ಹೋಗುವ ಗಡಿಬಿಡಿ, ಬಂದಾಗ ಮನೆ ಮುಟ್ಟಿ ಮುಖ ತೊಳೆಯುವ ಗಡಿಬಿಡಿ. ಹಾಗಾಗಿ ಕೆಲವೊಮ್ಮೆ ತಿಂದು ಬಿಟ್ಟ ಚಾಕಲೇಟ್ ಕಾಗದ ವರ್ಷಗಟ್ಟಲೆ ನೂರಾರು ಕಿಲೋಮೀಟರ್ ಓಡಾಡಿಬಿಡುತ್ತದೆ. ಆದರೆ ಇಂತಹ ಶಿಲ್ಕಾಗಿ ಕಾಡುವ ಕೆಲಸಗಳನ್ನು ಮಾಡಿ ಮುಗಿಸಿದರೆ, ಆ ಕ್ಷಣವೇ ಆಹ್ಲಾದಕರ ಭಾವ. ಭಾರವನ್ನು ಕೆಳಗಿಳಿಸಿಟ್ಟ ಅನುಭವ. ಕಾರಿನಿಂದ ಕಸವನ್ನು ತೆಗೆದುಹಾಕಿದ ಮೇಲೆ ನಮ್ಮದೇ ಹಳೆಯ ಕಾರು ಮರುಜೀವ ಪಡೆದಂತೆನಿಸುತ್ತದೆ.

ಕಪಾಟನ್ನು ಸ್ವಚ್ಛ ಮಾಡಿದ ಮೇಲೆ ಮೂರ್ನಾಲ್ಕು ದಿನ ಬಾಗಿಲು ತೆರೆದಾಗಲೆಲ್ಲ ಖುಷಿಯಾಗುತ್ತದೆ. ಹರಡಿದ ಚಪ್ಪಲಿ ಸ್ಟ್ಯಾಂಡ್‌ನ ಚಪ್ಪಲಿಗಳನ್ನು ಸರಿಯಾಗಿ ಜೋಡಿಸಿಟ್ಟಾಗ ಮನಸ್ಸಿನೊಳಗೂ ಸ್ವಲ್ಪ ಜಾಗ ಖಾಲಿಯಾದಂತೆನಿಸುತ್ತದೆ. ಇನ್ನು ಮುಂದೆ ಹೀಗೆಯೇ ಇಂತಹ ಕೆಲಸಗಳನ್ನು ಅಲ್ಲಲ್ಲಿಯೇ ಮುಗಿಸಿಕೊಂಡುಬಿಡಬೇಕು ಎಂದು ಪ್ರತಿಜ್ಞೆ ಮಾಡಬೇಕೆನಿಸುತ್ತದೆ. ಆ ಭಾವ ಎಷ್ಟು ಹೊತ್ತು-ದಿನ ಉಳಿಯುತ್ತದೆ ಎನ್ನುವುದು ಬೇರೆ ಪ್ರಶ್ನೆ. ಆದರೆ ಆ ಕ್ಷಣದಲ್ಲಿ ಮಾತ್ರ ನಮಗೆ- ನಾವು ನಮ್ಮ ಜೀವನವನ್ನು ಬಹಳ ಚೆನ್ನಾಗಿ ನಿರ್ವಹಿಸುತ್ತಿದ್ದೇವೆ ಎಂಬ ಭಾವ ಹುಟ್ಟಲು ಅಷ್ಟೇ ಸಾಕು.

ಮನೆಗೆಲಸವಿರಬಹುದು, ಅಥವಾ ಯಾವುದೇ ಚಿಕ್ಕಪುಟ್ಟ ಕೆಲಸಗಳಿರಬಹುದು, ಯಾರೂ ಅದನ್ನು ದ್ವೇಷಿಸುವುದಿಲ್ಲ. ಇಲ್ಲಿ ನಮ್ಮೆಲ್ಲರ ಸಮಸ್ಯೆ ಆ ಚಿಕ್ಕದೇ ಆದ ಕೆಲಸವನ್ನು ಶುರುಮಾಡುವುದು. ಆರಂಭಿಸುವುದೇ ಸವಾಲು. ಒಣಗಿಸಿದ ಬಟ್ಟೆಯನ್ನು ಮಡಿಸಿಡಲು ಶುರುಮಾಡಿದ ಮೇಲೆ ಅದು ಬೇಗನೆ ಮುಗಿದು ಹೋಗುತ್ತದೆ. ಬೆಳಿಗ್ಗೆ ಹೊರ ಹೋಗುವ ಬಟ್ಟೆ ಧರಿಸಿ ಷೂ ಕಟ್ಟಿದಮೇಲೆ ವಾಕಿಂಗ್ ಆಗಿಬಿಡುತ್ತದೆ. ಆದರೆ ಗೇಟಿನಿಂದ ಹೊರ ಬೀಳುವಲ್ಲಿಯವರೆಗಿನ ಪ್ರಮೇಯವೇ ಕಷ್ಟ.

ಎಲ್ಲಾ ಕಾರ್ಯಗಳಲ್ಲೂ- ಇಂಥದ್ದೊಂದು ಕೆಲಸ ಮಾಡಬೇಕಲ್ಲ ಎಂದು ಯೋಚಿಸುವ ಆ ಯೋಚನೆಯನ್ನು ದಾಟಿ ನಿಲ್ಲುವುದೇ ನಿಜವಾದ ಸವಾಲಿನ ಕೆಲಸ. ನಮಗೆಲ್ಲರಿಗೂ ಅಷ್ಟೇ- ಗಡಿಬಿಡಿಯಿಲ್ಲದ, ಆ ಕ್ಷಣದಲ್ಲಿ ಅನಿವಾರ್ಯವೆನಿಸದ ಕೆಲಸ ಮಾಡಲು ಮೊದಲು ಮನಸ್ಸಾಗ ಬೇಕು. ಅದಕ್ಕೊಂದು ಮೂಡ್ ಬರಬೇಕು. ಅದ್ಯಾವುದೋ ಅಗೋಚರ, ಕಾಲ ಕೂಡಿ ಬಂದಾಗ ಅದೆಲ್ಲಿಯೋ ಅವ್ಯಕ್ತದಿಂದ ನಮ್ಮೊಳಗೆ ಪ್ರಕಟವಾಗಿಬಿಡುವ ಪ್ರೇರಣೆ, ಮೂಡ್ ಎಂಬ ಮಾಯೆಯ ನಿರೀಕ್ಷೆ! ಆದರೆ ಇಂದು ಸೂಕ್ಷ್ಮವಿದೆ. ಆ ಮೂಡ್ ಎನ್ನುವುದು ಇಂತಹ ಕೆಲಸಗಳಿಗೆ ಯಾವತ್ತೂ ಎಂದೂ ಬರುವುದೇ ಇಲ್ಲ. ನನಗಂತೂ ಹಾಗೆ.

ಇಂತಹ ಚಿಕ್ಕ ಕೆಲಸವನ್ನು ಆಗೀಗ ಮುಂದೂಡಿರುತ್ತೇವಲ್ಲ ಅದು ಕೊನೆಗೊಂದು ದಿನ, ಕ್ಷಣ ಈಡೇರುವುದು ಯಾವಾಗ ಮತ್ತು ಹೇಗೆ? ಒಂದು ಕ್ಷಣ ನಿಂತು- ನಿನ್ನೆ ಮೊನ್ನೆ ಮುಗಿಸಿದ ಇಂತಹ ಕೆಲಸವೊಂದನ್ನು ನೆನಪಿಸಿಕೊಳ್ಳಿ. ಒಂದೋ ಆ ಕೆಲಸ ಮುಗಿಸಲೇ ಬೇಕಾದ ಅನಿವಾರ್ಯತೆ ಎದುರಾದಾಗ ಮಾಡಿರುತ್ತೀರಿ. ಇಲ್ಲವೇ, ಯಾವುದೋ ಒಂದು ಕ್ಷಣದಲ್ಲಿ ಆ ಚಿಕ್ಕ ಕೆಲಸವನ್ನು ಜಾಸ್ತಿ ಯೋಚಿಸದೆ ಕೈಗೆತ್ತಿಕೊಂಡಿರುತ್ತೀರಿ, ಆಗ ಅದು ಮುಗಿದಿರುತ್ತದೆ.



ಯಾರಿಗೂ ಇವತ್ತು ಟಾಯ್ಲೆಟ್ ಸ್ವಚ್ಛ ಮಾಡಿಬಿಡಬೇಕು ಎಂದು ಮೂಡ್ ಬಂದು ಬಿಡುವುದಿಲ್ಲ. ಅಂತಹ ಮೂಡ್ ಬರೋದು ಒಳ್ಳೆಯ ಲಕ್ಷಣವೂ ಅಲ್ಲ. ಇಂತಹ ಬಹುತೇಕ ಕೆಲಸಗಳು ಯಾವತ್ತೂ ಇದನ್ನೊಂದು ಮಾಡಬೇಕಲ್ಲ ಎಂದು ಯೋಚಿಸಿದರೆ ಕೈಗೆತ್ತಿಕೊಳ್ಳಲು ಆಗುವುದಿಲ್ಲ. -ಕ್ಕನೆ ಶುರುಮಾಡಿ ಬಿಡಬೇಕು- ಆಗ ಅಷ್ಟೇ ಫಕ್ಕನೆ ಮುಗಿದುಬಿಡುತ್ತದೆ. 2 ಸೆಕೆಂಡ್ ರೂಲ-ಎರಡು ನಿಮಿಷದ ನಿಯಮ ಎಂದೊಂದಿದೆ. ಯಾವುದೇ ಕೆಲಸವನ್ನು ಜಾಸ್ತಿ ಯೋಚಿಸದೆ ಮೊದಲ ಎರಡು ನಿಮಿಷ ಮಾಡಿಬಿಡಬೇಕಂತೆ. ಕೆಲಸ ಆರಂಭಿಸಿದ ಮೇಲೆ ಪ್ರೇರಣೆ ತಾನಾಗಿಯೇ ಬರುತ್ತದೆ. ಪ್ರೇರಣೆ ಎಂದರೆ ಮನಸ್ಸಿನ ತಡೆಯನ್ನು ದಾಟಲು ಮಾಡುವ ಆ ಅರೆಕ್ಷಣದ ಧೈರ್ಯವೇ ಇರಬೇಕು !

ನಮ್ಮೆಲ್ಲರ ಬದುಕಿನಲ್ಲೂ ಬಂತು, ಮಾಡಬೇಕಾದ ದೊಡ್ಡ ಕೆಲಸಗಳ ಪಟ್ಟಿಗಿಂತ ಚಿಕ್ಕಪುಟ್ಟ ಕೆಲಸಗಳ ರಾಶಿಯ ತೂಕವೇ ಜಾಸ್ತಿ. ಇವು ಸಿಂಕಿನ ಪಾತ್ರೆಯ ರಾಶಿಯಂತೆ. ಈ ಚಿಕ್ಕಪುಟ್ಟ ಕೆಲಸಗಳನ್ನು ಹಾಗೆಯೇ ಬಿಡುವುದರ ಇನ್ನೊಂದು ಸಮಸ್ಯೆಯೆಂದರೆ ಅವುಗಳನ್ನು ನೆನಪಿನಲ್ಲಿಟ್ಟುಕೊಂಡಿರ 'ಬೇಕಾಗುತ್ತದೆ. ಪಟ್ಟಿ ಬೆಳೆದಂತೆ ನೆನಪಿನಲ್ಲಿಡುವುದು ಕಷ್ಟವಾ ಗುತ್ತದೆ.

ಎಲ್ಲಿ ನೋಡಿದರೂ ಆಗ ಕೆಲಸವೇ ಕಾಣಿಸಲು ಶುರುವಾಗಿಬಿಡುತ್ತದೆ. ಈ ಪಟ್ಟಿ ಬೆಳೆಯುವುದೆಂದರೆ ಅಡುಗೆ ಮನೆಯ ಸಿಂಕಿನಲ್ಲಿ ಪಾತ್ರೆಗಳು ತುಂಬಿದಂತೆ. ಇಂದಿನ ಲೇಖನದ ಉದಾಹರಣೆಗಳನ್ನು ಕಂಡ ನಿಮಗೆ ಇವೆಲ್ಲ ಹೆಚ್ಚಿನದು ಸ್ತ್ರೀ ಕೇಂದ್ರಿತ, ಮನೆಗೆಲಸಕ್ಕೆ ಸಂಬಂಧಿಸಿದ್ದು ಎಂದೆನಿಸ ಬಹುದು. ಆದರೆ ಹಾಗಲ್ಲ.

ಎಲ್ಲರಿಗೂ ಅವರವರದೇ ಆದ ಇಡ್ಲಿ ಅಟ್ಟುಗಳು ಇರುತ್ತವೆ. ಮಕ್ಕಳ ಶಿಕ್ಷಣಕ್ಕೆಂದು ಸೇವಿಂಗ್ಸ್, ಜೀವ ವಿಮೆ, ಆರೋಗ್ಯ ತಪಾಸಣೆ, ಯಾವುದೋ ಒಂದು ಚಿಕ್ಕ ಚರ್ಮದ ಸಮಸ್ಯೆ, ಹಲ್ಲಿನ ಹುಳುಕು, ವಿಲ್ ಮಾಡಿಡುವುದು, ಯಾವುದೋ ಒಂದು ಮನಸ್ತಾಪ, ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದು ಹೀಗೆ ಅಸಂಖ್ಯ ಚಿಕ್ಕಪುಟ್ಟ ಕೆಲಸಗಳನ್ನು ನಾವೆಲ್ಲರೂ ಮುಂದೂಡುತ್ತಲೇ ಇರುತ್ತೇವೆ.

ಇದು ಮನುಷ್ಯ ಸಹಜ ಗುಣ. ಇದಕ್ಕೆ ಗಂಡು- ಹೆಣ್ಣು, ವಯಸ್ಸು ಎಂಬ ಯಾವ ಬೇಧಭಾವವೂ ಇಲ್ಲ. ಈಗೀಗ ಎಲ್ಲರೂ ಡೋಪಮೈನ್ ಬಗ್ಗೆ ಮಾತನಾಡುತ್ತಿರುತ್ತಾರೆ. ಅದೇ ಭಾಷೆಯಲ್ಲಿ ಇದನ್ನು ಹೇಳುವುದಾದರೆ- ನಮ್ಮೆದುರಿಗೆ ಚಿಕ್ಕ ಕೆಲಸ/ ಚಿಕ್ಕ ಕಷ್ಟ ಎದುರಾದಾಗ ಡೋಪಮೈನ್ ಅತ್ಯಲ್ಪ ಪ್ರಮಾಣದಲ್ಲಿ, ಸ್ವಲ್ಪವೇ ಸ್ವಲ್ಪ ಉತ್ಪಾದನೆಯಾಗುತ್ತದಂತೆ. ಒಂದು ಕ್ಷಣ ಬಿಟ್ಟುಬಿಟ್ಟರೆ ಮನಸ್ಸಿನ ವ'ಂದ'ಊಡ'ಂವ' ಸಬೂಬು, ಕಾರಣಗಳು ಇತ್ಯಾದಿ ಶುರುವಾಗಿ ಬಿಡುತ್ತದೆ. ಆ ಕೆಲಸವನ್ನು ಮಾಡದಿರುವುದೇ ಸುಖವೆನಿಸಿಬಿಟ್ಟರೆ ಅದು ಇನ್ನೊಂದು ವಿರುದ್ಧದ ಪ್ರೇರಣೆ, ಅದು ಗೆಲ್ಲುತ್ತದೆ. ಮನೆಗೆಲಸವೆಂದಲ್ಲ, ಆಫೀಸಿನ, ಹೊರ ಕೆಲಸಗಳಲ್ಲೂ ಹಾಗೆಯೇ, ಚಿಕ್ಕಪುಟ್ಟ ಕೆಲಸಗಳ ದೊಡ್ಡ ಪಟ್ಟಿಯನ್ನೇ ನಾವು ಹೊತ್ತು ತಿರುಗುತ್ತಿರುತ್ತೇವೆ. ವೈಯಕ್ತಿಕ ಸಂಬಂಧಗಳಲ್ಲೂ ಅಷ್ಟೇ- ಯಾರಿಗೋ ಫೋನ್ ಮಾಡುವ, ಧನ್ಯವಾದ ಹೇಳುವ, ಕ್ಷಮೆ ಕೇಳುವ- ಇತ್ಯಾದಿ ವಿಷಯಗಳಲ್ಲಿ, ಈ ಚಿಕ್ಕ ಕೆಲಸಗಳ ವ್ಯಾಪ್ತಿ ಅರಿವಿಗೆ ಬಾರದಂತೆ ಇಡೀ ಬದುಕನ್ನು ಆವರಿಸಿರುತ್ತದೆ. ಪಟ್ಟಿ ಬೆಳೆದಂತೆ ಭಾರವೂ ಸ್ವಲ್ಪ ಸ್ವಲ್ಪವೇ ಹೆಚ್ಚುತ್ತಾ ಹೋಗುತ್ತದೆ. ಪರೀಕ್ಷೆಗೆ ಓದುವ ಮಕ್ಕಳು ಓದು ಶುರುಮಾಡುವುದನ್ನು ಮುಂದೂಡುವುದಕ್ಕೂ, ದೊಡ್ಡವರು ಹೊಸ ವೃತ್ತಿಗೆ ಅರ್ಜಿ ಸಲ್ಲಿಸುವುದನ್ನು ಮುಂದೂಡುವುದಕ್ಕೂ ಜಾಸ್ತಿ ಭಾವವ್ಯತ್ಯಾಸವಿಲ್ಲ. ಸಂಸ್ಕೃತದಂದು ಉಕ್ತಿಯಿದೆ.

> ನನ್ನ ಅಜ್ಜಿಯ ಮನೆ ತುಂಬು ಕುಟುಂಬ. ಮನೆಯಲ್ಲಿ ನಿತ್ಯ ಬೆಳಗ್ಗಿನ ಉಪಹಾರಕ್ಕೆ ಮನೆ ಜನರೇ ಎಂಟು ಹತ್ತು. ಜೊತೆಯಲ್ಲಿ ಭತ್ತದ ಹೂಟಿ, ನೆಟ್ಟಿ, ಕೊಯ್ಲು ಇತ್ಯಾದಿ ಇರುವಾಗ ಕೃಷಿ ಕಾರ್ಮಿಕರು. ಹದಿನೈದಿಪ್ಪತ್ತು ಜನರಿಗೆ ದೋಸೆ ಮಾಡಿ ಬಡಿಸುವುದೆಂದರೆ ಒಪ್ಪತ್ತಿನ ಕೆಲಸ. ತಡವಾಗಿಬಿಡುತ್ತದೆ. ಹಾಗಾಗಿ ಅಂತಹ ದಿನಗಳಲ್ಲಿ ಅಜ್ಜಿ ಶೆಖೆ ಹಿಟ್ಟು (ಉಡುಪಿ ಕಡೆ ಮಾಡುವ ಒಂದು ಬಗೆಯ ಇಡ್ಲಿ) ಮಾಡುತ್ತಿದ್ದಳು.

ಷಡ್ದೋಷಾಃ ಪುರುಷೇಣೇಹ ಹಾತವ್ಯಾ ಭೂತಿಮಿಚ್ಛತಾ
ನಿದ್ರಾ ತಂದ್ರಾ ಭಯಂ ಕ್ರೋಧಃ ಆಲಸ್ಯಂ ದೀರ್ಘಸೂತ್ರತಾ

ಅಭಿವೃದ್ಧಿ ಮತ್ತು ಸಮೃದ್ಧಿಯನ್ನು ಬಯಸುವ ವ್ಯಕ್ತಿ ಅತಿಯಾದ ನಿದ್ರೆ, ಜಡತ್ವ, ಭಯ, ಕೋಪ, ಆಲಸ್ಯ ಮತ್ತು ಕೆಲಸಗಳನ್ನು ಮುಂದೂಡುವ ಸ್ವಭಾವ- ಈ ಆರು ದೋಷಗಳನ್ನು ತ್ಯಜಿಸಬೇಕು. ಆದರೆ ನಿಜ ಜೀವನದಲ್ಲಿ ಈ ಮುಂದೂಡುವ ಸ್ವಭಾವವನ್ನು ಮೀರಿ ನಿಲ್ಲುವುದೇ ಮೊದಲಿನೆಲ್ಲವುದಕ್ಕಿಂತ ಕಷ್ಟ.

ಆಧುನಿಕ ಜೀವನ ಬಹುತೇಕ ಕೆಲಸಗಳನ್ನು ಸುಲಭಗೊಳಿಸಿದೆ. ಆದರೆ ಬದುಕನ್ನು ನಾವು ಕಷ್ಟವೆಂದು ಕೊಂಡಿರುವ ಪ್ರಮಾಣ ಮಾತ್ರ ತಗ್ಗಿಲ್ಲ. ಪ್ರತಿಯೊಂದು ಕೆಲಸದಲ್ಲಿರುವ ಕಿರಿಕಿರಿ, ಅಡಚಣೆಗಳನ್ನು ಕಡಿಮೆ ಮಾಡಿಕೊಳ್ಳುತ್ತಲೇ ನಾವು ಆಧುನಿಕಗೊಂಡಿದ್ದೇವೆ. ಆಹಾರ ಮನೆ ಬಾಗಿಲಿಗೇ ಬರುತ್ತದೆ. ಶಾಪಿಂಗ್ ಮಾಡಲು ಮೊಬೈಲ್‌ನಲ್ಲಿ ಕೆಲವೇ ಬಾರಿ ಟ್ಯಾಪ್ ಮಾಡಿದರೆ ಸಾಕು. ಬಟ್ಟೆಗಳನ್ನು ಯಂತ್ರವೇ ತೊಳೆದು ಕೊಡುತ್ತದೆ. ಫೋನ್‌ಗಳು ಪಾಸ್‌ವರ್ಡ್‌ಗಳನ್ನು ನೆನಪಿಟ್ಟುಕೊಳ್ಳುತ್ತವೆ.

ಆಪ್‌ಗಳು ನಮ್ಮ ಅಪಾಯಿಂಟ್ ಮೆಂಟ್‌ಗಳನ್ನು ನೆನಪಿಸುತ್ತವೆ. ಮನರಂಜನೆ ನಮಗೆ ಪಾಯಿಖಾನೆಯಲ್ಲೂ ಲಭ್ಯ. ನಾವು ಅನುಕೂಲಕ್ಕೆ ನಾವು ಎಷ್ಟರಮಟ್ಟಿಗೆ ಒಗ್ಗಿಕೊಂಡಿದ್ದೇವೆ ಎಂದರೆ, ಚಿಕ್ಕ ನಾವೇ ಮಾಡಿಕೊಳ್ಳಬೇಕಾದ ಕೆಲಸಕ್ಕೆ ಕೆಲಸದವರು ಬೇಕು. ಚಿಕ್ಕ ಕೆಲಸಗಳೆಡೆಗೆ ಸಾಮೂಹಿಕ ವಾಗಿಯೇ ನಮ್ಮೆಲ್ಲರ ಸಹನೆಯ ಮಟ್ಟ ತಗ್ಗಿದೆ. ಯಾರಿಗೂ ಈ ಕೆಲಸಗಳನ್ನು ಮಾಡಲು ಸಾಧ್ಯವಿಲ್ಲ ಎಂದಲ್ಲ. ಎಲ್ಲರೂ ಸಾವಿರ ಕಷ್ಟದ ಕೆಲಸಗಳನ್ನು ಮಾಡಬಲ್ಲರು. ಆದರೆ ಬೇಸರ ತರಿಸುವ, ಅಷ್ಟೇನೂ ಇಷ್ಟವಾಗದ, ಪದೇಪದೆ ಮಾಡಬೇಕಾದ ಕೆಲಸದತ್ತ ಕ್ರಮೇಣ ನಮ್ಮೆಲ್ಲರ ಸಹನೆ ಕ್ಷೀಣಿಸುತ್ತಲೇ ಇದೆ.

ಯಾವುದೇ ಕೆಲಸ ತಕ್ಷಣಕ್ಕೆ ಸಂತೋಷ ನೀಡದದಿದ್ದರೆ ಆಮೇಲೆ ಮಾಡಿದರಾಯ್ತು ಎಂದೆನಿಸುವುದು ಸಹಜವಾಗಿದೆ. ನನಗೂ ಕೂಡ. ಇಂತಹ ಆಲಸ್ಯ ಎದುರಾಗಿ, ಮಾಡಬೇಕಾದ ಕೆಲಸದ ಪಟ್ಟಿ ಆಗೀಗ ಬೆಳೆದು ಎಲ್ಲರಿಗೂ ಚಿಕ್ಕದೊಂದು ತಲೆಬಿಸಿಯನ್ನುಂಟುಮಾಡುತ್ತದೆ. ನಾನು ಈ ಮೂರು ವಾಕ್ಯವನ್ನು ನನ್ನ ಡೆಸ್ಕಿನಲ್ಲಿ ಬರೆದು ಅಂಟಿಸಿಕೊಂಡಿದ್ದನ್ನು ನಿಮ್ಮ ಜೊತೆ ಹಂಚಿಕೊಳ್ಳುತ್ತೇನೆ.

ಕೆಲಸವನ್ನು ಮಾಡಬೇಕಲ್ಲ ಎಂದು ಯೋಚಿಸಬಾರದು, ಶುರುಮಾಡಿಬಿಡಬೇಕು. ಆರಂಭಿಸಿದ ಮೇಲೆ ಪ್ರೇರಣೆ ಹುಟ್ಟಿಕೊಳ್ಳುತ್ತದೆ. ನಾವು ಮುಂದೂಡುತ್ತಿರುವ ಕೆಲಸಗಳ ಆಚೆಯೇ ನಾವು ಬಯಸಿದ ಬದುಕು ಕೂತಿರುವುದು. ಚಿಯರ್ಸ್.

**- ಶಿಶಿರ್** ಹೆಗಡೆ





## ಲಾವೋಸ್ ದೇಶಕ್ಕೆ ಹೆಸರು ಬಂದ ಕಥೆ

ಕಳೆದ ವಾರ ಸಿಂಗಾಪುರ ದೇಶಕ್ಕೆ ಹೆಸರು ಬಂದ ಕಥೆಯನ್ನು ಓದಿರುವಿರಿ. ಪ್ರವಾಸಿಗರ ಸ್ವರ್ಗ ಎಂದೇ ಕರೆಯಲ್ಪಡುವ ಇನ್ನೊಂದು ದೇಶ ಲಾವೋಸ್. ಇದು ಆಗ್ನೇಯ ಏಷ್ಯಾದಲ್ಲಿರುವ ಸಂಪೂರ್ಣವಾಗಿ ನೆಲಾವೃತವಾದ ಒಂದು ಸುಂದರ ರಾಷ್ಟ್ರವಾಗಿದೆ. ವಿಯೆಂಟಿಯಾನ್ ಎನ್ನುವುದು ಲಾವೋಸ್‌ನ ರಾಜಧಾನಿ. ಚೀನಾ, ವಿಯೆಟ್ನಾಂ, ಕಾಂಬೋಡಿಯಾ, ಥೈಲ್ಯಾಂಡ್ ಮತ್ತು ಮ್ಯಾನ್ಮಾರ್ ದೇಶಗಳೊಂದಿಗೆ ಲಾವೋಸ್ ತನ್ನ ಗಡಿಯನ್ನು ಹಂಚಿಕೊಂಡಿದೆ.

ಲಾವೋಸ್ ಎಂಬ ಪುಟ್ಟ ದೇಶವು 14ನೇ ಶತಮಾನದಲ್ಲಿ ಲಾಂಗ್ ಝೂಂಗ್ ಸಾಮ್ರಾಜ್ಯದಿಂದ ರೂಪುಗೊಂಡಿತು. ನಂತರ ಫ್ರೆಂಚ್ ವಸಾಹತಾಗಿ, 1953ರಲ್ಲಿ ಸ್ವಾತಂತ್ರ್ಯ ಪಡೆಯಿತು. ಪ್ರಸ್ತುತ ಲಾವೋಸ್‌ನಲ್ಲಿ ಕಮ್ಯೂನಿಸ್ಟ್ ಸರಕಾರವಿದೆ. ನಿಮಗೆ ಲಾವೋಸ್ ಎನ್ನುವ ಹೆಸರು ಹೇಗೆ ಬಂತು ಅನ್ನೋ ಕುತೂಹಲವಿರಬಹುದಲ್ಲವೇ? ಅದಕ್ಕೆ ಕಾರಣ ಲಾವೋ ಎನ್ನುವ ಮೂಲ ನಿವಾಸಿಗಳ ಗುಂಪು. ಲಾವೋ ಜನರ ಅಥವಾ ಮಂದಿಯ ಸಾಮ್ರಾಜ್ಯ ಎಂದು ಕರೆಯಲಾಗುವ ಇದಕ್ಕೆ ಹಳೆಯ ಫ್ರೆಂಚ್ ಹೆಸರಾದ ರಾಯೌಮ್ ಡೆಸ್ ಲಾವೋಸ್‌ನಿಂದಲೂ ಬಂದಿರಬಹುದು ಎನ್ನುತ್ತಾರೆ. ಲಾವೋ ಎಂದರೆ ಏನು ಎಂದು ಸ್ಪಷ್ಟ ಮಾಹಿತಿ ಇಲ್ಲ. ಬಹುಷ ಇದೊಂದು ಮೂಲ ನಿವಾಸಿಗಳ ಗುಂಪಿನ ಹೆಸರಿರಬಹುದು ಎನ್ನುತ್ತಾರೆ ಇತಿಹಾಸಕಾರರು.

ಚೀನಾ ಮತ್ತು ವಿಯಟ್ನಾಂ ದೇಶದ ಹಳೆಯ ದಾಖಲೆಗಳಲ್ಲಿ ಲಾವೋ ಬಗ್ಗೆ ಒಂದು ಮಾಹಿತಿ ಇದೆ. ಅದನ್ನು ಕೇಳಿದರೆ ನಿಮಗೆ ಅಚ್ಚರಿಯಾದೀತು. ರಾಮಾಯಣದ ಲವ (ಶ್ರೀರಾಮನ ಮಗ) ನಿಗೂ ಲಾವೋಸ್‌ಗೂ ನಂಟು ಇದೆ ಎನ್ನಲಾಗಿದೆ. ಇದು ಎಷ್ಟು ಸತ್ಯ ಎನ್ನುವುದನ್ನು ಹೇಳಲಾಗದಿದ್ದರೂ ದಾಖಲಾತಿಗಳಲ್ಲಿ ಅಡಕವಾಗಿರುವುದರಿಂದ ಏನಾದರೂ ನಂಟು ಇದ್ದಿರಲೂಬಹುದು. ಇದು ಲಾವೋಸ್ ನ ನಾಮ ಪುರಾಣ.

ಲಾವೋಸ್‌ನ ವಿಶೇಷತೆ ಎಂದರೆ ಇದು ವಿಶ್ವದ ಅಗ್ಗದ ದೇಶಗಳಲ್ಲಿ ಒಂದು ಎನ್ನುವ ಖ್ಯಾತಿ ಪಡೆದುಕೊಂಡಿದೆ. ಕಡಿಮೆ ವೆಚ್ಚದಲ್ಲಿ ಪ್ರವಾಸ ಮಾಡಲು ಲಾವೋಸ್ ಉತ್ತಮ ಆಯ್ಕೆ. ಇಲ್ಲಿರುವ ಲುವಾಂಗ್ ಪ್ರಬಾಂಗ್ ಯುನೆಸ್ಕೋ ವಿಶ್ವ ಪರಂಪರೆಯ ತಾಣಗಳಲ್ಲಿ ಒಂದಾಗಿದೆ.

**- ಕೆ.ಪಿ.ಅಶ್ವಿನ್** ರಾವ್

## ಸನ್ ಸಿಟಿಯ ಸಿಹಿ ನೆನಪು: ಟೆಂಟ್ ಕಬ್ಬಿನ ಹಾಲು

ಸನ್ ಸಿಟಿ ಎಂದೇ ಪ್ರಸಿದ್ಧವಾಗಿರುವ ನಗರ ನಮ್ಮ ಗುಲಬರ್ಗಾ. ಬಹುಶಃ ಡೆಕ್ಕನ್ ಹೆರಾಲ್ಡ್ ಪೇಪರ್ ಅಲ್ಲಿ ಮೊದಲ ಬಾರಿಗೆ ಈ ಹೆಸರ ಪ್ರಯೋಗ ಆಗಿತ್ತು. ಇದನ್ನು ಈಗ ಮೂಲನಾಮದಿಂದ ಕರೆಯುತ್ತಾರೆ ಸರ್ಕಾರಿ ದಾಖಲೆಗಳಲ್ಲಿ, ಕಲಬುರಗಿ ಎಂದು. ತೊಂಭತ್ತರ ದಶಕದಲ್ಲಿ ಈಗಿನಂತೆ ಹೋಟೆಲ್, ಮಾಲ್ ಮತ್ತೆ ಮಲ್ಟಿಪ್ಲೆಕ್ಸ್ ಇರಲಿಲ್ಲ. ಆವಾಗ ಏನಿದ್ದರೂ ರಸ್ತೆ ಬದಿಯ ಮಿರ್ಚಿ ಭಜಿ, ಪಾನಿ ಪೂರಿ, ಹೋಟೆಲುಗಳಲ್ಲಿ ಇಡ್ಲಿ, ದೋಸೆ, ಪೂರಿ ಇತ್ಯಾದಿ ತಿಂದುಕೊಂಡು ಸಿನಿಮಾ ಟಾಕಿಸಿನಲ್ಲಿ ಸಿನಿಮಾ ನೋಡಿ ಪಬ್ಲಿಕ ಗಾರ್ಡನ್ ಅಲ್ಲಿ ಸಮಯ ಕಳೆಯುತ್ತಿತ್ತು.

ಹಾಗೆ ನೋಡಿದರೆ ಬಿಸಿಲು ಯಾವಾಗಲೂ ಯಥೇಚ್ಛವಾಗಿ ಇದ್ದರೂ, ಬೇಸಿಗೆ ಅಂತ ಆಫೀಷಿಯಲ್ ಕಾಲ ಬಂದಾಗ ಹುಟ್ಟಿಕೊಳ್ಳುತ್ತಿದ್ದ ವಿಶೇಷ ಅಂಗಡಿಗಳೆಂದರೆ ಕಬ್ಬಿನ ಹಾಲಿನ ಅಂಗಡಿ. ಖಾಲಿ ಪ್ಲಾಟ್‌ಗಳಲ್ಲಿ ಒಂದು ದೊಡ್ಡ ಟೆಂಟ್ ಹಾಕಿ, ಒಳಗಡೆ ಸುತ್ತಲೂ ಕುಳಿತುಕೊಳ್ಳಲು ಕುರ್ಚಿಗಳ ವ್ಯವಸ್ಥೆ ಇರುತ್ತಿತ್ತು. ಒಳಗೆ ಚಿಕ್ಕ ಟೆಂಟ್ ಅಲ್ಲಿ ಒಂದು ಗಾಣ, ಎತ್ತು ಅದರ ಸುತ್ತಲೂ ಸುತ್ತುವುದು, ಮಧ್ಯೆ ಕಬ್ಬನ್ನು ಗಾಣದಲ್ಲಿ ಹಾಕುತ್ತಿದ್ದರು. ನೊರೆ ನೊರೆಯಾಗಿ ಬರುತ್ತಿದ್ದ ಕಬ್ಬಿನ ಹಾಲು ನೋಡಲು ಖುಷಿ ಮತ್ತೆ ಅದನ್ನ ಐಸ್ ಜೊತೆ ಗ್ಲಾಸಲಿ ಹಾಕಿ ಕುಳಿತಲ್ಲೇ ತಂದುಕೊಡುತ್ತಿದ್ದರು. ಈ ಟೆಂಟ್‌ಗಳು ಆಗಿನ ವೈಶಿಷ್ಟ್ಯ ಆಗಿತ್ತು.

ಮುಂದೆ ಕಾಲ ಬದಲಾದಂತೆ ಮೋಟಾರ್ ಇಂದ ಕಬ್ಬು ಹಿಂಡಲಾಗುತ್ತಿತ್ತು. ಟೆಂಟ್ ಬದಲು ಈಗ ಚಿಕ್ಕ ಚಿಕ್ಕ ಬಂಡಿಗಳು ಬಂದವು. ಆ ಉರಿಯುವ ಬಿಸಿಲಲ್ಲಿ ಕುಡಿಯುತ್ತಿದ್ದ ತಣ್ಣನೆ ಕಬ್ಬಿನ ಹಾಲು ಉಷ್ಣ ಎಂದು ನಮಗೆ ಗೊತ್ತೆ ಇರಲಿಲ್ಲ. ಅದನ್ನು ಪರಿವಾರ ಸಮೇತ ಕುಡಿಯುವುದೇ ಒಂದು ಖುಷಿ.

ಈಗ ಕಬ್ಬಿನ ಹಾಲು ಪೇಪರ್ ಕಪ್ ಅಲ್ಲಿ ಕುಡಿಯುವಾಗ ಅದರ ರುಚಿ ಬೇರೆಯೇ ಆಗಿರುತ್ತದೆ. ಮಿಂಟ್, ಬ್ಲ್ಯಾಕ್ ಸಾಲ್ಟ್, ಶುಂಠಿ ಹೀಗೆ ವೈವಿಧ್ಯತೆ ಈಗ ಇದ್ದರೂ ಬೇಸಿಗೆಯಲ್ಲಿ ಮಾತ್ರ ದೊರೆಯುತ್ತಿದ್ದ ಪ್ಲೇನ್ ಅಥವಾ ನಿಂಬೆಯೊಂದಿನ ಆ ವಿಶೇಷತೆ ಈಗ ಮರೆಯಾಗಿದೆ.

ವಿಷಯಗಳು ಯಾವಾಗಲೂ ವಿರಳವಾಗಿದ್ದರೆ ಸೊಗಸು. ಅದು ಬೇಗೆಯಲ್ಲಿ ಸಿಗುತ್ತಿದ್ದ ಕಬ್ಬಿನ ಹಾಲಂಗಡಿ ಇರಬಹುದು ಇಲ್ಲವೇ ವರ್ಷಕ್ಕೊಮ್ಮೆ ಬರುತ್ತಿದ್ದ ಅಪ್ಪನ ಜಾತ್ರೆ ಆಗಿರಬಹುದು. ಈಗ ಎಲ್ಲೆಡೆ ಜಾತ್ರೆ, ಎಲ್ಲೆಡೆ ತಿಂಡಿ ತಿನಿಸು ಆದರೆ ವಿಶೇಷತೆ ಮರೆಯಾಗಿದೆ.



## ಪ್ರಕೃತಿಯ ಮಡಿಲಲ್ಲಿರುವ ಸುಂದರ ಗಿರಿಧಾಮ – ಕೆಮ್ಮಣ್ಣುಗುಂಡಿ

### ಕೆಮ್ಮಣ್ಣುಗುಂಡಿಯ ಪ್ರಮುಖ ಆಕರ್ಷಣೆಗಳು :

- ಝಡ್ ಪಾಯಿಂಟ್ : ಪಶ್ಚಿಮ ಘಟ್ಟಗಳ ಹಸಿರು ಬೆಟ್ಟಗಳು ಮತ್ತು ಸುಂದರ ಕಣಿವೆಗಳ ವಿಹಂಗಮ ನೋಟವನ್ನು ಸವಿಯಬಹುದಾದ ಪ್ರಸಿದ್ಧ ವೀಕ್ಷಣಾ ಸ್ಥಳ.
- ಹೆಬ್ಬೆ ಜಲಪಾತ : ಹಚ್ಚಹಸಿರಿನ ಕಾಡಿನ ನಡುವೆ ಧುಮ್ಮಿಕ್ಕುವ ಈ ಜಲಪಾತವು ಪ್ರವಾಸಿಗರ ಮನಸೂರೆಗೊಳ್ಳುತ್ತದೆ.
- ರಾಜಭವನ ಮತ್ತು ಉದ್ಯಾನ : ಸುಂದರ ಉದ್ಯಾನಗಳು, ಹೂವಿನ ಗಿಡಗಳು ಹಾಗೂ ಸೂರ್ಯಾಸ್ತದ ಮನಮೋಹಕ ದೃಶ್ಯಗಳನ್ನು ಇಲ್ಲಿ ಕಾಣಬಹುದು.
- ಶಾಂತಿ ಜಲಪಾತ : ಪ್ರಕೃತಿಯ ಮಡಿಲಿನಲ್ಲಿ ನೆಲೆಸಿರುವ ಈ ಜಲಪಾತವು ಪ್ರವಾಸಿಗರಿಗೆ ಪ್ರಶಾಂತ ವಾತಾವರಣವನ್ನು ಒದಗಿಸುತ್ತದೆ.
- ಕಲ್ಹತ್ತಿ ಜಲಪಾತ : ಸುಂದರವಾದ ಜಲಪಾತದ ಜೊತೆಗೆ ದೇವಾಲಯವನ್ನೂ ಹೊಂದಿರುವ ಈ ಸ್ಥಳವು ಧಾರ್ಮಿಕ ಹಾಗೂ ಪ್ರಕೃತಿ ಪ್ರವಾಸಕ್ಕೆ ಪ್ರಸಿದ್ಧವಾಗಿದೆ. ಕೆಮ್ಮಣ್ಣುಗುಂಡಿಯ ಸಮೀಪವಿರುವ ಈ ಜಲಪಾತವು ಬಂಡೆಗಳ ಮೇಲಿಂದ ಹರಿಯುತ್ತದೆ. ಇಲ್ಲಿನ ವೀರಭದ್ರೇಶ್ವರ ದೇವಾಲಯವು ಧಾರ್ಮಿಕ ಹಾಗೂ ಐತಿಹಾಸಿಕ ಮಹತ್ವವನ್ನು ಹೊಂದಿದೆ.

ಕೆಮ್ಮಣ್ಣುಗುಂಡಿ ಕರ್ನಾಟಕದ ಚಿಕ್ಕಮಗಳೂರು ಜಿಲ್ಲೆಯಲ್ಲಿರುವ ಪ್ರಸಿದ್ಧ ಗಿರಿಧಾಮವಾಗಿದೆ. ಪಶ್ಚಿಮ ಘಟ್ಟಗಳ ಮಡಿಲಲ್ಲಿ ನೆಲೆಸಿರುವ ಈ ಸುಂದರ ಪ್ರವಾಸಿ ತಾಣವು ಹಚ್ಚಹಸಿರಿನ ಬೆಟ್ಟಗಳು, ವಿಶಾಲವಾದ ಕಣಿವೆಗಳು, ತಂಪಾದ ಹವಾಮಾನ, ಮಂಜಿನಿಂದ ಆವೃತವಾದ ಪರ್ವತಗಳು ಹಾಗೂ ಮನಮೋಹಕ ಜಲಪಾತಗಳಿಂದ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಸಮುದ್ರಮಟ್ಟದಿಂದ ಸುಮಾರು



1,434 ಮೀಟರ್ ಎತ್ತರದಲ್ಲಿರುವ ಕೆಮ್ಮಣ್ಣುಗುಂಡಿಯನ್ನು ರಾಜರ ಗಿರಿಧಾಮ ಎಂದೂ ಕರೆಯಲಾಗುತ್ತದೆ. ಮೈಸೂರು ಸಂಸ್ಥಾನದ ರಾಜರಾಗಿದ್ದ ಕೃಷ್ಣರಾಜ ಒಡೆಯರ್ ನಾಲ್ಕನೆಯವರು ಈ ಪ್ರದೇಶವನ್ನು ತಮ್ಮ ಬೇಸಿಗೆ ತಂಗುದಾಣವನ್ನಾಗಿ ಬಳಸಿಕೊಂಡಿದ್ದರು. ಅವರ ಹೆಸರಿನೊಂದಿಗೆ ಈ ಗಿರಿಧಾಮದ ಇತಿಹಾಸವೂ ಬೆಸೆದುಕೊಂಡಿದೆ. ಕೆಮ್ಮಣ್ಣುಗುಂಡಿಯು ಚಾರಣ, ಪ್ರಕೃತಿ ವೀಕ್ಷಣೆ, ಛಾಯಾಗ್ರಹಣ ಹಾಗೂ ಕುಟುಂಬದೊಂದಿಗೆ ವಿಶ್ರಾಂತಿಯ ಪ್ರವಾಸ ಕೈಗೊಳ್ಳಲು ಸೂಕ್ತವಾದ ತಾಣವಾಗಿದೆ. ಮಳೆಗಾಲದ ನಂತರ ಮತ್ತು ಚಳಿಗಾಲದಲ್ಲಿ ಇಲ್ಲಿನ ಪ್ರಕೃತಿ ಸೌಂದರ್ಯ ವಿಶೇಷವಾಗಿ ಮನಮೋಹಕವಾಗಿರುತ್ತದೆ. ಒಟ್ಟಿನಲ್ಲಿ, ಕೆಮ್ಮಣ್ಣುಗುಂಡಿಯು ಕರ್ನಾಟಕದ ಪ್ರಕೃತಿ ಸೌಂದರ್ಯ, ಹಸಿರು ಪರಿಸರ ಮತ್ತು ರಾಜವೈಭವದ ಇತಿಹಾಸವನ್ನು ಒಂದೇ ಸ್ಥಳದಲ್ಲಿ ಪರಿಚಯಿಸುವ ಸುಂದರ ಪ್ರವಾಸಿ ತಾಣವಾಗಿದೆ. ಇಲ್ಲಿಗೆ ಭೇಟಿ ನೀಡುವ ಪ್ರವಾಸಿಗರು ಪ್ರಕೃತಿಯ ಮಡಿಲಲ್ಲಿ ನೆಮ್ಮದಿ ಮತ್ತು ಸಂತೋಷವನ್ನು ಅನುಭವಿಸಬಹುದು.

**- ರಮೇಶ ನಾಯ್ಕ,** ಉಪ್ಪುಂದ, ಬೈಂದೂರು

## ಸಂಶಯ

ಅವರಿಬ್ಬರ ನಡುವೆ ಪ್ರೀತಿ ಕಡಿಮೆಯಾಗಿರಲಿಲ್ಲ. ಆದರೆ ಒಂದು ದಿನ, ಯಾರೋ ಬಿತ್ತಿದ ಸಂಶಯದ ಸಣ್ಣ ಬೀಜ ಅವರ ಬದುಕಿನೊಳಗೆ ಬಿದ್ದುಬಿಟ್ಟಿತು. ಅವನು ನಿನ್ನನ್ನು ನಿಜವಾಗಿಯೂ ಪ್ರೀತಿಸುತ್ತಾನಾ? ಅವಳು ನಿನ್ನಿಂದ ಏನನ್ನಾದರೂ ಮುಚ್ಚಿಡುತ್ತಿದ್ದಾಳಾ? ಮೊದಲು ಅದು ಕೇವಲ ಒಂದು ಪ್ರಶ್ನೆಯಾಗಿತ್ತು. ನಂತರ ಅನುಮಾನವಾಯಿತು. ಅನುಮಾನ ನಿಧಾನವಾಗಿ ನಂಬಿಕೆಯನ್ನು ತಿಂದುಹಾಕಿತು. ಒಬ್ಬರನ್ನೊಬ್ಬರು ಕೇಳಬೇಕಾದ ಮಾತುಗಳನ್ನು ಇಬ್ಬರೂ ತಮ್ಮೊಳಗೇ ಇಟ್ಟುಕೊಂಡರು. ಮಾತಾಡಬೇಕಾದಾಗ ಮೌನವಾಗಿದ್ದರು.

ಸ್ಪಷ್ಟಪಡಿಸಬೇಕಾದಾಗ ದೂರ ನಿಂತರು. ಅವರೇ ಮೊದಲು ಮಾತನಾಡಲಿ... ಎಂದು ಇಬ್ಬರೂ ಕಾಯುತ್ತಲೇ ಇದ್ದರು. ಕೊನೆಗೆ ಒಂದು ದಿನ, ಯಾವುದೇ ಜಗಳವಿಲ್ಲದೆ ಅವರ ದಾರಿಗಳು ಬೇರ್ಪಟ್ಟವು. ವರ್ಷಗಳು ಕಳೆದವು. ಜೀವನ ಇಬ್ಬರನ್ನೂ ಬೇರೆ ಬೇರೆ ಕಡೆಗೆ ಕರೆದೊಯ್ದಿತು. ಹೊಸ ಜನರು ಬಂದರು. ಹೊಸ ಬದುಕು ಶುರುವಾಯಿತು. ಆದರೆ ಹಳೆಯ ನೆನಪು ಮಾತ್ರ ಎಲ್ಲೋ ಮನಸ್ಸಿನ ಮೂಲೆಯಲ್ಲಿ ಹಾಗೆಯೇ ಉಳಿಯಿತು. ಹತ್ತು ವರ್ಷಗಳ ನಂತರ... ಅಕಸ್ಮಾತ್ ಇಬ್ಬರೂ ಮತ್ತೆ ಭೇಟಿಯಾದರು. ಸ್ವಲ್ಪ ಹೊತ್ತು ಮಾತೇ ಬರಲಿಲ್ಲ. ಯಾರೂ ನಿಜವಾಗಿಯೂ ತಪ್ಪಿತಸ್ಥರಾಗಿರಲಿಲ್ಲ. ಮಾತಾಡದೇ ಇದ್ದದ್ದೇ ಅವರ ದೊಡ್ಡ ತಪ್ಪಾಗಿತ್ತು. ಇಬ್ಬರೂ ನಕ್ಕರು. ಆ ನಗುವಿನೊಳಗೆ ಹತ್ತು ವರ್ಷಗಳ ನೋವಿತ್ತು. ಆದರೆ ಈಗ ಸತ್ಯ ತಿಳಿದಿತ್ತು. ಆದರೆ ಸಮಯ ಮರಳಿ ಬಂದಿರಲಿಲ್ಲ. ಅವರು ತಮ್ಮ ತಮ್ಮ ದಾರಿಯಲ್ಲಿ ಹೊರಟರು. ಹಿಂದೆ ತಿರುಗಿ ನೋಡಿದಾಗ ಇಬ್ಬರ ಕಣ್ಣಲ್ಲೂ ಒಂದೇ ಪ್ರಶ್ನೆ ನಾವು ಆಗ ಮೌನವಾಗಿರದೆ, ಒಮ್ಮೆ ಮನಬಿಚ್ಚಿ ಮಾತನಾಡಿದ್ದರೆ... ನಮ್ಮ ಬದುಕು ಹೇಗಿರುತ್ತಿತ್ತೋ? ಕೆಲವೊಮ್ಮೆ ಸಂಬಂಧಗಳನ್ನು ಮುರಿಯುವುದು ದ್ವೇಷವಲ್ಲ... ಮಾತನಾಡದ ಮೌನ.




> **ಹತ್ತು ವರ್ಷಗಳ ನಂತರ...**
> **ಅಕಸ್ಮಾತ್ ಇಬ್ಬರೂ ಮತ್ತೆ ಭೇಟಿಯಾದರು. ಸ್ವಲ್ಪ ಹೊತ್ತು ಮಾತೇ ಬರಲಿಲ್ಲ. ಯಾರೂ ನಿಜವಾಗಿಯೂ ತಪ್ಪಿತಸ್ಥರಾಗಿರಲಿಲ್ಲ. ಮಾತಾಡದೇ ಇದ್ದದ್ದೇ ಅವರ ದೊಡ್ಡ ತಪ್ಪಾಗಿತ್ತು. ಇಬ್ಬರೂ ನಕ್ಕರು. ಆ ನಗುವಿನೊಳಗೆ ಹತ್ತು ವರ್ಷಗಳ ನೋವಿತ್ತು. ಆದರೆ ಈಗ ಸತ್ಯ ತಿಳಿದಿತ್ತು. ಆದರೆ ಸಮಯ ಮರಳಿ ಬಂದಿರಲಿಲ್ಲ.**

**- ಧೀರಜ್** ಬೆಳ್ಳಾರೆ

# ಅ.1ರಿಂದ ಗ್ರಾಹಕರಿಗೆ ಬೆಲೆ ಏರಿಕೆ ಬಿಸಿ

## ದಸರಾ, ದೀಪಾವಳಿ ಸಂಭ್ರಮದಿಂದ ಎ.ಸಿ., ಟಿ.ವಿ. ಗೃಹೋಪಯೋಗಿ ಉತ್ಪನ್ನಗಳು ದುಬಾರಿ

• ಪ್ರಜೋದಯ ವರದಿ

**ನವದೆಹಲಿ:** ಮುಂಬರುವ ದಸರಾ, ದೀಪಾವಳಿ ಹಬ್ಬಗಳ ಸಂಭ್ರಮದಲ್ಲಿದ್ದ ಗ್ರಾಹಕರ ಜೇಬಿಗೆ ಕತ್ತರಿ ಬೀಳುವುದು ಖಚಿತವಾಗಿದೆ. ಪ್ರಮುಖ ಗೃಹೋಪಯೋಗಿ ಹಾಗೂ ಎಲೆಕ್ಟ್ರಾನಿಕ್ಸ್ ಉತ್ಪನ್ನಗಳ ತಯಾರಿಕಾ ಕಂಪನಿಗಳು ಅಕ್ಟೋಬರ್ 1ರಿಂದ ಎಸಿ, ಎಲ್ಇಡಿ ಟಿ.ವಿ, ವಾಷಿಂಗ್ ಮೆಷಿನ್ ಸೇರಿ ವಿವಿಧ ಗೃಹೋಪಯೋಗಿ ಉತ್ಪನ್ನಗಳ ದರವನ್ನು ಶೇ.5ರಿಂದ 8ರಷ್ಟು ಹೆಚ್ಚಿಸಲು ಮುಂದಾಗಿವೆ.

ಪಶ್ಚಿಮ ಏಷ್ಯಾದ ಬಿಕ್ಕಟ್ಟಿನಿಂದಾಗಿ ಕರೆನ್ಸಿ ವಿನಿಮಯ ದರದಲ್ಲಿನ ಏರಿಳಿತ ಮತ್ತು ತಾಮ್ರ, ಉಕ್ಕು, ಕಚ್ಚಾ ತೈಲ ಉತ್ಪನ್ನಗಳು ಸೇರಿ ಕಚ್ಚಾ ವಸ್ತುಗಳ ದರ ಗಣನೀಯವಾಗಿ ಏರಿಕೆಯಾಗಿರುವುದೇ ಈ ಬೆಲೆ ಹೆಚ್ಚಳಕ್ಕೆ ಮುಖ್ಯ ಕಾರಣ ಎಂದು ಕಂಪನಿಗಳು ತಿಳಿಸಿವೆ.

ಇದರೊಂದಿಗೆ 2026ರಲ್ಲಿ ಮೂರನೇ ಸಲ ಬೆಲೆ ಏರಿಕೆಯಾಗಲಿದೆ. ತಾಮ್ರ, ಅಲ್ಯೂಮಿನಿಯಂ, ಉಕ್ಕು, ಪ್ಲಾಸ್ಟಿಕ್ ಹಾಗೂ ಸಾಗಣೆ ವೆಚ್ಚ ನಿರಂತರವಾಗಿ ಏರಿಕೆಯಾಗುತ್ತಿರುವುದರಿಂದ ದರ ಪರಿಷ್ಕರಣೆ ಅನಿವಾರ್ಯವಾಗಿದೆಂದು ತಯಾರಕರು ಹೇಳಿದ್ದಾರೆ.

ಉದ್ಯಮ ವಲಯದ ಮೂಲಗಳ ಪ್ರಕಾರ, ಎಸಿ ದರಗಳು ಶೇ.5ರಿಂದ 8ರಷ್ಟು ಹೆಚ್ಚಾಗಲಿದೆ. ವಾಷಿಂಗ್ ಮೆಷಿನ್, ಫ್ರಿಡ್ಜ್ ಹಾಗೂ ಎಲ್ಇಡಿ ಟಿವಿಗಳ ದರವು ಶೇ.3ರಿಂದ 4ರಷ್ಟು ಏರಿಕೆ



ಯಾಗುವ ಸಾಧ್ಯತೆಯಿದೆ.

ಬ್ಲೂಸ್ಟಾರ್, ಗೋದ್ರೇಜ್ ಅಪ್ಲೈಯನ್ಸಸ್, ಹೈಯರ್, ಡೈಕಿನ್ ಹಾಗೂ ಸೂಪರ್ ಪ್ಲಾಸ್ಟ್ರಾನಿಕ್ಸ್ ನಂತಹ ಪ್ರಮುಖ ಕಂಪನಿಗಳು ಈಗಾಗಲೇ ಶೇ.4ರಿಂದ 10ರಷ್ಟು ಬೆಲೆ ಏರಿಕೆಯನ್ನು ಪ್ರಕಟಿಸಿವೆ ಅಥವಾ ದೃಢಪಡಿಸಿವೆ. ಎಲ್‌ಜಿ ಮತ್ತು ಬೋಷ್ ಹೋಮ್ ಕಂಫರ್ಟ್ (ಹಿಟಾಚಿ) ಕಂಪನಿಗಳು ಕೂಡ ಎಸಿ ದರವನ್ನು ಶೇ.5ರಷ್ಟು ಹೆಚ್ಚಿಸಿವೆ. ಪ್ಯಾನಾಸಾನಿಕ್ ಮಾರುಕಟ್ಟೆ ಪರಿಸ್ಥಿತಿಯನ್ನು ಅವಲೋಕಿಸುತ್ತಿದೆ.

ಯುದ್ಧದ ಬಿಕ್ಕಟ್ಟಿನಿಂದಾಗಿ ಎಲ್ಲಾ ಕಚ್ಚಾ ವಸ್ತುಗಳ ದರವೂ ಏರುತ್ತಿದೆ. ಕಳೆದ ಬಾರಿಗೆ ಹೋಲಿಸಿದರೆ ಉತ್ಪಾದನಾ ವೆಚ್ಚ ಶೇ.15ರಷ್ಟು ಹೆಚ್ಚಾಗಿದೆ ಎಂದು ಬ್ಲೂಸ್ಟಾರ್ ವ್ಯವಸ್ಥಾಪಕ ನಿರ್ದೇಶಕ ಬಿ.ತ್ಯಾಗರಾಜನ್ ಪ್ರತಿಕ್ರಿಯಿಸಿದ್ದಾರೆ.

**ಹಳೆಯ ದಾಸ್ತಾನು: ಗ್ರಾಹಕರಿಗೆ ಸದ್ಯಕ್ಕೆ ಕೊಂಚ ನಿರಾಳ**

ಬೆಲೆ ಏರಿಕೆಯು ಹಬ್ಬದ ಋತುವಿನ ವಹಿವಾಟಿನ ಮೇಲೆ ಪರಿಣಾಮ ಬೀರಬಹುದು ಎಂಬ ಆತಂಕ ಒಂದೆಡೆಯಾದರೆ, ವಿತರಕರು ಮತ್ತು ಡೀಲರ್‌ಗಳು ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳಲ್ಲೇ ಹಳೆಯ ದರದಲ್ಲೇ ಹೆಚ್ಚಿನ ಪ್ರಮಾಣದ ದಾಸ್ತಾನು ಖರೀದಿಸಿ ಇಟ್ಟುಕೊಂಡಿದ್ದಾರೆ. ಹಾಗಾಗಿ ತಕ್ಷಣವೇ ಗ್ರಾಹಕರ ಮೇಲೆ ಹೆಚ್ಚಿನ ಹೊರೆ ಬೀಳಲಾರದು ಎಂದು ಕೆಲ ಕಂಪನಿಗಳು ಅಭಿಪ್ರಾಯಪಟ್ಟಿವೆ.

ವಿತರಣಾ ಜಾಲದಲ್ಲಿ ಮುಂದಿನ ಒಂದರಿಂದ ಒಂದೂವರೆ ತಿಂಗಳಿಗೆ ಸಾಕಾಗುವಷ್ಟು ಹಳೆಯ ದರದ ದಾಸ್ತಾನು ಲಭ್ಯವಿದೆ. ದೀಪಾವಳಿಯ ವರೆಗೆ ಹೆಚ್ಚಿನ ಮಟ್ಟಿಗೆ ಹಳೆಯ ದರ ದಲ್ಲೇ ವಸ್ತುಗಳು ಸಿಗಲಿವೆ. ಆದರೆ ದೀಪಾವಳಿಯ ನಂತರ ಹೊಸ ದರಗಳು ಸಂಪೂರ್ಣವಾಗಿ ಜಾರಿಗೆ ಬರಲಿವೆ ಎಂದು ಗೋದ್ರೇಜ್ ಎಂಟರ್‌ಪ್ರೈಸಸ್ ಸಮೂಹದ ಉಪಾಧ್ಯಕ್ಷ ಕಮಲ್ ನಂದಿ ತಿಳಿಸಿದ್ದಾರೆ.

ಸಾಮಾನ್ಯವಾಗಿ ಓಣಂ, ದಸರಾ ಮತ್ತು ದೀಪಾವಳಿ ಒಳಗೊಂಡ ಹಬ್ಬದ ಋತುವಿನಲ್ಲಿ ಈ ಕಂಪನಿಗಳ ವಾರ್ಷಿಕ ವಹಿವಾಟಿನ ಶೇ.30 ರಿಂದ 40ರಷ್ಟು ಮಾರಾಟ ನಡೆಯುತ್ತದೆ. ಆದರೆ ಈ ಬಾರಿ ಜಾಗತಿಕ ಅಸ್ಥಿರತೆ ಮತ್ತು ಬೆಲೆ ಏರಿಕೆಯ ಬಿಸಿ ಗ್ರಾಹಕರ ಖರೀದಿಯ ಉತ್ಸಾಹಕ್ಕೆ ತಣ್ಣೀರೆರಚುವುದೇ ಎಂಬುದನ್ನು ಕಾದುನೋಡಬೇಕಿದೆ.

## ಪಿಂಕ್ ಪವರ್ ರನ್‌ನಲ್ಲಿ 35 ಸಾವಿರ ಜನ ಭಾಗಿ

**ಹೈದರಾಬಾದ್:** ಆರೋಗ್ಯ ಕಾಳಜಿ, ಆರಂಭಿಕ ಹಂತದಲ್ಲಿ ಸ್ತನ ಕ್ಯಾನ್ಸರ್ ಪತ್ತೆ ಮತ್ತು ಮಹಿಳಾ ಸಬಲೀಕರಣದ ಕುರಿತ ಜಾಗೃತಿಗಾಗಿ ಓಟ ಪಿಂಕ್ ಪವರ್ ರನ್‌ನ 3ನೇ ಆವೃತ್ತಿಯು ಭಾನುವಾರ ಹೈದರಾಬಾದ್‌ನಲ್ಲಿ ನಡೆಯಿತು. ಸುಮಾರು 35 ಸಾವಿರ ಜನರು ಓಟದಲ್ಲಿ ಭಾಗಿಯಾಗಿದ್ದರು.

ಮೇಘಾ ಎಂಜಿನಿಯರಿಂಗ್ ಆ್ಯಂಡ್ ಇನ್ಫ್ರಾಸ್ಟ್ರಕ್ಚರ್ಸ್ ಲಿಮಿಟೆಡ್ ಮತ್ತು ಸುಧಾರೆಡ್ಡಿ ಫೌಂಡೇಷನ್ ಈ ಓಟವನ್ನು ಆಯೋಜಿಸಿತ್ತು. 21 ಕಿ.ಮೀ ಹಾಫ್ ಮ್ಯಾರಥಾನ್‌ನಲ್ಲಿ ಸುನೀಲ್ ಕುಮಾರ್ (ಪುರುಷರ ವಿಭಾಗ)ಮತ್ತು ಸೋನಮ್ (ಮಹಿಳಾ ವಿಭಾಗ) ವಿಜೇತರಾದರು. 10 ಕಿ.ಮೀ ಓಟದಲ್ಲಿ ಹರೀಶ್ ಷರೀನ್ (ಪುರುಷರ ವಿಭಾಗ) ಮತ್ತು ವಂದನಾ ಪಟೇಲ್(ಮಹಿಳಾ ವಿಭಾಗ), 5 ಕಿ.ಮೀ ಓಟದಲ್ಲಿ ಲವ್ ಚೌಧರಿ(ಪುರುಷರ ವಿಭಾಗ) ಮತ್ತು ಅಂಜಲಿ(ಮಹಿಳಾ ವಿಭಾಗ) ಪ್ರಶಸ್ತಿ ಪಡೆದರು.

5 ವರ್ಷದ ಮಕ್ಕಳಿಂದ 80 ವರ್ಷಕ್ಕೂ ಅಧಿಕ ವಯಸ್ಸಿನ ವೃದ್ಧರು ಮತ್ತು ಅಂಗವಿಕಲರು ಸಹ ಭಾಗಿಯಾಗಿದ್ದರು. ತಮ್ಮ ಮಕ್ಕಳ ಶಿಕ್ಷಣಕ್ಕಾಗಿ 5 ಕಿ.ಮೀ ದೂರ ಬರಿಗಾಲಿನಲ್ಲಿ ನಡೆಯುವ ಮೂಲಕ ಸುದ್ದಿಯಾಗಿದ್ದ ಮಹಾರಾಷ್ಟ್ರದ ಮಹಿಳೆ ರಮಾಭಾಯಿ ರಣವೀರ್(47) ಕೂಡಾ ಓಟದಲ್ಲಿ ಭಾಗವಹಿಸಿ ಗಮನಸೆಳೆದರು.

## ಸರ್ಜಿಕಲ್ ಸ್ಟ್ರೈಕ್ ಭಾರತದ ಭಯೋತ್ಪಾದನೆ ನಿಗ್ರಹ ನೀತಿಗೆ ದಿಟ್ಟ ನಿದರ್ಶನ

• ಪ್ರಜೋದಯ ವರದಿ



**ನವದೆಹಲಿ:** ಭಯೋತ್ಪಾದಕ ದಾಳಿಗಳಿಂದ ದೇಶವು ಅನುಭವಿಸಿದ ನೋವುಗಳಿಗೆ 2016ರಲ್ಲಿ ನಡೆಸಿದ ಸರ್ಜಿಕಲ್ ಸ್ಟ್ರೈಕ್ (ನಿರ್ದಿಷ್ಟ ದಾಳಿ) ನಿರ್ಣಾಯಕವಾದ ಪ್ರತಿಕ್ರಿಯೆಯಾಗಿತ್ತು ಹಾಗೂ ಭಾರತದ ಭಯೋತ್ಪಾದನೆ ವಿರೋಧಿ ನೀತಿಗೆ ದಿಟ್ಟ ನಿದರ್ಶನವಾಗಿತ್ತು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಹೇಳಿದ್ದಾರೆ.

ಮಾಸಿಕ ಮನದ ಮಾತು ಕಾರ್ಯಕ್ರಮದಲ್ಲಿ ಮಾತನಾಡಿರುವ ಅವರು, ಉಗ್ರ ಚಟುವಟಿಕೆಗಳ ವಿರುದ್ಧ ಭಾರತವು ಶೂನ್ಯ ಸಹಿಷ್ಣು ನೀತಿ ಅನುಸರಿಸುತ್ತದೆ. ಭಯೋತ್ಪಾದನೆಗೆತಕ್ಕ ಪ್ರತಿಕ್ರಿಯೆ ನೀಡುತ್ತೇವೆಂಬ ಸ್ಪಷ್ಟ ಸಂದೇಶವನ್ನು ನಿರ್ದಿಷ್ಟ ದಾಳಿ ಮೂಲಕ ಜಗತ್ತಿಗೆ ಸಾರಿದ್ದೇವೆ ಎಂದಿದ್ದಾರೆ.

ಜಮ್ಮು-ಕಾಶ್ಮೀರದ ಉರಿಯಲ್ಲಿ ಸೇನಾ ಶಿಬಿರದ ಮೇಲೆ ಭಯೋತ್ಪಾದಕರು ನಡೆಸಿದ್ದ ದಾಳಿಗೆ ಪ್ರತಿಯಾಗಿ, ಭಾರತೀಯ ಸೇನೆ 2016ರ ಸೆಪ್ಟೆಂಬರ್ 2829ರಂದು ಗಡಿ ನಿಯಂತ್ರಣ ರೇಖೆಯನ್ನು ದಾಟಿ, ಉಗ್ರರ ನೆಲೆಗಳ ಮೇಲೆ ನಿರ್ದಿಷ್ಟ ದಾಳಿ ನಡೆಸಿತ್ತು. ನಮ್ಮ ಯೋಧರು ಗಡಿ ರೇಖೆಯನ್ನು ದಾಟಿ ಭಯೋತ್ಪಾದನೆ ವಿರುದ್ಧ ಕಾರ್ಯಾಚರಣೆ ನಡೆಸಿದ ರೀತಿಯು ಇಡೀ ಜಗತ್ತನ್ನೇ ಅಚ್ಚರಿಗೊಳಿಸಿತ್ತು. ಅದು ದೇಶದ ಭಯೋತ್ಪಾದನಾ ನಿಗ್ರಹ ನೀತಿಯ ದಿಟ್ಟ ನಿದರ್ಶನ ಎಂದು ಪ್ರಧಾನಿ ಬಣ್ಣಿಸಿದ್ದಾರೆ.

**ಜನಗಣತಿ ಪ್ರತಿಯೊಬ್ಬರ ಜವಾಬ್ದಾರಿ:** ದೇಶದಾದ್ಯಂತ ನಡೆಯುತ್ತಿರುವ ಜನಗಣತಿ ಬಗ್ಗೆ ಮಾತನಾಡಿದ ಮೋದಿ, ಗಣತಿ ಕಾರ್ಯದಲ್ಲಿ ಪಾಲ್ಗೊಳ್ಳುವುದು ಪ್ರತಿಯೊಬ್ಬ ಪ್ರಜೆಯ ಜವಾಬ್ದಾರಿ. ಎಲ್ಲರೂ ಆನ್‌ಲೈನ್ ಸೇವೆಯನ್ನು ಬಳಸಿಕೊಳ್ಳಿ ಎಂದು ಮನವಿ ಮಾಡಿದ್ದಾರೆ.

ಮಾದಕ ವ್ಯಸನದ ವಿರುದ್ಧ ದೇಶದ ಯುವಜನರು ಒಂದಾಗುತ್ತಿದ್ದಾರೆಂದು ಮೆಚ್ಚುಗೆ ವ್ಯಕ್ತಪಡಿಸಿದ ಮೋದಿ, ನಶೆ ಮುಕ್ತ ಯುವ ಅಭಿಯಾನದ ಮೂಲಕ ಲಕ್ಷಾಂತರ ಯುವಕರು ಮಾದಕ ವಸ್ತುಗಳಿಂದ ದೂರ ಇರುವುದಾಗಿ ಪ್ರತಿಜ್ಞೆ ಮಾಡಿದ್ದಾರೆ. ತಾವು ದೂರ ಉಳಿಯುವುದರ ಜೊತೆಗೆ, ಇತರರಿಗೂ ಜಾಗೃತಿ ಮೂಡಿಸುತ್ತಿದ್ದಾರೆಂದು ಹೇಳಿದ್ದಾರೆ.



**ಹಾಸನ: ಜಿಲ್ಲಾ ಜೆಡಿಎಸ್ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ನಟರಾಜ್ ಐಸಾಮಿಗೌಡ, ಕಾರ್ಯದರ್ಶಿ ಹನುಮಂತಪುರ ರಾಮಚಂದ್ರು, ಸಹ ಕಾರ್ಯದರ್ಶಿ ಕ್ರಾಂತಿ ಪ್ರಸಾದ್ ತ್ಯಾಗಿ ಅವರಿಗೆ ಶನಿವಾರ ಶಾಸಕ ಹೆಚ್.ಪಿ. ಸ್ವರೂಪ್ ಅವರು ಅಭಿನಂದಿಸಿ ಶುಭ ಹಾರೈಸಿದರು.**

## ವಿಶ್ವಸಂಸ್ಥೆ ಭದ್ರತಾ ಮಂಡಳಿಯಲ್ಲಿ ಕಾಯಂ ಸದಸ್ಯತ್ವ: ಭಾರತಕ್ಕೆ ರಷ್ಯಾ ಬೆಂಬಲ

• ಪ್ರಜೋದಯ ವರದಿ

**ನ್ಯೂಯಾರ್ಕ್:** ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ (ಯುಎನ್ಎಸ್‌ಸಿ) ಭಾರತಕ್ಕೆ ಕಾಯಂ ಸದಸ್ಯತ್ವ ನೀಡಬೇಕೆಂಬ ಬೇಡಿಕೆಗೆ ರಷ್ಯಾ ಮತ್ತೊಮ್ಮೆ ಬಲವಾದ ಬೆಂಬಲ ಸೂಚಿಸಿದೆ. ಅದೇ ವೇಳೆ ಭದ್ರತಾ ಮಂಡಳಿಯಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳ ಪ್ರಾಬಲ್ಯ ಹೆಚ್ಚಿಸುವುದನ್ನು ಅದು ತೀವ್ರವಾಗಿ ಖಂಡಿಸಿದೆ.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ (ಯುಎನ್‌ಜಿಎ) ಈ ಕುರಿತು ಮಾತನಾಡಿರುವ ರಷ್ಯಾದ ವಿದೇಶಾಂಗ ವ್ಯವಹಾರಗಳ ಸಚಿವ ಸೆರ್ಗೆ ಲಾವ್ರೋವ್, ಭದ್ರತಾ ಮಂಡಳಿಯಲ್ಲಿ ಸುಧಾರಣೆ ಪ್ರಕ್ರಿಯೆಗಳು ಈಗಿನ ಕಾಯಂ ರಾಷ್ಟ್ರಗಳ ವಿಶೇಷ ಹಕ್ಕುಗಳಿಗೆ ಧಕ್ಕೆಯಾಗಬಾರದೆಂದು ಪ್ರತಿಪಾದಿಸಿದರು.

ಜಾಗತಿಕ ರಾಜಕೀಯ ವ್ಯವಸ್ಥೆಯಲ್ಲಿ ಸಮತೋಲನ ಸಾಧಿಸುವ ಅಗತ್ಯವನ್ನು ಒತ್ತಿ ಹೇಳಿದ ಅವರು, ಗ್ಲೋಬಲ್ ಸೌತ್ ಪ್ರಾತಿನಿಧ್ಯವನ್ನು ಹೆಚ್ಚಿಸಲು ರಷ್ಯಾ ಬದ್ಧವಾಗಿದೆ ಎಂದರು.

ಏಷ್ಯಾ, ಆಫ್ರಿಕಾ ಹಾಗೂ ಲ್ಯಾಟಿನ್ ಅಮೇರಿಕಾ ದೇಶಗಳ



ಪ್ರಾತಿನಿಧ್ಯ ಹೆಚ್ಚಿಸುವುದನ್ನು ನಾವು ಬೆಂಬಲಿಸುತ್ತೇವೆ. ಮಂಡಳಿಯ ಕಾಯಂ ಸದಸ್ಯತ್ವಕ್ಕೆ ಭಾರತ ಮತ್ತು ಬ್ರೆಜಿಲ್ ಸಲ್ಲಿಸಿರುವ ಉಮೇದುವಾರಿಕೆಗೆ ನಮ್ಮ ಸಂಪೂರ್ಣ ಬೆಂಬಲವಿದೆ. ಜೊತೆಗೆ ಆಫ್ರಿಕಾ ಖಂಡದ ಹಿತಾ ಸಕ್ತಿಗಳಿಗೂ ಸೂಕ್ತ ಮನ್ನಣೆ ಸಿಗಬೇಕೆಂದು ಸ್ಪಷ್ಟಪಡಿಸಿದರು.

ಏತನ್ಮಧ್ಯೆ ಜರ್ಮನಿ ಹಾಗೂ ಜಪಾನ್‌ಗೆ ಪ್ರಾತಿನಿಧ್ಯ ನೀಡುವುದನ್ನು ಲಾವ್ರೋವ್ ವಿರೋಧಿ ಸಿದ್ದು, ಈ ದೇಶಗಳು ಪ್ರಸ್ತುತ ಸೇನಾ ಬಲವರ್ಧನೆ ಹಾಗೂ ಸೇಡಿನ ಹಾದಿಯಲ್ಲಿ ಮುನ್ನಡೆ ಯುತ್ತಿವೆಂದು ಟೀಕಿಸಿದರು.

# ಬರದ ಬೇಗೆಯಿಂದ ಜನರ ಬದುಕು ಚಿಂತಾಜನಕ: ಶಾಸಕ ಬಾಲಕೃಷ್ಣ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮಳೆರಾಯನ ಮುನಿಸಿನಿಂದ ತಾಲ್ಲೂಕಿನಾದ್ಯಂತ ಬರದ ಛಾಯೆ ಆವರಿಸಿದ್ದು ಜನರ ಬದುಕು ಚಿಂತಾಜನಕವಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕಿನ ಹಿರೀಸಾವೆ ಗ್ರಾಮದ ಶ್ರೀ ಚೌಡೇಶ್ವರಿ ಭವನದಲ್ಲಿ ತಾಲ್ಲೂಕು ಆಡಳಿತದಿಂದ ಏರ್ಪಡಿಸಿದ್ದ ಪ್ರಜಾ ಸೇವಾ ಆಂದೋಲನ ಸಭೆಯಲ್ಲಿ ಮಾತನಾಡಿದ ಅವರು, ಕೆರೆ ಕಟ್ಟೆಗಳಲ್ಲಿ ನೀರಿಲ್ಲ. ಅಂತರ್ಜಲ ತೀವ್ರ ಮಟ್ಟದಲ್ಲಿ ಕುಸಿದಿದ್ದು ಕೊಳವೆ ಬಾವಿಗಳಲ್ಲಿಯೂ ನೀರಿನ ಪ್ರಮಾಣ ಗಣನೀಯವಾಗಿ ಕುಸಿಯುತ್ತಿದೆ. ಅದರಿಂದ ಮತ್ತಷ್ಟು ಗಾಯದ ಮೇಲೆ ಬರೆ ಎಳೆದಂತಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ತಾಲ್ಲೂಕಿನ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಕಂಡುಬಂದರೆ ತಕ್ಷಣ ಬಗೆಹರಿಸಲು ಕ್ರಮ ಕೈಗೊಳ್ಳಬೇಕು. ಜನಸಾಮಾನ್ಯರಿಗೆ ಕುಡಿಯುವ ನೀರಿನ ಸಮಸ್ಯೆ





ಆಗದಂತೆ ಎಚ್ಚರಿಕೆ ವಹಿಸಬೇಕೆಂದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಶಾಸಕರು ಸೂಚಿಸಿದರು.

ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ 15 ಸಾವಿರ ಅರ್ಜಿ ನೋಂದಣಿಯಾಗಿದ್ದು ಅರ್ಹತೆ ಇದ್ದಲ್ಲಿ ಯಾವುದೇ ಕಾರಣಕ್ಕೂ ಕೈ ಬಿಡಬಾರದು. ವಿನಾಕಾರಣ ಕೈ ಬಿಟ್ಟರೆ ಅಧಿಕಾರಿ ಗಳೇ ಜವಾಬ್ದಾರಿಯಾಗಲಿದ್ದಾರೆ. ಪ್ರಧಾನ ಮಂತ್ರಿ ಆವಾಸ್ ಯೋಜನೆಗೆ ಅರ್ಜಿ ಸಲ್ಲಿಸಲು ಈ ತಿಂಗಳ 30 ಕಡೆಯ ದಿನವಾಗಿದೆ ಎಂದರು.

ಹೆಚ್.ಹೊನ್ನೇನಹಳ್ಳಿ, ದಿಡಗ, ನುಗ್ಗೇಹಳ್ಳಿ ಸೇರಿ ಬಹುತೇಕ ಕಡೆ ಹೈಮಾಸ್ಕ್ ದೀಪಗಳು ಹಗಲಿನ ವೇಳೆಯಲ್ಲಿಯೂ ಸಹ ಉರಿಯುತ್ತಿರುವುದು ಕಂಡು ಬರುತ್ತಿದೆ. ಅದರಿಂದ ವಿದ್ಯುತ್ ವ್ಯರ್ಥವಾಗಲಿದ್ದು ಜೊತೆಗೆ ಹೈಮಾಸ್ಕ್ ದುಸ್ಥಿತಿಗೊಂಡರೆ ಹೆಚ್ಚಿನ ಖರ್ಚು ತಗಲಿದೆ. ಆದ್ದರಿಂದ ಟೈಮರ್ಸ್ ಅಳವಡಿಸುವ ಮೂಲಕ ಸೂಕ್ತ ನಿರ್ವಹಣೆಗೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

**ಒಟ್ಟು 89 ಅರ್ಜಿಗಳು ಸಲ್ಲಿಕೆ**

ತಹಶೀಲ್ದಾರ್ ಶಂಕರಪ್ಪ ಅವರು ಮಾತನಾಡಿ, ಸಾರ್ವಜನಿಕರ ಕುಂದು ಕೊರತೆಗಳನ್ನು ಆಲಿಸಿ ಬಗೆಹರಿಸುವ ನಿಟ್ಟಿನಲ್ಲಿ ಪ್ರಜಾ ಸೇವಾ ಆಂದೋಲನ ಸಭೆಯು ಉತ್ತಮ ವೇದಿಕೆ ಯಾಗಿದೆ. ಸಾರ್ವಜನಿಕರು ತಮ್ಮ ತಮ್ಮ ಸಮಸ್ಯೆಗಳ ಬಗ್ಗೆ ಅರ್ಜಿಗಳನ್ನು ಸಲ್ಲಿಸುವ ಮೂಲಕ ಸದುಪಯೋಗ ಪಡೆದುಕೊಳ್ಳಬೇಕೆಂದರು.

ಕಂದಾಯ, ಸರ್ವೆ, ನೀರಾವರಿ ಸೇರಿ ಯಾವುದೇ ಸಮಸ್ಯೆಗಳಿದ್ದರೆ ಅಗತ್ಯ ದಾಖಲಾತಿ ಗಳೊಂದಿಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಬೇಕು. ಪ್ರತಿಯೊಂದು ಕೆಲಸಗಳಿಗೂ ಒಂದಷ್ಟು ಸಮಯ ಹಾಗು ಅದರದ್ದೇ ಆದ ಸರ್ಕಾರಿ ನಿಯಮಗಳಿರುತ್ತವೆ. ಅಧಿಕಾರಿಗಳಿಗೆ ಒತ್ತಡ ಹೇರಿದಂತೆ ಅಗತ್ಯ ದಾಖಲಾತಿಗಳನ್ನು ಒದಗಿಸಿ ತಮ್ಮ ಕೆಲಸಗಳನ್ನು ಮಾಡಿಸಿಕೊಳ್ಳುವುದು ಸೂಕ್ತ ಎಂದು ಸಭೆಯಲ್ಲಿ ನೆರೆದಿದ್ದ ಸಾರ್ವಜನಿಕರಿಗೆ ಸಲಹೆ ನೀಡಿದರು.

ಸರ್ವೆ ಇಲಾಖೆಗೆ ಸಂಬಂಧಪಟ್ಟಂತೆ 15 ಅರ್ಜಿಗಳು, ಕಂದಾಯ ಇಲಾಖೆ -34, ಆರ್‌ಡಿಪಿಆರ್ -17, ಕೆಇಬಿ -1, ನೀರಾವರಿ-16 ಹಾಗು ಇತರ 6 ಅರ್ಜಿಗಳು ಒಳಗೊಂಡಂತೆ 89 ಅರ್ಜಿಗಳು ಸಲ್ಲಿಕೆಯಾಗಿದೆ. ಹಿರೀಸಾವೆ ಹೋಬಳಿ ವ್ಯಾಪ್ತಿಯ ರೈತರು ತಮ್ಮ ತಮ್ಮ ಸಮಸ್ಯೆ ಗಳನ್ನು ಅಧಿಕಾರಿಗಳ ಬಳಿ ತಿಳಿಸಿ ಬಗೆಹರಿಸುವಂತೆ ಮನವಿ ಮಾಡಿದರು. ಶಾಸಕರು ಹಾಗು ಅಧಿಕಾರಿಗಳು ಅಗತ್ಯ ದಾಖಲಾತಿಗಳೊಂದಿಗೆ ಬಗೆಹರಿಸುವಂತೆ ಭರವಸೆ ನೀಡಿದರು.

ಉಪ ತಹಶೀಲ್ದಾರ್ ಬಿ.ಎಸ್.ರವಿ, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಹರೀಶ್, ರಾಜಸ್ವ ನಿರೀಕ್ಷಕ ಎಸ್.ಎಲ್.ಯೋಗೇಶ್, ಗ್ರಾಮ ಲೆಕ್ಕಾಧಿಕಾರಿಗಳಾದ ಮುತ್ತುರಾಜ್, ಚಂದ್ರಶೇಖರ್, ಗಾಯತ್ರಿ, ದೇವಮ್ಮ, ಹಿರೀಸಾವೆ ಪೊಲೀಸ್ ಠಾಣೆಯ ವೃತ್ತ ನಿರೀಕ್ಷಕ ಮಂಜೇಗೌಡ, ಪ್ರಮುಖರಾದ ಹೆಚ್.ಜೆ. ಮಹೇಶ್, ಹೆಚ್.ಈ.ಬೋರಣ್ಣ, ಹೆಚ್.ಎಸ್.ರವಿಕುಮಾರ್, ಎ.ಜಿ. ಪ್ರಭಾಕರ್ ಮತ್ತಿತರರಿದ್ದರು.

## ಭಾರತಕ್ಕೆ ಮತ್ತೊಂದು ಪದಕ ಖಚಿತಪಡಿಸಿದ ಅಂಕುಶ್ ಪಂಘಲ್



• ಪ್ರಜೋದಯ ವರದಿ

**ನಿಶಿಯೊ (ಜಪಾನ್):** ಇಲ್ಲಿ ನಡೆಯುತ್ತಿರುವ ಏಷ್ಯನ್ ಗೇಮ್ಸ್‌ನಲ್ಲಿ ಭಾರತದ ಬಾಕ್ಸರ್ ಅಂಕುಶ್ ಪಂಘಲ್ ದೇಶಕ್ಕೆ ಮತ್ತೊಂದು ಪದಕ ಖಚಿತ ಪಡಿಸಿ ಕೊಂಡಿದ್ದಾರೆ. ಬಾಕ್ಸಿಂಗ್ ವಿಭಾಗದ ಮೊದಲ ಪದಕ ಇದಾಗಿರಲಿದೆ.

ಭಾನುವಾರ ನಡೆದ ಪುರುಷರ 80 ಕೆ.ಜಿ. ವಿಭಾಗದ ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಅಂಕುಶ್ ಅವರು ತಜಕಿಸ್ತಾನದ ನೆಕ್ರುಜ್ ಸಲಿಮೋವ್ ವಿರುದ್ಧ 5-0 ಅಂತರದ ಭರ್ಜರಿ ಜಯ ಸಾಧಿಸಿದ್ದಾರೆ.

ಕಳೆದ ತಿಂಗಳು ಗ್ಲಾಸ್ಗೊದಲ್ಲಿ ನಡೆದ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಅಂಕುಶ್ ಚಿನ್ನದ ಪದಕ ಗೆದ್ದಿದ್ದರು. ಈಗ ಏಷ್ಯನ್ ಕ್ರೀಡಾ ಕೂಟದಲ್ಲೂ ಸೆಮಿಫೈನಲ್ ಪ್ರವೇಶಿ ಸುವ ಮೂಲಕ ಕನಿಷ್ಠ ಕಂಚಿನ ಪದಕ ತಮ್ಮದಾಗಿಸಿಕೊಂಡಿದ್ದಾರೆ.

# ಕೌಶಲವೇ ಉದ್ಯೋಗಕ್ಕೆ ಪ್ರಮುಖ ಮಾರ್ಗ

• ಪ್ರಜೋದಯ ವರದಿ

**ಹಾಸನ:** ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕೇವಲ ಅಂಕಗಳಿಕೆಯಿಂದ ಉದ್ಯೋಗ ಪಡೆ ಯಲು ಸಾಧ್ಯವಿಲ್ಲ. ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಒಂದಲ್ಲ ಒಂದು ಕೌಶಲ್ಯ ಅಡಗಿದ್ದು, ಅದನ್ನು ಗುರುತಿಸಿ ಬೆಳೆಸಿಕೊಂಡರೆ ಉದ್ಯೋಗಾವಕಾಶಗಳನ್ನು ಸುಲಭವಾಗಿ ಪಡೆದುಕೊಳ್ಳ ಬಹುದೆಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಗೌರವಾಧ್ಯಕ್ಷ ರವಿ ನಾಕಲಗೂಡು ಅವರು ಹೇಳಿದರು.

ನಗರದ ಆಚಾರ್ಯ ಪದವಿ ಕಾಲೇಜಿನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಉದ್ಯೋಗ ಮೇಳ ಉದ್ಘಾಟಿಸಿ ಮಾತನಾಡಿದ ಅವರು, ಹಿಂದೆ ಉದ್ಯೋಗ ಕಚೇರಿಗಳ ಮೂಲಕ ಉದ್ಯೋಗಾ ಕಾಂಕ್ಷಿಗಳ ಅರ್ಜಿಗಳನ್ನು ಪರಿಶೀಲಿಸಿ, ಸಂದರ್ಶನ ನಡೆಸಿ ಉದ್ಯೋಗ ನೀಡುವ ವ್ಯವಸ್ಥೆ ಇತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಕಂಪನಿಗಳೇ ಕಾಲೇಜು ಹಾಗು ಉದ್ಯೋಗಾ ಕಾಂಕ್ಷಿಗಳ ಮನೆ ಬಾಗಿಲಿಗೆ ಬಂದು ನೇಮಕಾತಿ ಪ್ರಕ್ರಿಯೆ ನಡೆಸುತ್ತಿದ್ದರೂ ನಿರುದ್ಯೋಗ ಸಮಸ್ಯೆ ಸಂಪೂರ್ಣ ವಾಗಿನಿವಾರಣೆಯಾಗುತ್ತಿಲ್ಲವೆಂದರು.

ರಾಜ್ಯ ಹಾಗು ದೇಶದಲ್ಲಿ





ಕೋಟ್ಯಾಂತರ ಯುವಕ-ಯುವತಿಯರು ಉದ್ಯೋಗಕ್ಕಾಗಿ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ದಿನದಿಂದ ದಿನಕ್ಕೆ ನಿರುದ್ಯೋಗ ಸಮಸ್ಯೆ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಅರ್ಹತೆಯ ಜೊತೆಗೆ ಕೌಶಲಾಭಿವೃದ್ಧಿಗೂ ಆದ್ಯತೆ ನೀಡಬೇಕೆಂದು ಸಲಹೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ಪೋಷಕರು ತಮ್ಮ ಮಕ್ಕಳು ಅಂಕಪಟ್ಟಿಯಲ್ಲಿ ಹೆಚ್ಚಿನ ಅಂಕ ಗಳಿಸ ಬೇಕೆಂಬ ವ್ಯಾಮೋಹಕ್ಕೆ ಒಳಗಾಗುತ್ತಿದ್ದಾರೆ. ಆದರೆ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ತನ್ನದೇ ಆದ ಪ್ರತಿಭೆ ಮತ್ತು ಕೌಶಲ ಇರುತ್ತದೆ. ಅದನ್ನು ಗುರುತಿಸಿ ಸೂಕ್ತ ರೀತಿಯಲ್ಲಿ ಬೆಳೆಸಿಕೊಳ್ಳುವುದು ಅಗತ್ಯ. ಕೌಶಲ ಆಧಾರಿತ ಉದ್ಯೋಗಾವಕಾಶಗಳು ಹೆಚ್ಚುತ್ತಿರುವ ಹಿನ್ನಲೆಯಲ್ಲಿ ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯವನ್ನು ಅರಿತು ಮುನ್ನಡೆಯಬೇಕೆಂದು ಕಿವಿಮಾತು ಹೇಳಿದರು.

ಹೇಮಗಂಗೋತ್ರಿ ವಿಶ್ವವಿದ್ಯಾನಿಲಯದ ಪ್ರೊ.ಮಹದೇವ ಪ್ರಸಾದ್ ಅವರು ಮಾತನಾಡಿ, ವಿದ್ಯಾರ್ಥಿಗಳು ಸದೃಢವಾದ ಆಸಕ್ತಿ, ಶ್ರದ್ಧೆ ಹಾಗು ಪರಿಶ್ರಮದಿಂದ ವಿದ್ಯಾಭ್ಯಾಸ ಮಾಡುವು ದರ ಜೊತೆಗೆ ತಮ್ಮ ಕೌಶಲ ಬೆಳೆಸಿಕೊಳ್ಳಬೇಕು. ಸಾಕಷ್ಟು ಉದ್ಯೋಗಾವಕಾಶಗಳು ಲಭ್ಯವಿದ್ದರೂ ಅಗತ್ಯ ಕೌಶಲಗಳ ಕೊರತೆಯಿಂದ ಅನೇಕರು ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಗಮನಹರಿಸಬೇಕೆಂದರು.

ಕೆನರಾ ಬ್ಯಾಂಕ್‌ನ ಹಿರಿಯ ವ್ಯವಸ್ಥಾಪಕಿ ದಿಂಪು ರಾಣಿ ಮೇಧಿ ಅವರು ಮಾತನಾಡಿ, ಯುವಕರು ಕೇವಲ ಉದ್ಯೋಗಕ್ಕಾಗಿ ಅಲೆದಾಡುವ ಮನೋಭಾವದಿಂದ ಹೊರಬಂದು, ಸ್ವಯಂ ಉದ್ಯೋಗ ಹಾಗು ಉದ್ಯಮಶೀಲತೆಯತ್ತಲೂ ಗಮನಹರಿಸಬೇಕು. ತಾವು ಉದ್ಯೋಗ ಪಡೆಯುವುದರ ಜೊತೆಗೆ ಇತರರಿಗೆ ಉದ್ಯೋಗ ಕಲ್ಪಿಸುವಂತಹ ಅವಕಾಶಗಳನ್ನು ಸೃಷ್ಟಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಪ್ರಾಂಶುಪಾಲ ಹೆಚ್.ಆರ್. ಆದರ್ಶ ಮಾತನಾಡಿದರು. ದಿಶಾ ಕಂಪನಿಯ ವ್ಯವಸ್ಥಾಪಕ ಪುನೀತ್ ಮತ್ತಿತರರಿದ್ದರು.

# ಕೊಹ್ಲಿ ದಾಖಲೆ ಶತಕ: ಭಾರತಕ್ಕೆ ಜಯ

• ಪ್ರಜೋದಯ ವರದಿ





**ತಿರುವನಂತಪುರಂ:** ವಿರಾಟ್ ಕೊಹ್ಲಿ (ಅಜೇಯ 139)ಹಾಗು ನಾಯಕ ಶುಭಮನ್ ಗಿಲ್ (110) ಅವರ ಭರ್ಜರಿ ಶತಕದ ನೆರವಿನಿಂದ ಭಾರತ 41.4 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು 300 ರನ್ ಗಳಿಸುವ ಮೂಲಕ ವೆಸ್ಟ್‌ಇಂಡೀಸ್ ವಿರುದ್ಧದ ಮೊದಲ ಪಂದ್ಯವನ್ನು 8 ವಿಕೆಟ್‌ಗಳಿಂದ ಜಯ ಗಳಿಸಿದೆ.

ರೋಹಿತ್ ಶರ್ಮಾ 32 ಹಾಗು ಋತುರಾಜ್ ಅಜೇಯ 13 ರನ್ ಗಳಿಸಿದರು.

ಇದಕ್ಕೂ ಮೊದಲು ಆರಂಭಿಕ ಬ್ಯಾಟರ್ ಜಸ್ಟಿನ್ ಗ್ರೀವ್ಸ್ ಸಿಡಿಸಿದ ಆಕರ್ಷಕ ಶತಕ ಬಲದಿಂದ ವೆಸ್ಟ್‌ಇಂಡೀಸ್ ತಂಡವು ಆತಿಥೇಯ ಭಾರತದ ವಿರುದ್ಧದ ಏಕದಿನ ಪಂದ್ಯದಲ್ಲಿ ಸವಾಲಿನ ಮೊತ್ತ ಕಲೆಹಾಕಿತು.

ಮೂರು ಪಂದ್ಯಗಳ ಏಕದಿನ ಕ್ರಿಕೆಟ್ ಸರಣಿಯ ಮೊದಲ ಹಣಾಹಣಿಯು ತಿರುವನಂತ ಪುರಂನ ಗ್ರೀನ್ ಫೀಲ್ಡ್ ಇಂಟರ್‌ನ್ಯಾಷನಲ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಟೀಂ ಇಂಡಿಯಾ ನಾಯಕ ಶುಭಮನ್ ಗಿಲ್, ಎದುರಾಳಿಯನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿದರು. ಈ ಅವಕಾಶ ವನ್ನು ಸದುಪಯೋಗ ಮಾಡಿಕೊಂಡ ವಿಂಡೀಸ್ ಆರಂಭಿಕರು, ಮೊದಲ ವಿಕೆಟ್‌ಗೆ 135 ರನ್ ಕಲೆಹಾಕಿದರು. ಅರ್ಧಶತಕ ಗಳಿಸಿದ್ದ ಜಾನ್ ಕ್ಯಾಂಪ್‌ಬೆಲ್ (62) ಔಟಾದ ನಂತರ ಬಂದ ಕೀಸಿ ಕಾರ್ಟಿ (13) ಮತ್ತು ನಾಯಕ ಶಾಯ್ ಹೋಪ್ (12) ಹೆಚ್ಚು ರನ್ ಗಳಿಸಲಿಲ್ಲ. ಆದರೆ, ಗ್ರೀವ್ಸ್ ಅಮೋಘ ಆಟವಾಡಿದರು. 108 ಎಸೆತಗಳನ್ನು ಎದುರಿಸಿದ ಅವರು 6 ಬೌಂಡರಿ, 3 ಸಿಕ್ಸರ್ ಸಹಿತ 101 ರನ್ ಕಲೆಹಾಕಿದರು. ಇದು ಅವರಿಗೆ ಏಕದಿನ ಮಾದರಿಯಲ್ಲಿ ಚೊಚ್ಚಲ ಶತಕ.

**ಮಧ್ಯಮ ಕ್ರಮಾಂಕದ ಕುಸಿತ: ಅಮಿರ್ ಆಸರೆ**

30 ಓವರ್‌ಗಳ ಅಂತ್ಯಕ್ಕೆ ವಿಂಡೀಸ್ ಪಡೆ ಕೇವಲ 1 ವಿಕೆಟ್ ಕಳೆದುಕೊಂಡು 176 ರನ್ ಕಲೆ ಹಾಕಿತ್ತು. ನಂತರ ನಾಲ್ಕು ವಿಕೆಟ್‌ಗಳು ಬೆನ್ನುಬೆನ್ನಿಗೆ ಬಿದ್ದವು. 31ನೇ ಓವರ್‌ನ ಮೊದಲ ಎಸೆತದಲ್ಲಿ ಕಾರ್ಟಿ ಔಟಾದರು. ನಂತರ, ಹೋಪ್, ಶತಕಧಾರಿ ಗ್ರೀವ್ಸ್ ಪೆವಿಲಿಯನ್ ಸೇರಿದರು. ಜೆವೆಲ್ ಆಂಡ್ರ್ಯೂ ಸೊನ್ನೆ ಸುತ್ತಿದರು. ಹೀಗಾಗಿ, ತಂಡದ ಮೊತ್ತ 198 ಆಗುವಷ್ಟರಲ್ಲಿ ಐದು ವಿಕೆಟ್‌ಗಳು ಪತನಗೊಂಡವು. ಈ ವೇಳೆ ಭಾರತದ ದಾಳಿಯನ್ನು ಸಮರ್ಥವಾಗಿ ಎದುರಿಸಿದ ಅಮಿರ್ ಜಂಗೂ, ಪ್ರವಾಸಿ ಪಡೆಯ ಕುಸಿತ ತಪ್ಪಿಸಿದರು. ಕೆಲ ಕ್ರಮಾಂಕದ ಬ್ಯಾಟರ್ ಗಳೊಂದಿಗೆ ಸೇರಿ ಅಜೇಯ ಆಟವಾಡಿದ ಅವರು, ಹೋಪ್ ಪಡೆ ಉತ್ತಮ ಮೊತ್ತ ಕಲೆಹಾಕಲು ನೆರವಾದರು. 43 ಎಸೆತಗಳನ್ನು ಎದುರಿಸಿದ ಅವರು 58 ರನ್ ಗಳಿಸಿದರು. ಅವರ ಆಟದ ಬಲದಿಂದ, ವಿಂಡೀಸ್ ಪಡೆ ನಿಗದಿತ ಓವರ್ ಗಳಲ್ಲಿ 7 ವಿಕೆಟ್‌ಗೆ 295 ರನ್ ಪೇರಿಸಿತು.

ಭಾರತ ಪರ ಕುಲದೀಪ್ ಯಾದವ್ 10 ಓವರ್‌ಗಳಲ್ಲಿ 40 ರನ್ ನೀಡಿ ನಾಲ್ಕು ವಿಕೆಟ್ ಉರುಳಿಸಿದರು. ಪ್ರಸಿದ್ಧ ಕೃಷ್ಣ ಎರಡು ಮತ್ತು ನಿತೀಶ್ ಕುಮಾರ್ ರೆಡ್ಡಿ ಒಂದು ವಿಕೆಟ್ ಪಡೆದರು.

## ಸಾಲಬಾಧೆ: ರೈತ ಆತ್ಮಹತ್ಯೆ



• ಪ್ರಜೋದಯ ವರದಿ

**ಆಲೂರು:** ಸಾಲಬಾಧೆಯಿಂದ ರೈತ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲ್ಲೂಕಿನ ಕುಂದೂರು ಹೋಬಳಿ ಹೋತನಹಳ್ಳಿ ಪುರದಲ್ಲಿ ಭಾನುವಾರ ನಡೆದಿದೆ.

ಹೆಚ್.ಪಿ.ಯೋಗೇಶ್ (53) ಮೃತರು. ಕೃಷಿಗಾಗಿ ವಿವಿಧ ಸಂಘಗಳಲ್ಲಿ ಸುಮಾರು 4 ಲ.ರೂ. ಗೂ ಹೆಚ್ಚು ಸಾಲ ಪಡೆದುಕೊಂಡಿದ್ದರು. ಮಳೆ ಕೊರತೆಯಿಂದ ಜಮೀನಿನಲ್ಲಿ ಬೆಳೆದಿದ್ದ ಬೆಳೆ ಹಾಳಾಗಿತ್ತು. ಅದರಿಂದ ಮನನೊಂದ ಯೋಗೇಶ್ ಮನೆಯಲ್ಲಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ನೂತನ ಕಚೇರಿಗೆ ಸ್ಥಳಾಂತರಗೊಂಡ ಎನ್‌ಟಿಎ: ಸಿಐಎಸ್‌ಎಫ್ ಭದ್ರತೆ





• ಪ್ರಜೋದಯ ವರದಿ

**ನವದೆಹಲಿ:** ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್‌ಟಿಎ) ನೂತನ ಕಚೇರಿಗೆ ಸ್ಥಳಾಂತರ ಗೊಂಡಿದ್ದು, ಕಚೇರಿ ಆವರಣದ ಗೋಪ್ಯ ಸ್ಥಳಗಳಲ್ಲಿ ಕೇಂದ್ರ ಕೈಗಾರಿಕಾ ಭದ್ರತಾ ಪಡೆಯನ್ನು (ಸಿಐಎಸ್‌ಎಫ್) ನಿಯೋಜಿಸಲಾಗಿದೆ.

ನೀಟ್-ಯುಜಿ ಪ್ರಶ್ನೆಪತ್ರಿಕೆ ಸೋರಿಕೆಯನ್ನು ಖಂಡಿಸಿ ರಾಷ್ಟ್ರದಾದ್ಯಂತ ದೊಡ್ಡಮಟ್ಟದ ಪ್ರತಿಭಟನೆಗೆ ನಡೆದು, ಧರ್ಮೇಂದ್ರ ಪ್ರದಾನ್ ಅವರು ಶಿಕ್ಷಣ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ ಈ ಮಹತ್ವದ ಬೆಳವಣಿಗೆ ನಡೆದಿದೆ.

2017ರಲ್ಲಿ ರಚನೆಯಾಗಿರುವ ಎನ್‌ಟಿಎ ಇದುವರೆಗೆ ಓಕ್ಲಾದಲ್ಲಿರುವ ಕಚೇರಿಯಲ್ಲಿ ಕಾರ್ಯ ನಿರ್ವಹಿ ಸುತ್ತಿತ್ತು. ನವದೆಹಲಿಯ ಮಿಂಟೋ ರೋಡ್‌ನಲ್ಲಿರುವ ಕೇಂದ್ರ ಸರ್ಕಾರದ ಮುದ್ರಣಾಲಯ ಕಟ್ಟಡದಲ್ಲಿ ಎನ್‌ಟಿಎ ಹೊಸ ಕಚೇರಿಗೆ ಸ್ಥಳವಕಾಶ ಮಾಡಲಾಗಿದೆ. ಗೋಪ್ಯ ಮತ್ತು ಸೂಕ್ಷ್ಮ ಕಾರ್ಯಾಚರಣ ವ್ಯವಸ್ಥೆಗಳನ್ನು ಕಳೆದ ಒಂದು ತಿಂಗಳಿನಿಂದ ಹೊಸ ಕಚೇರಿಗೆ ವರ್ಗಾಯಿಸಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಒಟ್ಟು 39 ಸಿಐಎಸ್‌ಎಫ್ ಸಿಬ್ಬಂದಿ ನಿಯೋಜನೆಗೊಂಡಿದ್ದಾರೆ. ಕಚೇರಿಯ ಗೋಪ್ಯ ಸ್ಥಳದ ಒಳಗೆ-ಹೊರಗೆ ಹೋಗುವವರ ತಪಾಸಣೆ ಸೇರಿ ಭದ್ರತಾ ಕಾರ್ಯವನ್ನು ಅವರು ನಿರ್ವಹಿಸಲಿದ್ದಾರೆಂದು ಅಧಿಕಾರಿ ಯೊಬ್ಬರು ತಿಳಿಸಿದ್ದಾರೆ. ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದ ಕುರಿತು ಸಿಬಿಐ ಸಲ್ಲಿಸಿದ್ದ ದೋಷಾ ರೋಪ ಪಟ್ಟಿಯಲ್ಲಿ, ಮೂವರು ವಿಷಯ ತಜ್ಞರನ್ನು ಪ್ರಶ್ನೆ ಪತ್ರಿಕೆ ಸೋರಿಕೆಯ ಪ್ರಾಥಮಿಕ ಮೂಲಗಳು ಎಂದು ಪತ್ತೆ ಹಚ್ಚಲಾಗಿದೆ. ತಜ್ಞರು ಎನ್‌ಟಿಎ ಕಚೇರಿಯ ಗೋಪ್ಯ ಸ್ಥಳ ಗಳಿಗೆ ಪ್ರವೇಶಿಸುವಾಗ ಅಥವಾ ಹೊರ ಬರುವಾಗ ಯಾವುದೇ ಪರಿಶೀಲನೆ ನಡೆಸಲಾಗುತ್ತಿರಲಿಲ್ಲ ಎಂದು ಉಲ್ಲೇಖಿಸಲಾಗಿತ್ತು.

**ಹಳೇಬೀಡು ಪ್ರಜಾಸೇವಾ ಆಂದೋಲನದಲ್ಲಿ ಶಾಸಕ ಹೆಚ್.ಕೆ.ಸುರೇಶ್**

# ವಿದ್ಯುತ್ ಸಮಸ್ಯೆ ಪರಿಹಾರಕ್ಕೆ ಸೂಚನೆ

• ಪ್ರಜೋದಯ ವರದಿ

**ಹಳೇಬೀಡು:** ಕೃಷಿ ಪಂಪ್ ಸೆಟ್ ಪರಿವರ್ತಕ ಸಮಸ್ಯೆ ನಿವಾರಣೆಗೆ ಹಳೇಬೀಡಿನ ಸೆಸ್ಕ್ ಶಾಖಾಧಿಕಾರಿ ಚಂದ್ರು ಸ್ಪಂದಿಸುತ್ತಿಲ್ಲ. ವಿದ್ಯುತ್ ಲೈನ್ ಸಮಸ್ಯೆ ಬಗೆಹರಿಸುತ್ತಿಲ್ಲ. ನಿರಂತರ ವಿದ್ಯುತ್ ನಿಲುಗಡೆಯಿಂದ ಬೆಳೆ ಉಳಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಹೊಸ ಪರಿವರ್ತಕ ಮಂಜೂರು ಮಾಡಿಸಿಕೊಳ್ಳಲು ಸಮಯಕ್ಕೆ ಸರಿಯಾಗಿ ಅಂದಾಜು ಸಿದ್ದ ಮಾಡಿಕೊಡುತ್ತಿಲ್ಲ ಎಂದು ನೂರಾರು ರೈತರು ದೂರಿದರು.

ಶನಿವಾರ ಹಳೇಬೀಡಿನಲ್ಲಿ ನಡೆದ ಪ್ರಜಾಸೇವಾ ಆಂದೋಲನದಲ್ಲಿ ಸೆಸ್ಕ್ ಸಂಬಂಧಿಸಿದಂತೆ ಬಿರುಸಿನ ಚರ್ಚೆ ನಡೆಯಿತು. ರೈತರ ಕೆಲಸ ಮಾಡಿಕೊಡ ದಿರುವುದನ್ನು ಸಹಿಸುವುದಿಲ್ಲ. ಬರಗಾಲದ ಪರಿಸ್ಥಿತಿ ಯಲ್ಲಿ ರೈತರು ಬೆಳೆ ಉಳಿಸಿಕೊಳ್ಳುವುದು ಕಷ್ಟವಿದೆ. ಸಕಾಲಕ್ಕೆ ಪರಿವರ್ತಕದ ಅಂದಾಜು ಸಿದ್ಧ ಮಾಡಿ, ಮಂಜೂರಾತಿ ಆದೇಶ ಮಾಡಲು ಉನ್ನತ ಅಧಿಕಾರಿಗಳಿಗೆ ಕಳುಹಿಸಬೇಕು. ಸಮರ್ಪಕವಾಗಿ ಕೆಲಸ ಮಾಡದಿದ್ದರೆ ಕೆಲಸದಿಂದ ಅಮಾನತು ಮಾಡಿಸುತ್ತೇವೆ.



ಸಮರ್ಪಕ ಕೆಲಸ ಸಾಧ್ಯವಾಗದಿದ್ದರೆ, ಬೇಲೂರು ವಿಧಾನಸಭಾ ಕ್ಷೇತ್ರ ಬಿಟ್ಟು ಹೊರಹೋಗಿ ಎಂದು ಶಾಸಕ ಹೆಚ್.ಕೆ.ಸುರೇಶ್ ಸೆಸ್ಕ್ ಶಾಖಾಧಿಕಾರಿ ಚಂದ್ರು ಅವರನ್ನು ತರಾಟೆಗೆ ತೆಗೆದುಕೊಂಡರು.

ಹಳೇಬೀಡಿನ ಸೆಸ್ಕ್ ಕಚೇರಿ ಹೆಸರಿಗಷ್ಟೇ ಉಪವಿಭಾಗವಾಗಿದೆ. ಎಇಇ, ತಾಂತ್ರಿಕ ಇಂಜಿನೀಯರ್ ಹಾಗೂ ಉಳಿಕೆ ಸಿಬ್ಬಂದಿ ನೇಮಕ ಮಾಡಿಲ್ಲ. ಉಪ ವಿಭಾಗದ ಕೆಲಸ ಸಮರ್ಪಕವಾಗಿ ನಡೆಯುತ್ತಿಲ್ಲ. ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರು ಉಪ ವಿಭಾಗ ಪರಿಪೂರ್ಣಗೊಳಿಸಲು ಕ್ರಮ ತೆಗೆದುಕೊಂಡಿಲ್ಲ. ಲೋಡ್ ಶೆಡ್ಡಿಂಗ್ ಇಲ್ಲ ಎಂದು ಪತ್ರಿಕೆಗಳಲ್ಲಿ ಸುದ್ದಿ ಪ್ರಕಟವಾಗಿದೆ. ಆದರೆ ಮಿತಿ ಇಲ್ಲದಂತೆ ಹಳೇಬೀಡು ವ್ಯಾಪ್ತಿಯಲ್ಲಿ ವಿದ್ಯುತ್ ನಿಲುಗಡೆ ಆಗುತ್ತಿದೆ ಎಂದು ಕೆಎಸ್ ಆರ್‌ಟಿಸಿ ನಿವೃತ್ತ ಸಂಚಾರ ಅಧಿಕಾರಿ ಜಿ.ಎನ್. ರಾಜಶೇಖರ್ ದೂರಿದರು.

ಸಮರ್ಪಕ ವಿದ್ಯುತ್ ಪೂರೈಕೆ ಮಾಡುವಂತೆ ಸೆಸ್ಕ್ ಇಂಜಿನೀಯರ್‌ಗಳಿಗೆ ಸೂಚಿಸಿದ ಎಚ್.ಕೆ.ಸುರೇಶ್, ಉಪವಿಭಾಗ ಪೂರ್ಣಗೊಳಿಸುವಂತೆ ಸೂಪರಿಂಟೆಂಡೆಂಟ್ ಇಂಜಿನೀಯರ್ ಜೊತೆ ಮಾತನಾಡುತ್ತೇವೆ ಎಂದರು.

ಕಲ್ಮಠದ ಪುರಾತನ ಮಲ್ಲೇಶ್ವರ ದೇವಾಲಯದ ದಾಖಲೆಯೇ ಇಲ್ಲದಂತಾಗಿದೆ. ದೇವಾಲಯದ ಹೆಸರಿಗೆ ಖಾತೆ ಮಾಡಿಸಿಕೊಡಬೇಕೆಂದು ಎಚ್.ಎಂ.ಉಮೇಶ್ ಸಲ್ಲಿಸಿದ ಅರ್ಜಿ ಚರ್ಚೆಗೆ ಬಂತು. ಮಲ್ಲೇಶ್ವರ ದೇವಾಲಯ ಜೀರ್ಣೋದ್ಧಾರ ಸಮಿತಿಯವರು ಸಮಸ್ಯೆ ಬಗೆಹರಿಸಿಕೊಡಿ ಎಂದು ಕೇಳಿಕೊಂಡರು. ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳ ನ್ಯಾಯಾಲಯದಲ್ಲಿ ದಾವೆ ಹಾಕಿ ಬಗೆಹರಿಸಿಕೊಳ್ಳುವಂತೆ ಉಪ ವಿಭಾಗಾಧಿಕಾರಿ ಹುಲುಮನಿ ತಿಮ್ಮಣ್ಣ ಸಲಹೆ ಮಾಡಿದರು.

ಪ್ರಜಾಸೇವಾ ಆಂದೋಲನದಲ್ಲಿ 103 ಅರ್ಜಿ ಬಂದವು. ಜಮೀನು, ನಿವೇಶನ, ಮನೆ ಖಾತೆಗೆ, ಪಿಂಚಣಿ, ಸರ್ವೆ, ಭೂವಿವಾದಕ್ಕೆ ಸಂಬಂಧಿಸಿದ ಅರ್ಜಿಗಳನ್ನು ಸಂಬಂಧಿಸಿದ ಇಲಾಖೆಯವರು ಕಂಪ್ಯೂಟರ್ ಸಿಸ್ಟಂನಿಂದ ಸ್ಥಳದಲ್ಲಿಯೇ ಪರಿಶೀಲನೆ ನಡೆಸಿದರು.

ಅಧಿಕಾರಿಗಳು ಇಲ್ಲದ ಸಬೂಬು ಹೇಳದೆ ಸಾರ್ವಜನಿಕರ ಕೆಲಸ ಮಾಡಿಕೊಡಬೇಕು. ಸಾರ್ವಜನಿಕರ ಸಮಸ್ಯೆಗೆ ಸ್ಪಂದಿಸಿ ಕೆಲಸ ಮಾಡಿ ಕೊಡುವುದು ಅಧಿಕಾರಿಗಳ ಕರ್ತವ್ಯ ಎಂಬುದನ್ನು ಅಧಿಕಾರಿಗಳು ಅರಿತುಕೊಳ್ಳಬೇಕೆಂದು ಶಾಸಕ ಹೆಚ್.ಕೆ.ಸುರೇಶ್ ಹೇಳಿದರು.

ಉಪ ವಿಭಾಗಾಧಿಕಾರಿ ಹುಲುಮನಿ ತಿಮ್ಮಣ್ಣ ಅರ್ಜಿದಾರರ ವಿಚಾರಣೆ ನಡೆಸಿದರು. ತಹಶೀಲ್ದಾರ್ ಶ್ರೀಧರ ಕಂಕಣವಾಡಿ, ತಾಲ್ಲೂಕು ಪಂಚಾ ಯಿತಿ ಕಾರ್ಯನಿರ್ವಹಣಾಧಿಕಾರಿ ಸುಬ್ರಹ್ಮಣ್ಯ ಶರ್ಮ, ಕ್ಷೇತ್ರ ಶಿಕ್ಷಣಾ ಧಿಕಾರಿ ಭಾಗ್ಯಮ್ಮ, ಪ್ರಾಚಾರ್ಯ ಡಾ.ಬಿ.ಕೆ. ಶ್ರೀನಿವಾಸ, ಟಿಎಚ್‌ಒ ಡಾ||ವಿಜಯ್, ಆಡಳಿತ ವೈದ್ಯಾಧಿ ಕಾರಿ ಹೆಚ್.ಆರ್. ಅನಿಲ್ ಕುಮಾರ್, ಪಿಡಿಒ ಎಸ್.ಸಿ. ವಿರೂಪಾಕ್ಷ ಭಾಗವಹಿಸಿದ್ದರು.

**ಪ್ರಚಾರದ ಕೊರತೆ: ಕಿಕ್ಕಿರಿದು ಸೇರದ ಜನ**

ಹಳೇಬೀಡಿನಲ್ಲಿ ನಡೆದ ಪ್ರಜಾಸೇವಾ ಆಂದೋಲನದ ಕುರಿತು ಸಾಕಷ್ಟು ಜನರಿಗೆ ಮಾಹಿತಿ ಇರಲಿಲ್ಲ. ಕಲ್ಯಾಣ ಮಂಟಪದಲ್ಲಿದ್ದ ಆಸನಗಳು ಭರ್ತಿಯಾಗಿದ್ದವು. ಆದರೆ ಜನ ಕಿಕ್ಕಿರಿದು ನೂಕುನುಗ್ಗಲಿನಲ್ಲಿ ಸೇರಿರಲಿಲ್ಲ. ಸಮರ್ಪಕವಾಗಿ ಪ್ರಚಾರ ಆಗಿದ್ದರೆ ಭಾರಿ ಜನ ಸ್ತೋಮ ಸೇರುತ್ತಿತ್ತು. ಗ್ರಾಮ ಸೇವಕರು ಮಾಹಿತಿ ಕೊಡದಿದ್ದರೆ, ಜನರ ಸಂಖ್ಯೆ ಮತ್ತಷ್ಟು ಕಡಿಮೆ ಆಗುತ್ತಿತ್ತು ಎಂಬ ಮಾತು ಸಾರ್ವಜನಿಕರಿಂದ ಕೇಳಿ ಬಂತು.

## ಗ್ಯಾರಂಟಿಗಳಿಂದ ಆರ್ಥಿಕ ನಿರ್ವಹಣೆ ಸಮಸ್ಯೆ

• ಪ್ರಜೋದಯ ವರದಿ



**ರಾಮನಗರ:** ಐದು ಗ್ಯಾರಂಟಿ ಯೋಜನೆ ಜಾರಿಗೆ ತಂದಿರದಿದ್ದರೆ ಸರ್ಕಾರಕ್ಕೆ ಆರ್ಥಿಕ ನಿರ್ವಹಣೆ ಸುಲಭವಾಗುತ್ತಿತ್ತು ಎಂದು ಸಚಿವ ಹೆಚ್.ಸಿ.ಬಾಲಕೃಷ್ಣ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಆರ್ಥಿಕ ನಿರ್ಬಂಧಗಳ ನಡುವೆಯೂ ಸರ್ಕಾರವು ಕಲ್ಯಾಣ ಯೋಜನೆಗಳ ಬದ್ಧತೆ ಹಾಗು ವೇತನ ಮತ್ತು ಅಭಿವೃದ್ಧಿ ಕಾರ್ಯಗಳ ವೆಚ್ಚದ ನಡುವೆ ಸಮತೋಲನ ಕಾಯ್ದುಕೊಳ್ಳಬೇಕಾದ ಅನಿವಾರ್ಯತೆ ಇದೆ. ನಮಗೆ ಈ ಗ್ಯಾರಂಟಿಗಳು ಇಲ್ಲದಿದ್ದರೆ ಬಹುಶಃ ಬೇರೆ ಅಭಿವೃದ್ಧಿಗೆ ವೇಗ ನೀಡಬಹುದಿತ್ತು. ಆದರೆ ನಾವು ಸರ್ಕಾರವನ್ನು ನಡೆಸಬೇಕಿದೆ. ಎಲ್ಲವನ್ನೂ ವ್ಯವಸ್ಥೆಯ ಚೌಕಟ್ಟಿನಲ್ಲಿ ಮತ್ತು ಬಜೆಟ್‌ನ ಮಿತಿಯೊಳಗೆ ನಿರ್ವಹಿಸ ಬೇಕಾಗುತ್ತದೆಂದು ಹೇಳಿದರು.

ಜನರ ಕಲ್ಯಾಣಕ್ಕಾಗಿ ನಾವು ಈ ಗ್ಯಾರಂಟಿಗಳನ್ನು ನೀಡಿದ್ದೇವೆ. ಬರಗಾಲದ ಸಂದರ್ಭದಲ್ಲಿ ರೈತರಿಗೆ ಆರ್ಥಿಕ ನೆರವು ನೀಡಬೇಕಾಗುತ್ತದೆ, ಆಗ ಅವರೂ ಪ್ರತಿಭಟನೆಗಳನ್ನು ನಡೆಸುತ್ತಾರೆ. ಗ್ಯಾರಂಟಿ ಯೋಜನೆಗಳ ಸೌಲಭ್ಯ ಪಡೆಯುತ್ತಿರುವವರೂ ಸಹ ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ. ನಾವು ಈ ಸಮಸ್ಯೆ ಗಳ ನಡುವೆ ಸಿಲುಕಿ ಪರದಾಡುತ್ತಿದ್ದೇವೆಂದು ಹೇಳಿದರು.

ಹೀಗಿದ್ದರೂ ಗ್ಯಾರಂಟಿ ಯೋಜನೆಗಳ ಅನುಷ್ಠಾನ ನಿಲ್ಲಿಸುವ ಯಾವುದೇ ಉದ್ದೇಶ ಸರ್ಕಾರ ಕ್ಕಾಗಲಿ ಅಥವಾ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗಾ ಗಲಿ ಇಲ್ಲ. ಇಂದು ಆರ್ಥಿಕ ವ್ಯವ ಸ್ಥೆಯು ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ಗಮನಿಸಿ. ನಾವು ಎಲ್ಲವನ್ನೂ ನಿರ್ವ ಹಿಸಬೇಕು, ವೇತನ ಪಾವತಿಸಬೇಕು ಮತ್ತು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು. ಇವೆಲ್ಲವೂ ಸಣ್ಣ ವಿಷಯಗಳು ಎಂದು ಬಿಡದಿಯಲ್ಲಿ ನಡೆಯುತ್ತಿರುವ ರೈತ ಹೋರಾಟ ಕುರಿತು ಪ್ರತಿಕ್ರಿಯಿಸಿದರು.

ಪ್ರತಿಭಟನಾಕಾರರು ಎದುರಿಸುತ್ತಿರುವ ಸವಾಲುಗಳು ತಮಗೆ ಅರ್ಥವಾಗಿವೆ. ನಾವು ನಿಮಗೆ ತೊಂದರೆ ನೀಡುತ್ತಿದ್ದೇವೆ ಎಂದು ಭಾವಿಸಿ ಇದನ್ನು ತಪ್ಪಾಗಿ ಅರ್ಥೈಸಿಕೊಳ್ಳಬೇಡಿ. ಆ ರೀತಿ ನೋಡುವುದು ಸರಿಯಲ್ಲ. ನಮಗೂ ನಮ್ಮದೇ ಆದ ಮಿತಿಗಳಿವೆ. ಸರ್ಕಾರದ ನಿಲುವನ್ನು ಅರ್ಥಮಾಡಿಕೊಳ್ಳುವಂತೆ ಅವರು ಪ್ರತಿಭಟನಾಕಾರರಲ್ಲಿ ಮನವಿ ಮಾಡಿದರು.

# ಸಾಲ ಮನ್ನಾ ಮಾಡಲೆಂದೇ ಪಾಪಿಗಳೊಂದಿಗೆ ಸರ್ಕಾರ ಮಾಡಿದೆ

### ಕಾಂಗ್ರೆಸ್‌ನ ಯಾರೂ ರೈತರ ನೆರವಿಗೆ ಬರಲಿಲ್ಲ | ಹೆಚ್.ಡಿ.ಕೆ. ಗಂಭೀರ ಆರೋಪ

• ಪ್ರಜೋದಯ ವರದಿ

**ಬೆಂಗಳೂರು:** ಸಾಲ ಮನ್ನಾ ಮಾಡುವ ಸಲುವಾಗಿಯೇ ನಾನು 2018ರಲ್ಲಿ ಈ ಪಾಪಿಗಳ (ಕಾಂಗ್ರೆಸ್) ಜೊತೆ ಸರ್ಕಾರ ಮಾಡಬೇಕಾಯಿತು. ಸಾಲ ಮನ್ನಾ ಮಾಡುವುದರಲ್ಲಿ ಕಾಂಗ್ರೆಸ್ ಪಾತ್ರ ಏನೂ ಇಲ್ಲವೆಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ವಾಗ್ದಾಳಿ ನಡೆಸಿದರು.

ಜೆಡಿಎಸ್ ಪಕ್ಷದ ಕೇಂದ್ರ ಕಚೇರಿ ಜೆಪಿ ಭವನದಲ್ಲಿ ಭಾನುವಾರ ಸಾರ್ವಜನಿಕರ ಅಹವಾಲು ಸ್ವೀಕರಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, 2018ರಲ್ಲಿ ನಾನು ರೈತರ ಸಾಲ ಮನ್ನಾ ಮಾಡಿದಾಗ ಈ ಪಾಪಿಗಳು ಬೆಂಬಲ ನೀಡಲಿಲ್ಲ. ಸಾಲ ಮನ್ನಾ ನಿಮ್ಮ ಭರವಸೆ. ಅದಕ್ಕೂ ನಮಗೂ ಸಂಬಂಧವಿಲ್ಲವೆಂದು ಹೇಳಿದ್ದರು ಎಂದರು.

ಸಾರ್ವಜನಿಕರ ತೆರಿಗೆ ಹಣವನ್ನು ಮನಸೋಇಚ್ಛೆ ಪೋಲು ಮಾಡುತ್ತಿರುವ ಇವರಿಗೆ ಸಾಲ ಮನ್ನಾ ಮಾಡಲು ಹಣವಿಲ್ಲ. ಅಷ್ಟೇ ಏಕೆ ಅಂತಹ ಒಳ್ಳೆ ಕೆಲಸಗಳನ್ನು ಮಾಡುವುದಕ್ಕೆ ಇವರಿಗೆ ಮನಸ್ಸು ಬರುವುದಿಲ್ಲ. ಜನರು ತೆರಿಗೆ ಕಟ್ಟಿ ಖಜಾನೆ ತುಂಬಿಸುತ್ತಿದ್ದಾರೆ, ಇವರು ಲೂಟಿ ಹೊಡೆಯುತ್ತಿದ್ದಾರೆ. ಹೀಗಾಗಿ ಸಾಲ ಮನ್ನಾ ಮಾಡುವುದಕ್ಕೆ ಹಣ ಎಲ್ಲಿದೆ ಎಂದು ಪ್ರಶ್ನಿಸಿದರು.



ನಾನು ಸಾಲ ಮನ್ನಾ ಮಾಡಿದಾಗ ತಮ್ಮ ಭಾಗ್ಯಗಳಿಗೆ ಮಾತ್ರ ಹಣ ಕೊಡಿ ಎಂದು ನನ್ನ ಮೇಲೆ ಒತ್ತಡ ಹೇರಿದರೆ ಹೊರತು ಸಾಲ ಮನ್ನಾ ಮಾಡುವುದಕ್ಕೆ ಕೊನೆಯ ಪಕ್ಷ ಒಬ್ಬರೂ ಬೆಂಬಲ ನೀಡಲಿಲ್ಲವೆಂದು ಹೇಳಿದರು.

ನಾನು ಕೇಂದ್ರದ ಬಳಿ ಕೈಚಾಚಲಿಲ್ಲ

ನಾನು ಎರಡು ಬಾರಿ ಸಾಲ ಮನ್ನಾ ಮಾಡಿದೆ ಎಂಬುದು ಎಲ್ಲರಿಗೂ ಗೊತ್ತು. ಆದರೆ ಈ ಎರಡೂ ಸಂದರ್ಭಗಳಲ್ಲಿ ನಾನು ಕೇಂದ್ರ ಸರ್ಕಾರದ ಮುಂದೆ ಸಾಲ ಮನ್ನಾ ಮಾಡುತ್ತೇನೆ. ಹಣ ಕೊಡಿ ಎಂದು ಅರ್ಜಿ ತೆಗೆದುಕೊಂಡು ಹೋಗಲಿಲ್ಲ. ಕೇಂದ್ರ ಸರ್ಕಾರದ ಬಳಿ ಕೈಚಾಚಲಿಲ್ಲ. ಇವರು ನೋಡಿದರೆ 2500 ರೂ. ಕೊಡುತ್ತೇವೆಂದು ಕೇಂದ್ರದ ಮುಂದೆ ಭಿಕ್ಷೆ ಬೇಡುತ್ತಿದ್ದಾರೆ. ನನ್ನ ಸರ್ಕಾರದ ಅವಧಿಯಲ್ಲಿ ಕಬ್ಬು ಬೆಳೆಗಾರರಿಗೆ 28,000 ರೂ. ಪರಿಹಾರ ನೀಡಲಾಗಿತ್ತು. ಅದೇ ಸಂದರ್ಭದಲ್ಲಿ 25,000 ಕೋ.ರೂ. ಸಾಲ ಮನ್ನಾ ಮಾಡಿದ್ದೆ. ಮೈಕ್ರೋಫೈನಾನ್ಸ್ ಹಾವಳಿಯಿಂದ ರೈತರನ್ನು ರಕ್ಷಿಸಲು 14 ತಿಂಗಳ ಅವಧಿಯಲ್ಲೇ ಸಾಲ ಮನ್ನಾ ಮಾಡಿದ್ದೆ ಹಾಗು ಋಣಮುಕ್ತ ಕಾಯ್ದೆಗೆ ರಾಷ್ಟ್ರಪತಿ ಬಳಿಗೆ ನಾನೇ ಹೋಗಿ ಸಹಿ ಹಾಕಿಸಿಕೊಂಡು ಬಂದಿದ್ದೆ. ನಾನು ಅಧಿಕಾರ ಬಿಟ್ಟ ಮೇಲೆ ಆ ಕಾಯ್ದೆ ಏನಾಯಿತು ಎಂದು ಖಾರವಾಗಿ ಪ್ರಶ್ನಿಸಿ ದರು.

> ಕೆಪಿಎಸ್ಸಿ ನೇಮಕಾತಿಯಲ್ಲಿ ಅಕ್ರಮ ನಡೆದಿದೆ ಎಂದು ಎಲ್ಲರಿಗೂ ಗೊತ್ತು. ಸಚಿವ ಪ್ರಿಯಾಂಕ್ ಖರ್ಗೆ ಉಸ್ತುವಾರಿ ವಹಿಸಿದ್ದ ಇಲಾಖೆಯಲ್ಲಿ ಅಕ್ರಮ ನೇಮಕಾತಿ ನಡೆದಿದೆ. 24 ಇಂಜಿನೀಯರ್‌ಗಳ ನೇಮಕದಲ್ಲಿ ಅಕ್ರಮ ಆಗಿದೆ. ಆದರೆ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರಿಯಾಂಕ್ ಖರ್ಗೆ ತಪ್ಪೇ ಮಾಡಿಲ್ಲವೆಂದು ಕ್ಲೀನ್ ಚಿಟ್ ನೀಡುತ್ತಿದ್ದಾರೆ.
>
> -ಹೆಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

**ಸರ್ವಪಕ್ಷ ನಿಯೋಗ ಬೇಡ**

ಬರದ ವಿಚಾರಕ್ಕಾಗಿ ಸರ್ವಪಕ್ಷ ನಿಯೋಗವನ್ನು ದೆಹಲಿಗೆ ಕರೆದುಕೊಂಡು ಹೋಗಿ ಏನು ಮಾಡುತ್ತಿರಿ, ಅದು ಮತ್ತೊಂದು ಖರ್ಚು. ವಿಮಾನ, ಫೈವ್ ಸ್ಟಾರ್ ಹೋಟೆಲ್ ವಾಸ್ತವ್ಯ ಎಲ್ಲವೂ ಅನಗತ್ಯ ಖರ್ಚು. ನೀವೇ ಯಾರಾದರೂ ಹೋಗಿ ಮಾತನಾಡಿಕೊಂಡು ಬರಲು ಆಗುವುದಿಲ್ಲವೇ. ರಾಜ್ಯದ ಖಜಾನೆ ಖಾಲಿಯಾಗಿದೆ ಎಂದು ನಾನು ಹೇಳುವುದಿಲ್ಲ, ಖಾಲಿ ಮಾಡಿಕೊಂಡು ಕುಳಿತಿರುವವರು ನೀವು ಎಂದು ಆಕ್ರೋಶ ವ್ಯಕ್ತಪಡಿಸಿದರು.

**ಹಾಲಿಗೆ ಪ್ರೋತ್ಸಾಹ ಧನ ನೀಡಬೇಕು**

ಹಾಲಿನ ದರ ಹೆಚ್ಚಳ ಈ ಸಂದರ್ಭದಲ್ಲಿ ಸರಿಯಲ್ಲ, ಗ್ಯಾರಂಟಿಗಳಿಗೆ ಹಣ ಮೀಸಲಿಟ್ಟಿದ್ದೀರಿ, 6ನೇ ಗ್ಯಾರಂಟಿ ಎಂದು ರೈತರಿಗೆ ಪ್ರೋತ್ಸಾಹ ಧನ ಕೊಡಿ. ಕೇವಲ ಕಾಫಿ, ಟೀಗೆ 200 ಕೋ.ರೂ. ಖರ್ಚು ಮಾಡುವ ಈ ಸರ್ಕಾರಕ್ಕೆ ಪ್ರೋತ್ಸಾಹ ಧನ ನೀಡುವುದು ಕಷ್ಟವೇ. ಕುಟುಂಬದಲ್ಲಿ ಮಕ್ಕಳಿಗೆ ಹಾಲು ತೆಗೆದುಕೊಳ್ಳಬೇಕಾದರೆ ಬಡ ಕುಟುಂಬದ ಪರಿಸ್ಥಿತಿ ಏನಾಗಬಹುದು. ರೈತ ಹಸುಗಳನ್ನು ನಂಬಿ ಬದುಕುತ್ತಿದ್ದಾನೆ ಎಂದು ಸಚಿವರು ಹೇಳಿದರು.

## ಎಸ್.ಎಲ್.ಭೈರಪ್ಪ ಪ್ರಥಮ ವರ್ಷದ ಪುಣ್ಯ ಸ್ಮರಣೆ



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಖ್ಯಾತ ಸಾಹಿತಿ ಡಾ. ಎಸ್.ಎಲ್.ಭೈರಪ್ಪ ಅವರ ಪ್ರಥಮ ವರ್ಷದ ಪುಣ್ಯ ಸ್ಮರಣೆಯನ್ನು ಹುಟ್ಟೂರು ಸಂತೇಶಿವರದಲ್ಲಿ ಭಾನುವಾರ ಹಮ್ಮಿಕೊಳ್ಳಲಾಗಿತ್ತು.

ಗ್ರಾಮದ ಗೌರಮ್ಮ ಸ್ಮಾರಕ ಗ್ರಂಥಾಲಯ ಮುಂಭಾಗ ಎಸ್.ಎಲ್.ಭೈರಪ್ಪನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಗ್ರಾಮಸ್ಥರು ಶ್ರದ್ಧಾಂಜಲಿ ಸಲ್ಲಿಸಿದರು.

ಟಿಎಪಿಎಂಎಸ್ ನಿರ್ದೇಶಕ ಎಸ್.ಚಿರಂಜೀವಿ ಅವರು ಮಾತನಾಡಿ, ಹುಟ್ಟೂರಿನ ಋಣ ತೀರಿಸಬೇಕೆಂದು ಭೈರಪ್ಪನವರು ಕೆರೆಗೆ ನೀರು ಹರಿಸಬೇಕೆಂದು ಶ್ರಮಪಟ್ಟಿದ್ದರು. ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಏತ ನೀರಾವರಿ ಯೋಜನೆಗೆ ಆಗ್ರಹಿಸಿದ್ದ ಪರಿಣಾಮ 25 ಕೋ.ರೂ. ಬಿಡುಗಡೆಯಾಗಿ ಯೋಜನೆಗೆ ಕಾಯಕಲ್ಪ ನೀಡಲಾಗಿತ್ತು. ಭೈರಪ್ಪನವರು ಜೀವಿತ ಅವಧಿಯಲ್ಲೇ ಸಂತೇಶಿವರ ಏತ ನೀರಾವರಿ ಯೋಜನೆಗೆ ಚಾಲನೆ ನೀಡುವ ಮೂಲಕ ಕಳೆದ 2 ವರ್ಷಗಳಿಂದ ಕೆರೆಗೆ ನೀರು ಬರುತ್ತಿದೆ ಎಂದರು.

ಭೈರಪ್ಪನವರ ಪಾರ್ಥಿವ ಶರೀರವನ್ನು ಗ್ರಾಮಕ್ಕೆ ತರಲಾಗದಿದ್ದರೂ ಹುಟ್ಟೂರಿನ ಕೆರೆಯಲ್ಲಿ ಅಸ್ತಿ ವಿಸರ್ಜಿಸುವ ಮೂಲಕ ಅವರ ಆಸೆಯನ್ನು ಈಡೇರಿಸಲಾಗಿದೆ. ಎಸ್.ಎಲ್.ಭೈರಪ್ಪನವರು ದೈವ ಸ್ವರೂಪಿಯಾದರು. ಅವರ ಪರಿಶ್ರಮದಿಂದ ಗ್ರಾಮದ ಕೆರೆಗೆ ನೀರು ಬಂದಿದೆ. ಅವರು ನಿಧನರಾದ ಒಂದು ವರ್ಷದಿಂದ ಅವರ ತಾಯಿಯ ಸ್ಮಾರಕ ಭವನದಲ್ಲಿ ಅವರ ಭಾವಚಿತ್ರದ ಮುಂಭಾಗ ದೀಪ ಬೆಳಗಿಸಲಾಗುತ್ತಿದೆ. ಅವರು ಹುಟ್ಟೂರಿನ ಹೆಮ್ಮೆಯ ಮಗ. ಭೈರಪ್ಪನವರ ಅಗಲಿಕೆಯಿಂದ ಗ್ರಾಮ ಬಡವಾಗಿದೆ ಎಂದರು. ಶ್ರದ್ಧಾಂಜಲಿ ಸಭೆಯಲ್ಲಿ ಭೈರಪ್ಪನವರ ಸಂಬಂಧಿ ಎಸ್.ಎಲ್.ಕೃಷ್ಣಪ್ರಸಾದ್, ಗ್ರಾಮಸ್ಥರಾದ ವೀರೇಶ್, ಗಂಗಾಧರ್, ನಾಗೇಶ್, ಸಿದ್ದಲಿಂಗ ಸ್ವಾಮಿ, ಮೋಕ್ಷಿತ್, ಶೋಭಾ ರಾಜಶೇಖರ್, ಸ್ವಾಮಣ್ಣ, ಉಮಾ ಗಂಗಾಧರ್, ಬಸವರಾಜ್ ಒಡೆಯರ್ ಮತ್ತಿತರರಿದ್ದರು.

## ಗುಣಮಟ್ಟದ ಶಿಕ್ಷಣ ಶಿಕ್ಷಕರ ಆದ್ಯತೆಯಾಗಲಿ

» ಮೊದಲನೇ ಪುಟದಿಂದ

ಸಾಮಾನ್ಯ ಶಿಕ್ಷಕರಾಗಿದ್ದ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ರಾಷ್ಟ್ರಪತಿ ಹುದ್ದೆಗೇರಿ ವೃತ್ತಿ ಪಾವಿತ್ರ್ಯತೆ ಎತ್ತಿ ಹಿಡಿದಿದ್ದು ಅವರ ತತ್ವ, ಚಿಂತನೆ, ಆದರ್ಶಗಳನ್ನು ಮೈಗೂಡಿಸಿಕೊಂಡು ಮುನ್ನಡೆಯೋಣವೆಂದರು.

ತಹಶೀಲ್ದಾರ್ ಎಂ.ಜಿ.ಸಂತೋಷ್ ಕುಮಾರ್ ಅವರು ಮಾತನಾಡಿ, ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಶಿಕ್ಷಕ ಸಮುದಾಯದ ಪ್ರತಿನಿಧಿಯಾಗಿದ್ದು ಜಯಂತಿ ಆಯೋಜನೆ ಔಚಿತ್ಯಪೂರ್ಣ ಎಂದರು. ಕ್ಷೇತ್ರ ಶಿಕ್ಷಣಾಧಿಕಾರಿ ಮೋಹನ್ ಕುಮಾರ್, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಗೀಜಿಹಳ್ಳಿ ಧರ್ಮಶೇಖರ್, ಅನಂತ ಸದ್ವಿದ್ಯ ಶಿಕ್ಷಣ ಸಂಸ್ಥೆ ಛೇರ್ಮನ್ ಆರ್.ಅನಂತಕುಮಾರ್ ಮಾತನಾಡಿದರು. ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾದ ಪ್ರಾಥಮಿಕ ಹಾಗು ಪ್ರೌಢಶಾಲೆ ಶಿಕ್ಷಕರನ್ನು ಗೌರವಿಸಲಾಯಿತು. ಸರ್ಕಾರಿ, ಅನುದಾನಿತ ಹಾಗು ಅನುದಾನ ರಹಿತ ಶಾಲಾ ಶಿಕ್ಷಕರ ಸಂಘಟನೆ ಪದಾಧಿಕಾರಿಗಳು ಒಳಗೊಂಡಂತೆ ಪ್ರಮುಖರು ಸಮಾರಂಭವನ್ನು ಸಾಕ್ಷೀಕರಿಸಿದರು.

## ಹಳೇಬೀಡಿನಲ್ಲಿ ವಿಶ್ವ ಪ್ರವಾಸೋದ್ಯಮ ದಿನ

• ಪ್ರಜೋದಯ ವರದಿ

**ಬೇಲೂರು:** ವಿಶ್ವ ಪ್ರವಾಸೋದ್ಯಮ ದಿನದ ಅಂಗವಾಗಿ ವಿಶ್ವವಿಖ್ಯಾತ ಹಳೇಬೀಡಿನ ಹೊಯ್ಸಳೇಶ್ವರ ದೇಗುಲದ ಆವರಣದಲ್ಲಿ ಭಾನುವಾರ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಹಳೇಬೀಡಿನ ಕೇದಾರನಾಥ ದೇವಾಲಯದ ಸಮೀಪ ಸ್ವಚ್ಚತಾ ಕಾರ್ಯಕ್ರಮ ನಡೆಯಿತು. ನಂತರ ಡೊಳ್ಳು ಕುಣಿತ ಸೇರಿ ಜಾನಪದ ಕಲಾತಂಡಗಳೊಂದಿಗೆ ಕೇದಾರನಾಥ ದೇವಾಲಯದಿಂದ ವಿಶ್ವವಿಖ್ಯಾತ ಹೊಯ್ಸಳೇಶ್ವರ ದೇಗುಲದ ವರೆಗೆ ಹೆರಿಟೇಜ್ ವಾಕ್ ನಡೆಸಲಾಯಿತು. ದಾರಿಯುದ್ದಕ್ಕೂ ಪಾರಂಪರಿಕ ತಾಣಗಳ ಮಹತ್ವದ ಕುರಿತು ಜನರಲ್ಲಿ ಅರಿವು ಮೂಡಿಸಲಾಯಿತು. ಇದೇ ಸಂದರ್ಭ ಹೊಯ್ಸಳೇಶ್ವರ ದೇಗುಲದ ಆವರಣಗಿಡ ನೆಟ್ಟು ನೀರೆರೆಯುವ ಮೂಲಕ ಪರಿಸರ ಸಂರಕ್ಷಣೆಯ ಸಂದೇಶ ಸಾರಲಾಯಿತು.



ಹೆರಿಟೇಜ್ ವಾಕ್ ಸಂದರ್ಭ ಪ್ರವಾಸೋದ್ಯಮದ ಅಭಿವೃದ್ಧಿ ಹಾಗು ಪ್ರವಾಸಿಗರಿಗೆ ಹೆಚ್ಚಿನ ಸೌಲಭ್ಯ ಕಲ್ಪಿಸುವ ಕುರಿತು ಸ್ಥಳೀಯ ಮಾರ್ಗದರ್ಶಿಗಳು (ಗೈಡ್‌ಗಳು) ಸಾರ್ವಜನಿಕರೊಂದಿಗೆ ಚರ್ಚೆ ನಡೆಸಿದರು.

ಈ ಸಂದರ್ಭ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಸಂಬಂಧಿಸಿ ಸ್ಥಳೀಯರಿಂದ ಹಲವು ಸಲಹೆ ಪಡೆಯಲಾಯಿತು. ಬೇಲೂರು ಸೇರಿ ಪ್ರಮುಖ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಪಾರ್ಕಿಂಗ್ ವ್ಯವಸ್ಥೆ ಹಾಗು ಅಗತ್ಯವಿದ್ದರೆ ಬ್ಯಾಟರಿ ಚಾಲಿತ ವಾಹನಗಳ ವ್ಯವಸ್ಥೆ ಕಲ್ಪಿಸುವ ಕುರಿತು ಸಲಹೆಗಳು ವ್ಯಕ್ತವಾದವು. ಸ್ಥಳೀಯರ ಅನುಭವ ಹಾಗು ಸಲಹೆಗಳನ್ನು ಪ್ರವಾಸೋದ್ಯಮ ಅಭಿವೃದ್ಧಿಯ ದೃಷ್ಟಿಯಿಂದ ಪರಿಗಣಿಸುವ ಕುರಿತು ಚರ್ಚಿಸಲಾಯಿತು.

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಅಧ್ಯಕ್ಷ ಹಾಗು ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಅವರು ಮಾತನಾಡಿ, ವಿಶ್ವವಿಖ್ಯಾತ ಹಳೇಬೀಡಿನ ದೇಗುಲವು ಹೊಯ್ಸಳರ ಶಿಲ್ಪಕಲೆಯ ವೈಭವವನ್ನು ಸಾರುವ ಅಪೂರ್ವ ಐತಿಹಾಸಿಕ ಸ್ಮಾರಕವಾಗಿದೆ. ಇಲ್ಲಿನ ಸೂಕ್ಷ್ಮ ಕೆತ್ತನೆ, ವಿಶಿಷ್ಟ ವಾಸ್ತುಶಿಲ್ಪ ಹಾಗು ಐತಿಹಾಸಿಕ ಮಹತ್ವ ದೇಶ-ವಿದೇಶಗಳ ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಇಂತಹ ಅಮೂಲ್ಯ ಸ್ಮಾರಕ ಸಂರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.

ಪ್ರವಾಸೋದ್ಯಮವು ಸಂಸ್ಕೃತಿ, ಶಾಂತಿ ಮತ್ತು ಸಮೃದ್ಧಿಗೆ ದಾರಿ ಮಾಡಿಕೊಡುತ್ತದೆ. ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಪ್ರತಿಯೊಬ್ಬರೂ ಇಲ್ಲಿನ ಐತಿಹಾಸಿಕ ಸ್ಮಾರಕಗಳು ಹಾಗು ಪ್ರಕೃತಿ ಸೌಂದರ್ಯವನ್ನು ಗೌರವಿಸಬೇಕು. ಪ್ರವಾಸಿ ತಾಣಗಳ ಸ್ವಚ್ಚತೆ, ಸಂರಕ್ಷಣೆ, ಪಾರಂಪರಿಕ ಸ್ಮಾರಕಗಳ ರಕ್ಷಣೆಗೆ ಎಲ್ಲರೂ ಸಹಕರಿಸಬೇಕು. ಹಳೇಬೀಡು ಸೇರಿ ಹಲವು ಪ್ರವಾಸಿ ತಾಣಗಳು ಐತಿಹಾಸಿಕ ಪರಂಪರೆ, ಅಪೂರ್ವ ಶಿಲ್ಪಕಲೆ ಹಾಗು ಪ್ರಕೃತಿ ಸೌಂದರ್ಯದಿಂದ ವಿಶೇಷ ಸ್ಥಾನ ಪಡೆದಿದೆ. ಹಳೇಬೀಡು ಸೇರಿ ಪ್ರವಾಸಿ ತಾಣಗಳ ವೈಭವವನ್ನು ಮುಂದಿನ ಪೀಳಿಗೆಗೂ ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಸಾರ್ವಜನಿಕರು ಹಾಗು ಪ್ರವಾಸಿಗರು ಜವಾಬ್ದಾರಿಯುತವಾಗಿ ನಡೆದುಕೊಳ್ಳ ಬೇಕೆಂದರು. ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕಿ ರೂಪ ಮತ್ತಿತರರಿದ್ದರು.

## ಚುನಾವಣಾ ಆಯೋಗದ ಕಚೇರಿಗೆ ಬೆಂಕಿ ಬೀಳಬಹುದು

» ಮೊದಲನೇ ಪುಟದಿಂದ

ಆದರೆ, ಅದನ್ನು ಭರ್ತಿ ಮಾಡುವಂತೆ ರಾಷ್ಟ್ರ ಪ್ರಶಸ್ತಿ ವಿಜೇತ ನನಗೆ ಹೇಳು ವುದು ಎಷ್ಟರ ಮಟ್ಟಿಗೆ ಸರಿ. ನಾನು ಈ ದೇಶದ ವಾಸಿ ಎಂದು ಹೇಗೆ ಸಾಬೀತು ಪಡಿಸಬೇಕು. ಆಪರೇಷನ್ ಕಮಲದ ಮಾದರಿಯಲ್ಲಿ ಫಾರಂ-7 ಬಳಕೆ ಮಾಡಲಾಗುತ್ತಿದೆ ಎಂದರು.

**ಏಕಪಕ್ಷೀಯ ತೀರ್ಮಾನ**

ಚುನಾವಣಾ ಆಯೋಗದ ಮುಖ್ಯಸ್ಥ ಜ್ಞಾನೇಶ್ ಕುಮಾರ್ ಏಕಪಕ್ಷೀಯವಾಗಿ ಕೆಲಸ ಮಾಡುತ್ತಿದ್ದಾರೆ. ಕರ್ನಾಟಕ ಮತ್ತೊಂದು ಪಶ್ಚಿಮ ಬಂಗಾಳವಾಗಬಾರದು. ಸೆ.30ರಂದು ಮಾಧ್ಯಮಗಳ ಮೂಲಕ ದಾಖಲೆಗಳನ್ನು ಬಿಡುಗಡೆ ಮಾಡಿ ಜನರಿಗೆ ಮಾಹಿತಿ ನೀಡುತ್ತೇವೆ. ಈ ವಿಚಾರವಾಗಿ ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಪ್ರಶ್ನಿಸುತ್ತೇವೆ. ಎಸ್‌ಐಆರ್‌ನಲ್ಲಿ ಆಗಿರುವ ಲೋಪಗಳ ಕುರಿತು ರಾಜ್ಯದ 100 ಮತಗಟ್ಟೆಗಳಲ್ಲಿ ದಾಖಲೆಗಳನ್ನು ಸಂಗ್ರಹಿಸುವುದಾಗಿ ತಿಳಿಸಿದ ಅವರು, ಅ.1ರಂದು ದೆಹಲಿಯಲ್ಲಿ ಪತ್ರಿಕಾಗೋಷ್ಠಿ ಹಾಗು ಅ.15ರಂದು ಜಂತರ್‌ಮಂತರ್‌ನಲ್ಲಿ ಸಮಾವೇಶ ನಡೆಸುವುದಾಗಿ ಹೇಳಿದರು.

ಮತದಾರರ ಪಟ್ಟಿಯಿಂದ ಕೋಟ್ಯಾಂತರ ಜನರ ಹೆಸರುಗಳನ್ನು ತೆಗೆದು ಹಾಕುವಂತಹ ಪ್ರಕ್ರಿಯೆ ನಡೆಯುತ್ತಿದ್ದರೂ ಅದರ ಬಗ್ಗೆ ಸಮರ್ಪಕ ಸ್ಪಷ್ಟನೆ ನೀಡಲಾಗುತ್ತಿಲ್ಲ. ಕೇಂದ್ರ ಸರ್ಕಾರ ಯಾರ ಕಿವಿಗೆ ಹೂವು ಇಡುತ್ತಿದ್ದಿರಿ. ಇನ್ನು ಎಷ್ಟು ದಿನ ಜನರನ್ನು ಮಂಗ ಮಾಡುತ್ತಿರಾ ಎಂದು ಪ್ರಶ್ನಿಸಿದರು. ಹೋರಾಟಗಾರರಾದ ಕೆ.ಎಲ್.ಅಶೋಕ್, ಇರ್ಷಾದ್ ದೇಸಾಯಿ, ಗಿರಿಜಾ ಇದ್ದರು.

### ಸಂತ್ರಸ್ತರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರ ಕಾರ್ಯ | ನೇಪಾಳದಲ್ಲೂ ವರುಣಾರ್ಭಟ

## ಉತ್ತರ ಪ್ರದೇಶ ಮಳೆಗೆ 58 ಜನರು ಮೃತ

• ಪ್ರಜೋದಯ ವರದಿ

**ಲಖನೌ:** ಉತ್ತರ ಪ್ರದೇಶದ ವಿವಿಧ ಜಿಲ್ಲೆಗಳಲ್ಲಿ ಧಾರಾಕಾರ ಮಳೆ ಮುಂದುವರಿದಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ. ಮಳೆ ಸಂಬಂಧಿತ ಸಿಡಿಲು, ಮನೆ ಮತ್ತು ಗೋಡೆ ಕುಸಿತದಂತಹ ಅನಾಹುತಗಳಲ್ಲಿ ಇಲ್ಲಿವರೆಗೂ 58 ಜನರು ಮೃತಪಟ್ಟಿದ್ದಾರೆ.



ರಾಜ್ಯದ ಹಲವು ಜಿಲ್ಲೆಗಳಲ್ಲಿ ಸೋಮವಾರ ಭಾರೀ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಲಖನೌ, ಗೋರಖ್‌ಪುರ, ಪ್ರಯಾಗ್ ರಾಜ್ ಹಾಗು ವಾರಾಣಸಿ ಸೇರಿ ಪ್ರಮುಖ ನಗರಗಳ ಹಲವು ಬಡಾವಣೆಗಳಲ್ಲಿ ಅಪಾರ ಪ್ರಮಾಣದ ನೀರು ನಿಂತಿದ್ದು, ವಸತಿ ಪ್ರದೇಶಗಳ ಮನೆಗಳಿಗೆ ನೀರು ನುಗ್ಗಿದೆ. ಅವಧ್ ಜಿಲ್ಲೆಯಲ್ಲಿ ಮಳೆ ಸಂಬಂಧಿತ ಘಟನೆಗಳಲ್ಲಿ 26 ಜನರು ಸಾವನ್ನಪ್ಪಿದ್ದರೆ ಕಾನ್ಪುರ- ಬುಂದೇಲ್‌ಖಂಡ್ ಪ್ರದೇಶದಲ್ಲಿ 13 ಜನರು ಅಸುನೀಗಿದ್ದಾರೆಂದು ವರದಿಯಾಗಿದೆ.

ಮೊರಾದಾಬಾದ್, ರಾಂಪುರ, ಪಿಲಿಭಿತ್ ಮತ್ತು ಬರೇಲಿ ಜಿಲ್ಲೆಗಳಿಗೆ ಹವಾಮಾನ ಇಲಾಖೆಯು ಭಾನುವಾರ ಆರೆಂಜ್ ಅಲರ್ಟ್ ಘೋಷಿಸಿತ್ತು. ಗುರುವಾರ ರಾತ್ರಿಯಿಂದ ಸುರಿಯುತ್ತಿರುವ ನಿರಂತರ ಮಳೆಯಿಂದಾಗಿ ರೈಲು ಮತ್ತು ವಿಮಾನ ಸಂಚಾರದಲ್ಲಿ ವ್ಯತ್ಯಯ ಉಂಟಾಗಿದ್ದು, ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆಯೆಂದು ಸರ್ಕಾರದ ಮೂಲಗಳು ತಿಳಿಸಿವೆ.

ಮಳೆಯಿಂದ ಬೆಳೆ ಹಾನಿ ಮತ್ತು ಜಾನುವಾರುಗಳಿಗೆ ಆಗಿರುವ ನಷ್ಟವನ್ನು ತಕ್ಷಣವೇ ಸಮೀಕ್ಷೆ ನಡೆಸಿ ಸಂತ್ರಸ್ತರಿಗೆ ತುರ್ತು ಪರಿಹಾರ ಒದಗಿಸುವಂತೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಅವರು ಪರಿಸ್ಥಿತಿಯ ಮೇಲೆ ನಿಗಾ ವಹಿಸಿದ್ದು, ರಾಜ್ಯಾದ್ಯಂತ ಭಾರೀ ಮಳೆಯಿಂದ ಸಂತ್ರಸ್ತರಾದ ಜನರಿಗೆ ತಕ್ಷಣದ ಪರಿಹಾರ ಒದಗಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆಂದು ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ.

ಅತಿಯಾದ ಮಳೆಯಿಂದಾಗಿ ಸಂಭವಿಸಿದ ಜೀವಹಾನಿ, ಜಾನುವಾರುಗಳ ನಷ್ಟ ಮತ್ತು ಮನೆಗಳ ಹಾನಿಗೆ ತ್ವರಿತ ಪರಿಹಾರ ನೀಡುವಂತೆ ಜೊತೆಗೆ ಪರಿಹಾರ ಫಲಾನುಭವಿಗಳನ್ನು ಖಚಿತಪಡಿಸಿ ಕೊಳ್ಳುವಂತೆ ಹಾಗೆಯೇ ಬೆಳೆ ನಷ್ಟದ ತಕ್ಷಣದ ಮೌಲ್ಯಮಾಪನ ನಡೆಸಿ ರೈತರಿಗೆ ಸಮಯೋಚಿತ ಪರಿಹಾರ ಒದಗಿಸುವಂತೆ ಸೂಚನೆ ನೀಡಲಾಗಿದೆ.

ನೇಪಾಳದಲ್ಲಿ ಭಾರೀ ಮಳೆಯಾಗುತ್ತಿರುವ ಹಿನ್ನಲೆಯಲ್ಲಿ ಗಡಿ ಪ್ರದೇಶದ ನದಿಗಳಲ್ಲಿ ನೀರಿನ ಮಟ್ಟ ಏರಿಕೆಯಾಗುವ ಸಾಧ್ಯತೆ ಇರುವುದರಿಂದ ನೇಪಾಳ ಗಡಿಗೆ ಹೊಂದಿಕೊಂಡಿರುವ ಜಿಲ್ಲೆಗಳಲ್ಲೂ ವಿಶೇಷ ಕಟ್ಟೆಚ್ಚರ ವಹಿಸುವಂತೆ ಸೂಚಿಸಲಾಗಿದೆ.

ಅಗ್ನಿಶಾಮಕ ದಳ, ಪ್ರಾಂತೀಯ ಸಶಸ್ತ್ರ ಪೊಲೀಸ್ ಪಡೆ, ನಾಗರಿಕ ರಕ್ಷಣಾ ಸಿಬ್ಬಂದಿ, ಗೃಹ ರಕ್ಷಕ ದಳ ಹಾಗು ಆಪದಾ ಮಿತ್ರ ಸ್ವಯಂ ಸೇವಕರು ರಕ್ಷಣಾ ಕಾರ್ಯಾಚರಣೆಗಳಿಗೆ ಸಿದ್ಧರಾಗಿರುವಂತೆ ಸೂಚಿಸಲಾಗಿದೆ.

36 ಗಂಟೆಗಳ ಬಳಿಕ ಹವಾ ಮಾನ ಪರಿಸ್ಥಿತಿ ಸಹಜ ಸ್ಥಿತಿಗೆ ಮರಳುವ ನಿರೀಕ್ಷೆಯಿದೆ ಎಂದು ಪರಿಹಾರ ಆಯುಕ್ತರು ತಿಳಿಸಿದ್ದಾರೆ. ತುರ್ತು ನೆರವು ಅಗತ್ಯವಿರುವ ವರು 1070 ಪರಿಹಾರ ಸಹಾಯವಾಣಿಯನ್ನು ಸಂಪರ್ಕಿಸುವಂತೆ ಮನವಿ ಮಾಡಿದ್ದಾರೆ.

**ಅಖಿಲೇಶ್ ಯಾದವ್ ವ್ಯಂಗ್ಯ**

ಈ ನಡುವೆ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಗಂಗಾ ಎಕ್ಸ್ ಪ್ರೆಸ್ ವೇನಲ್ಲಿ ನೀರು ನಿಂತಿರುವುದನ್ನು ತೋರಿಸುವ ವಿಡಿಯೋವನ್ನು ಎಕ್ಸ್‌ನಲ್ಲಿ ಹಂಚಿಕೊಂಡಿದ್ದಾರೆ. ಅದಕ್ಕೆ ಗಂಗಾ ಎಕ್ಸ್‌ಪ್ರೆಸ್ ವೇ ಬದಲಾಗಿ ಗಂಗಾ ಎಕ್ಸ್‌ಪ್ರೆಸ್ ವಾಟರ್ ವೇ ಎಂದು ಮರುನಾಮಕರಣ ಮಾಡಬೇಕೆಂದು ವ್ಯಂಗ್ಯವಾಡಿದ್ದಾರೆ. ಗಂಗಾ ಎಕ್ಸ್‌ಪ್ರೆಸ್ ವೇನಲ್ಲಿ ಬಿಜೆಪಿ ಭ್ರಷ್ಟಾಚಾರದ ನದಿಗಳು ಹರಿಯುತ್ತಿವೆ. ಹೆಸರು ಬದಲಾಯಿಸುವವರಿಗೆ ಇದೊಂದು ಸುವರ್ಣಾವಕಾಶ. ಅದಕ್ಕೆ ಹೊಸ ಹೆಸರು ನೀಡಿ ಗಂಗಾ ಎಕ್ಸ್‌ಪ್ರೆಸ್ ವಾಟರ್‌ವೇ. ಸಂಪೂರ್ಣ ಖಂಡನೀಯವೆಂದು ಬರೆದಿದ್ದಾರೆ.

## ರಾಜಕುಮಾರ್ ನಗರದಲ್ಲಿ ಯುಜಿಡಿ ಕಾಮಗಾರಿಗೆ ಚಾಲನೆ



• ಪ್ರಜೋದಯ ವರದಿ

**ಹಾಸನ :** ಮಹಾನಗರ ಪಾಲಿಕೆ ಅನುದಾನದಡಿ ವಾರ್ಡ್ 16ರ ರಾಜಕುಮಾರ್ ನಗರ ಮುಖ್ಯ ರಸ್ತೆಯಲ್ಲಿ 50 ಲ.ರೂ. ವೆಚ್ಚದ ಯುಜಿಡಿ ಕಾಮಗಾರಿಗೆ ಭಾನುವಾರ ಶಾಸಕ ಹೆಚ್.ಪಿ.ಸ್ವರೂಪ್ ಅವರು ಚಾಲನೆ ನೀಡಿದರು.

ಒಳಚರಂಡಿ ಸಮಸ್ಯೆಯಿಂದ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ ಕುರಿತು ಹಲವು ದಿನಗಳಿಂದ ದೂರುಗಳು ಕೇಳಿ ಬಂದಿದ್ದವು. ಆ ಹಿನ್ನಲೆಯಲ್ಲಿ ಕಾಮಗಾರಿ ಕೈಗೊಂಡಿದ್ದು, ಆದಷ್ಟು ಬೇಗ ಗುಣಮಟ್ಟದ ಕಾಮಗಾರಿ ಮುಗಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಶಾಸಕರು ಹೇಳಿದರು. ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗು ಸ್ಥಳೀಯರು ಹಾಜರಿದ್ದರು.

## ಸ್ವಾರ್ಥದ ಬದುಕು ಶೂನ್ಯ ಸಂಪಾದನೆಗೆ ಸಮ

» ಮೊದಲನೇ ಪುಟದಿಂದ

ಸಮಾಜ ಇಬ್ಭಾಗವಾಗುತ್ತಿದೆ. ಸಮಾಜವನ್ನು ಒಂದಾಗಿ ತೆಗೆದುಕೊಂಡು ಹೋಗುವ ವಿಶಾಲ ಮನೋಭಾವನೆ ಇರುವ ವ್ಯಕ್ತಿಗಳ ಅಗತ್ಯ ಸಮಾಜಕ್ಕೆ ಇದೆ ಎಂದರು.

ಸಂಘಟನೆ ದೃಷ್ಟಿಯಿಂದಲೂ ಎಲ್ಲರೂ ಯೋಚಿಸಬೇಕಿದೆ. ವೀರಶೈವ- ಲಿಂಗಾಯತ ಸಮಾಜ ಒಂದಾದರೆ ಸರ್ಕಾರ ರಚಿಸುವ ಶಕ್ತಿ ಇದೆ. ಆದರೆ ಇದು ಸಾಧ್ಯವಾಗುತ್ತಿಲ್ಲ. ಹೊಸ ದೃಷ್ಟಿಕೋನವನ್ನು ಮುಂದಿಟ್ಟುಕೊಂಡು ಸಮಾಜವನ್ನು ಸದೃಢಗೊಳಿಸುವ ಕೆಲಸವಾಗಬೇಕಿದೆ ಎಂದರು.

ಅಖಿಲ ಭಾರತ ವೀರಶೈವ ಮಹಾಸಭಾ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ನಟರಾಜ್ ಸಾಗರನಹಳ್ಳಿ ಅವರು ಮಾತನಾಡಿ, ಆರ್ಥಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕವಾಗಿ ದುಸ್ಥಿತಿಗೆ ತಲುಪಿದ್ದ ಸಮಾಜದ ಜನರನ್ನು ಸಂಘಟಿಸಿ ಸಂಪನ್ಮೂಲ ಕಲ್ಪಿಸುವ ನಿಟ್ಟಿನಲ್ಲಿ ಆರಂಭವಾಗಿದ್ದೇ ಮಹಾಸಭಾ. ಮಹಾಸಭಾ ಸಂಸ್ಥೆ ಸ್ವತಂತ್ರಪೂರ್ವದ್ದಾಗಿದೆ. ಆದರೂ ಇಂದಿಗೂ ಸಂಘಟನೆ ಸಂಪೂರ್ಣಗೊಂಡಿಲ್ಲ. ಸಂಘಟನೆ ಕೇವಲ ಪದಾಧಿಕಾರಿಗಳ ಕೆಲಸವಲ್ಲ. ಸಮಾಜದ ಎಲ್ಲರೂ ಪಾಲ್ಗೊಳ್ಳಬೇಕು. ಪ್ರತಿ ಕುಟುಂಬದ ಒರ್ವ ವ್ಯಕ್ತಿ ಮಹಾಸಭಾದ ಸದಸ್ಯರಾಗಬೇಕು. ಅದರಿಂದ ಸಂಸ್ಥೆಯ ಸಂಘಟನೆ ಹೆಚ್ಚಲಿದೆ ಎಂದರು.

ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ತಾಲ್ಲೂಕು ಘಟಕದ ಅಧ್ಯಕ್ಷರಾಗಿ ಸುಳ್ಳಕ್ಕಿ ದಿನೇಶ್, ಉಪಾಧ್ಯಕ್ಷರಾಗಿ ಎನ್.ಸಿ.ರಾಮಚಂದ್ರ, ಹೇಮರಾಜಶೇಖರ್, ಪ್ರಧಾನ ಕಾರ್ಯ ದರ್ಶಿಯಾಗಿ ಚಂದ್ರಶೇಖರ್, ಮಹಿಳಾ ಘಟಕದ ಅಧ್ಯಕ್ಷರಾಗಿ ಚೈತ್ರಾ ನವೀನ್, ಉಪಾಧ್ಯಕ್ಷರಾಗಿ ಉಮಾದೇವಿ, ಗೀತಾ ಕುಮಾರ್, ಪ್ರಧಾನ ಕಾರ್ಯದರ್ಶಿಯಾಗಿ ದೀಪಾ ಪರಮೇಶ್‌ಆಯ್ಕೆಯಾಗಿದ್ದಾರೆ.

ವೇದಿಕೆಯಲ್ಲಿ ಜಿಲ್ಲಾಧ್ಯಕ್ಷ ಪರಮೇಶ್ ನವಿಲೆ, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ಚಂದ್ರಮತಿ, ಮಲೆನಾಡು ವೀರಶೈವ ಸಮಾಜದ ಅಧ್ಯಕ್ಷ ಮೂಗಲಿ ಧರ್ಮಣ್ಣ, ಮಹಿಳಾ ಘಟಕದ ಅಧ್ಯಕ್ಷೆ ಕೋಕಿಲಾ ದಿನೇಶ್, ಮುಖಂಡರಾದ ಬ್ಯಾಕರವಳ್ಳಿ ಜಯಣ್ಣ, ಓಂಕಾರ್‌ಮೂರ್ತಿ, ಮಳಲಿ ಸ್ವಾಮಿ, ಯಡೇಹಳ್ಳಿ ಮಂಜುನಾಥ್ ಇತರರಿದ್ದರು.

## ಭಯೋತ್ಪಾದನೆ ಸಮರ್ಥನೆಗೆ ಅವಕಾಶವಿಲ್ಲ

• ಪ್ರಜೋದಯ ವರದಿ

**ನವದೆಹಲಿ :** ಭಯೋತ್ಪಾದನೆಯನ್ನು ಸಮರ್ಥಿಸಲು ಹಾಗೂ ಅದರ ಪರಿಣಾಮಗಳಿಂದ ತಪ್ಪಿಸಿಕೊಳ್ಳಲು ಯಾರಿಗೂ ಅವಕಾಶವಿಲ್ಲವೆಂದು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಸ್ಪಷ್ಟ ಸಂದೇಶ ನೀಡಿದ್ದಾರೆ.

ಪಾಕಿಸ್ತಾನವನ್ನು ಸರಣಿ ಭಯೋತ್ಪಾದನೆಯ ಅನುಷ್ಠಾನಕವೆಂದು ಉಲ್ಲೇಖಿಸಿದ ಅವರು, ಭಯೋತ್ಪಾದನೆಗೆ ಬೆಂಬಲ ನೀಡುವವರು ತಮ್ಮ ಮಾರ್ಗವನ್ನು ಬದಲಿಸಬೇಕೆಂದ ಅವರು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಅವರು ವಿಶ್ವಸಂಸ್ಥೆಯಲ್ಲಿ ಮಾಡಿದ ಭಾಷಣಕ್ಕೆ ಪ್ರತಿಕ್ರಿಯಿಸಿ, ಪಾಕಿಸ್ತಾನವು ಸಭೆಯ ಮುಂದೆ ವಾಸ್ತವಾಂಶಗಳನ್ನು ತಪ್ಪಾಗಿ ನಿರೂಪಿಸಲು ಹಾಗೂ ಭಯೋತ್ಪಾದನೆಯನ್ನು ಸಹಜಗೊಳಿಸುವ ರೀತಿಯಲ್ಲಿ ವಾದ ಮಂಡಿಸಲು ಪ್ರಯತ್ನಿಸಿದೆ ಎಂದು ಆರೋಪಿಸಿದರು.

ಸರಣಿ ಭಯೋತ್ಪಾದನೆಯ ಅನುಷ್ಠಾನಕನೊಬ್ಬ ಸಭೆಯ ಮುಂದೆ ವಾಸ್ತವಾಂಶಗಳನ್ನು ತಪ್ಪಾಗಿ ನಿರೂಪಿಸಿದ. ಭಯೋತ್ಪಾದನೆಯನ್ನು ಸಾಮಾನ್ಯವೆಂದು ಬಿಂಬಿಸುವ ಹಾಗೂ ಅದರ ಪರಿಣಾಮಗಳಿಂದ ವಿನಾಯಿತಿ ಪಡೆಯುವ ಪ್ರಯತ್ನ ನಡೆಯಿತು. ಅದು ನಡೆಯಲು ಸಾಧ್ಯವಿಲ್ಲ. ಭಯೋತ್ಪಾದನೆಯ ವಿರುದ್ಧ ಭಾರತ ತನ್ನನ್ನು ತಾನು ರಕ್ಷಿಸಿಕೊಳ್ಳುವ ಹಕ್ಕನ್ನು ಹೊಂದಿದೆ ಎಂದು ಒತ್ತಿ ಹೇಳಿದರು.

▪ ವಿಶ್ವಸಂಸ್ಥೆಯಲ್ಲಿ ಪಾಕ್ ವಿರುದ್ಧ ಜೈಶಂಕರ್ ವಾಗ್ದಾಳಿ



ಭಯೋತ್ಪಾದನೆಯೊಂದಿಗೆ ಸ್ನೇಹ, ಸದ್ಭಾವನೆ ಮತ್ತು ಸಹಕಾರ ಒಂದೇ ಸಮಯದಲ್ಲಿ ಸಾಗಲು ಸಾಧ್ಯವಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಹಿಂದೆ ಮಾಡಿಕೊಂಡಿರುವ ಯಾವುದೇ ತಿಳುವಳಿಕೆಗಳನ್ನೂ ಮರುಪರಿಶೀಲಿಸಬೇಕಾಗುತ್ತದೆ ಭಯೋತ್ಪಾದನೆ ನಡೆಸುವವರೇ ತಮ್ಮ ಮಾರ್ಗವನ್ನು ಸರಿಪಡಿಸಿಕೊಳ್ಳಬೇಕೆಂದು ಸ್ಪಷ್ಟಪಡಿಸಿದರು.

ಮಧ್ಯಪ್ರಾಚ್ಯ ಮತ್ತು ಕೊಲ್ಲಿ ಪ್ರದೇಶದಲ್ಲಿ ಮುಂದುವರಿದಿರುವ ಸಂಘರ್ಷವು ಈಗಾಗಲೇ ಸಂಕಷ್ಟದಲ್ಲಿರುವ ಜಾಗತಿಕ ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸುತ್ತಿದೆ. ಸಂಘರ್ಷದಿಂದ ದೂರವಿರುವ ದೇಶಗಳೂ ಯಾವುದೇ ತಪ್ಪಿಲ್ಲದೆ ಅದರ ಪರಿಣಾಮಗಳನ್ನು ಎದುರಿಸುತ್ತಿವೆ. ಆದರೆ, ಹೆಚ್ಚು ಪರಿಣಾಮಕ್ಕೊಳಗಾಗುವವರಿಗೆ ತಮ್ಮ ಮಾತು ಹೇಳುವ ಅವಕಾಶವೇ ಕಡಿಮೆ ಎಂದು ಅವರು ಹೇಳಿದರು.

ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು ಜಾಗತಿಕ ಸವಾಲುಗಳನ್ನು ಎದುರಿಸಲು ತಮ್ಮಿಂದ ಸಾಧ್ಯವಾದ ಕೊಡುಗೆ ನೀಡಬೇಕು. ಅಂತರಾಷ್ಟ್ರೀಯ ಜಲ ಮಾರ್ಗಗಳಲ್ಲಿ ಸಂಚರಿಸುವ ವಾಣಿಜ್ಯ ಹಡಗುಗಳು ಹಾಗೂ ನಾವಿಕರ ಮೇಲೆ ನಡೆಯುತ್ತಿರುವ ದಾಳಿಗಳನ್ನು ತೀವ್ರವಾಗಿ ಖಂಡಿಸಿರುವ ಅವರು, ವಾಣಿಜ್ಯ ಸಾಗಣೆಯನ್ನು ಗುರಿಯಾಗಿಸುವುದು ಯಾವುದೇ ಕಾರಣಕ್ಕೂ ಒಪ್ಪಲಾಗದು ಎಂದರು.

ಎಲ್ಲಾ ಸಂಘರ್ಷ ಪಕ್ಷಗಳು ಸಂಯಮ ವಹಿಸಿ ಉದ್ವಿಗ್ನತೆ ಕಡಿಮೆ ಮಾಡಬೇಕು. ನಾಗರಿಕರ ಸುರಕ್ಷತೆ ಹಾಗೂ ಇಂಧನ ಮತ್ತು ವಾಣಿಜ್ಯದ ನಿರಂತರ ಹರಿವಿಗೆ ಅಡ್ಡಿಯಾಗದಂತೆ ನೋಡಿಕೊಳ್ಳಬೇಕು ಸಂಘರ್ಷದ ಪರಿಣಾಮ ಜಾಗತಿಕ ವ್ಯಾಪಾರ, ಇಂಧನ ಪೂರೈಕೆ ಹಾಗೂ ಪ್ರಮುಖ ಜಲ ಮಾರ್ಗಗಳಲ್ಲಿನ ವಾಣಿಜ್ಯ ಸಾಗಣೆಯ ಮೇಲೆ ಬೀರುತ್ತಿರುವ ಹಿನ್ನೆಲೆಯಲ್ಲಿ ಈ ವಿಚಾರವನ್ನು ಪ್ರಸ್ತಾಪಿಸಿದರು.

**ಉಕ್ರೇನ್ ಯುದ್ಧ ಅಂತ್ಯಗೊಳ್ಳಲಿ**

ಐದನೇ ವರ್ಷಕ್ಕೆ ಕಾಲಿಟ್ಟಿರುವ ಉಕ್ರೇನ್ ಸಂಘರ್ಷವೂ ಗಂಭೀರ ಕಳವಳದ ವಿಷಯವಾಗಿದೆ. ದೀರ್ಘ ಕಾಲದ ಯುದ್ಧಗಳಿಗೆ ಅಂತ್ಯ ಹಾಡಬೇಕೆಂಬ ಪ್ರಧಾನಿ ನರೇಂದ್ರ ಮೋದಿ ಅವರ ನಿಲುವನ್ನು ಉಲ್ಲೇಖಿಸಿದ ಅವರು, ಅಂತ್ಯವಿಲ್ಲದ ಯುದ್ಧ ಕೊನೆಗೊಂಡು, ಯುದ್ಧಕ್ಕೇ ಅಂತ್ಯ ಬರಬೇಕಾಗಿದೆ ಎಂಬ ಸಂದೇಶ ನೀಡಿದರು.

ಉಕ್ರೇನ್‌ನಲ್ಲಿ ಶಾಂತಿ ಸ್ಥಾಪನೆಗೆ ನಡೆಯುತ್ತಿರುವ ಪ್ರಯತ್ನಗಳಿಗೆ ಭಾರತ ಬೆಂಬಲ ನೀಡುತ್ತದೆ ಎಂದ ಅವರು, ಶಾಂತಿ ಪ್ರಕ್ರಿಯೆ ಮುಂದುವರಿಯುತ್ತಿರುವ ಸಂದರ್ಭದಲ್ಲಿ ನಾವಿಕರ ಸುರಕ್ಷತೆ, ಆಹಾರ ಧಾನ್ಯಗಳ ನಿರಂತರ ಪೂರೈಕೆ ಹಾಗೂ ಇಂಧನದ ಸುಗಮ ಹರಿವನ್ನು ಖಚಿತಪಡಿಸಿಕೊಳ್ಳುವುದು ಅಗತ್ಯವೆಂದು ಹೇಳಿದರು.

ಭಾರತದ ಅಭಿವೃದ್ಧಿಯನ್ನೂ ಜೈಶಂಕರ್ ವಿಶ್ವಸಂಸ್ಥೆಯ ವೇದಿಕೆಯಲ್ಲಿ ಪ್ರಸ್ತಾಪಿಸಿದರು. ಆರೋಗ್ಯ, ಪೌಷ್ಟಿಕತೆ, ಶಿಕ್ಷಣ, ಕುಡಿಯುವ ನೀರು, ವಿದ್ಯುತ್, ರಸ್ತೆ ಹಾಗೂ ವಸತಿ ಕ್ಷೇತ್ರಗಳಲ್ಲಿನ ಪ್ರಗತಿ ದೇಶದ ಜನರ ಜೀವನಮಟ್ಟವನ್ನು ಸುಧಾರಿಸಿದೆ. ವಿಶ್ವದ ಒಟ್ಟು ಜನಸಂಖ್ಯೆಯ ಸುಮಾರು ಆರನೇ ಒಂದು ಭಾಗದ ಜನರನ್ನು ಒಳಗೊಂಡಿರುವ ಭಾರತದ ಅಭಿವೃದ್ಧಿಯ ಅನುಭವವು ಸುಸ್ಥಿರ ಅಭಿವೃದ್ಧಿ ಗುರಿಗಳ ಜಾಗತಿಕ ಪ್ರಗತಿಗೂ ಕೊಡುಗೆ ನೀಡುತ್ತಿದೆ ಎಂದು ಅವರು ವಿವರಿಸಿದರು.

## ಸಚಿನ್, ಅಜರುದ್ದೀನ್ ದಾಖಲೆ ಮುರಿದ ಕೊಹ್ಲಿ

• ಪ್ರಜೋದಯ ವರದಿ

**ತಿರುವನಂತಪುರ:** ವೆಸ್ಟ್ ಇಂಡೀಸ್ ವಿರುದ್ಧದ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಅರ್ಧಶತಕ ಸಿಡಿಸಿರುವ ವಿರಾಟ್ ಕೊಹ್ಲಿ, ಈ ಮಾದರಿಯಲ್ಲಿ 15,000 ರನ್ ಪೂರೈಸಿದ 2ನೇ ಬ್ಯಾಟರ್ ಎಂಬ ಸಾಧನೆ ಮಾಡಿದ್ದಾರೆ. ಈ ಪಂದ್ಯಕ್ಕೂ ಮುನ್ನ ಕೊಹ್ಲಿ ಖಾತೆಯಲ್ಲಿ 14,941 ರನ್ ಇದ್ದವು.

ಕಿಂಗ್ ಕೊಹ್ಲಿ 315 ಪಂದ್ಯಗಳ 303 ಇನಿಂಗ್ಸ್‌ಗಳಲ್ಲೇ 15 ಸಹಸ್ರ ರನ್ ಗಡಿ ದಾಟಿದ್ದಾರೆ. ಇದರೊಂದಿಗೆ ವೇಗವಾಗಿ ಇಷ್ಟು ರನ್ ಗಳಿಸಿದ ಬ್ಯಾಟರ್ ಎಂಬ ಹೆಗ್ಗಳಿಕೆಗೆ ಭಾಜನರಾಗಿದ್ದಾರೆ. ಕ್ರಿಕೆಟ್ ದೇವರು ಖ್ಯಾತಿಯ ಸಚಿನ್ ತೆಂಡೂಲ್ಕರ್ ಅವರು ಈ ಸಾಧನೆ ಮಾಡಲು 377ನೇ ಇನಿಂಗ್ಸ್‌ಗಳನ್ನು ತೆಗೆದುಕೊಂಡಿದ್ದರು.

ವೆಸ್ಟ್ ಇಂಡೀಸ್ ವಿರುದ್ಧದ ಮೊದಲ ಏಕದಿನ ಪಂದ್ಯದಲ್ಲಿ ಮೈದಾನಕ್ಕಿಳಿದ ಕೊಹ್ಲಿ ಭಾರತದ ಮಾಜಿ ನಾಯಕ ಮೊಹಮ್ಮದ್ ಅಜರುದ್ದೀನ್ ಅವರ 28 ವರ್ಷಗಳ ಹಳೆಯ ದಾಖಲೆಯನ್ನು ಮುರಿದಿದ್ದಾರೆ. ಕೊಹ್ಲಿ ಈಗ ವೆಸ್ಟ್ ಇಂಡೀಸ್ ವಿರುದ್ಧ ಭಾರತದ ಪರ ಅತಿ ಹೆಚ್ಚು (44) ಏಕದಿನ ಪಂದ್ಯಗಳನ್ನು ಆಡಿದ ಆಟಗಾರ ಎನಿಸಿಕೊಂಡಿದ್ದಾರೆ. 3 ಪಂದ್ಯಗಳ ಏಕದಿನ ಸರಣಿಯ ಮೊದಲ ಪಂದ್ಯದಲ್ಲಿ ಕೊಹ್ಲಿ ಸಾಧನೆ ಮಾಡಿದ್ದಾರೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019